ಶ್ರೀ ಎಸ್. ಗೋಪಾಲಗೌಡ—ಇದು ಅಷ್ಟು ದೊಡ್ಡ ವಿಷಯ ಅಲ್ಲ ಸ್ವಾಮಿ!

Mr. SPEAKER: What is the point?

†ಶ್ರೀ ಎಸ್. ಗೋಪಾಲಗೌಡ— 1-3-63ನೇ ತಾರೀಖಿನ ದಿವಸ ಸಭೆಯ ನಡವಳಿಕೆ ನಡೆದಂಥ ಸಂಬಂಧದಲ್ಲಿ ತಾವು ಹಣಕಾಸಿನ ಮಂತ್ರಿಗಳು ಬಜೆಟ್ ಮಂಡನೆ ಮಾಡಬೇಕೆಂದು ಕೇಳಿದಾಗ ವಿರೋಧ ಮಾಡುತ್ತೇನೆ ಎಂದು ನಾನು ಹೇಳಿದೆ. ತಾವು ಪ್ರಶ್ನೆ ಹಾಕಿದಾಗ ನಾನು ಶೋಕ ಪ್ರದರ್ಶನಕ್ಕೆ ವಿರೋಧ ಮಾಡುತ್ತೇನೆ ಅನ್ನುವ ಅಭಿಪ್ರಾಯ ಬರುವ ರೀತಿಯಲ್ಲಿ ಉತ್ತರ ಬಂದಿದೆ. "ಹೌದು" "ಹೌದು" ಎಂಬುದಾಗಿ ಇಲ್ಲಿ ಬಂದಿದೆ. ಅದು ಶೋಕಪ್ರದರ್ಶನಕ್ಕೆ ಇರಲಿಲ್ಲ. ನನ್ನ ವಿರೋಧ ಇದ್ದದ್ದು ಶೋಕಪತ್ರ ಮಂಡಿಸಿದ ನಂತರ ನಾವು ಸಭೆಯನ್ನು ಮುಂದುವರಿಸಬಾರದು ಎನ್ನುವುದು ನನ್ನ ಪ್ರಾರ್ಥನೆ ಆಗಿತ್ತು. ತಾವು ಹೇಳಿದ ತಕ್ಷಣ ಹಣಕಾಸಿನ ಮಂತ್ರಿಗಳು ಎದ್ದು ನಿಂತರು, ಅಂದಮಾತ್ರಕ್ಕೆ......

Mr. SPEAKER: The Hon. Member should have raised this point then.

ಶ್ರೀ ಎಸ್. ಗೋಪಾಲಗೌಡ--ನಾನು ಆಗಲೇ ವಿರೋಧ ಮಾಡಿದ್ದೇನೆ. ಮಾಡುವುದಕ್ಕೂ ಕೂಡ ತಾವು ನನಗೆ ಅವಕಾಶ ಕೊಡುತ್ತೀರಿ ಎಂದು ಹೇಳಿದ ಪ್ರಕಾರ ಕೊಟ್ಟಿರಿ. ನಾನು ರೂಲಿಂಗ್ ಕೊಡಬೇಕೆಂದು ಕೇಳಿಕೊಂಡೆ. ತಾವು ಇನ್ನೂ ಏನಾದರೂ ಇದೆಯೇ, ಇದೆಯೇ ಅಂತ ಕೇಳಿದಿರಿ ಮತ್ತು ಸಭೆಯನ್ನು adjourn ಮಾಡಿದಿರಿ, ಅದ್ದರಿಂದ ಈ ವಿಷಯದಲ್ಲಿ ನಾನು ಇಷ್ಟೇ ಹೇಳಬೇಕಾಗಿರುವುದ್, ಸಭೆಯನ್ನು ಮುಂದುವರಿಸಬಾರದು ಎಂಬುದೇ ನನ್ನ ಸ್ಪಷ್ಟ ಅಭಿಪ್ರಾಯವಾಗಿತ್ತು.

Mr. SPEAKER: The Hon. Member made it very clear. I said that the budget had been presented and therefore there was nothing more. It cannot be undone. These are the very words, I used. Then I adjourned the house.

ಶ್ರೀ ವಿ. ಎಂ. ದೇವ್ (ಗುಬ್ಬಿ)—ಒಂದು ವಿಷಯ ತಾವು ವಿವರಣೆ ಕೊಟ್ಟಿದ್ದು ಬಹಳ ಸರಿಯಾಗಿತ್ತು. ಆದರೆ ಕೆಲವು ಸೂಚನೆಗಳನ್ನು ಇಲ್ಲಿ ಹೇಳುವುದಕ್ಕೆ ಪ್ರಯತ್ನಪಡಬಾರದು ಎಂದು ಹೇಳಿದಿರಿ. ಹಾಗೆ ಹೇಳಬಹುದಾಗಿತ್ತೇ ಎಂದು ನನಗೆ ತೋಚುತ್ತದೆ. ಎರಡನೆಯದು......

Mr. SPEAKER: Whatever I told Sri Gopal Gowda applies equally to my friend also. If he wants to raise any matter, he must meet me and give me notice. If I find it proper, I will permit him.

Sri V. M. DEO: The Chair's statement was comprehensive. Yet the leaders of various parties in the opposition had not been taken into confidence.

Mr SPEAKER: I know of only one party. The rest of the parties are not recognised.

Sri V. M. DEO: It is a sentimental question.

Mr. SPEAKER: What does the Hon. Member expect me to do? does he what that I should expunge what has been recorded?

BUDGET ESTIMATES FOR 1963-64

General Discussion

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ)—ಸಭಾಪತಿಯವರೇ, 1963-64ನೇ ಸಾಲಿನ ಹಣದ ಮುನ್ನೂಚನೆಯ ಪಟ್ಟಿಯನ್ನು ಹಣಕಾಸಿನ ಸಚಿವರಾದ ಶ್ರೀಮಾನ್ ಜತ್ತಿಯವರು ಈ ಸಭೆಯ ಮುಂದೆ ಮಂಡಿಸುತ್ತ ದೀರ್ಘವಾದ ಭಾಷಣವನ್ನು ಮಾಡಿದ್ದಾರೆ. ಅವರ ಭಾಷಣವನ್ನು ನೋಡಿದ ತಕ್ಷಣ ಮೊದಲನೇ ವಾಕ್ಯದಲ್ಲಿ ಅವರು ಬಹಳ ಜೋರಾಗಿ ಹೇಳಿದ್ದಾರೆ. difficult financial position.........

SRI B HUTCHE GOWDA.—I rise to a point of order. According to the agenda we are to take up the Appropriation Bill first.

MR. SPEAKER.—I have not permitted the matter to come up because the Governor's permission has not been intimated to me. I must satisfy myself and then allow it.

SRI S. M. KRISHNA.—Then how did it find a place in the agenda ?

MR. SPEAKER.—It has been included in anticipation there is nothing wrong.

ಶ್ರೀ ಎಸ್. ಶಿವಪ್ಪ.-ಸಭಾಪತಿಯವರೇ, ನಮ್ಮ ಹಣಕಾಸಿನ ಸಚಿವರಾದ ಶ್ರೀ ಬಿ ಡಿ. ಜತ್ತಿಯವರು ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಬಹಳ ಅಪಾಯ ತರಸ್ಥಿತಿಯಲ್ಲಿದೆ ಎಂತ ಹೇಳಿದ್ದಾರೆ. ಈ ಆಯವ್ಯಯದ ಮುಂಗಡ ಪತ್ರವನ್ನು ಈ ಸಭೆಯ ಮುಂದೆ ಮಂಡಿಸತಕ್ಕ ಕಾಲದಲ್ಲಿ ಹೀಗೆ ಹೇಳ ತಕ್ಕದ್ದು ಸ್ವಾಭಾವಿಕವಾಗಿ ಬಂದು ಹೋಗಿದೆ. ಆದರೆ ಅದರ ಜೊತೆಗೆ ಈಗ ದೇಶದಲ್ಲಿ ತುರ್ತುಪರಿ ಸ್ಥಿತಿಯೊಂದು ಬೇರೆ ಒದಗಿದೆ. ಆದರೆ ಆ ತುರ್ತುಪರಿಸ್ಥಿಗೆ ತಕ್ಕಹಾಗೆ ಇದರಲ್ಲಿ ಯಾವ ವಿಧವಾಗಿ ಅದನ್ನು ಎದುರಿಸಬೇಕೆಂಬ ಬಗ್ಗೆ ಯಾವ ಒಂದು ಧೀರೋದಾತ್ತಧೋರಣೆಯಾಗಲೀ ಧೀರೋದಾತ್ತ ನೀತಿಯಾಗಲೀ ಈ ಪ್ರಣಾಳಿಕೆಯಲ್ಲಿದ್ದಂತೆ ಕಾಣುತ್ತಿಲ್ಲ. ಆದುದರಿಂದ ನಾವು ಏನು ಅಪೇಕ್ಷೆ ಮಾಡು ತ್ತಿದ್ದೇವೋ ಆ ಧೀರೋದಾತ್ತವಾಣಿಗಳೊಂದೂ ಇದರಲ್ಲಿಲ್ಲ. ಆದುದರಿಂದ ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಅವರು ಮಾಡಿರತಕ್ಕ ಭಾಷಣವೇನಿದೆ ಅದರಲ್ಲಿ ಉಪ್ಪೂ ಇಲ್ಲ. ಕಾರವೂ ಇಲ್ಲ; ಹೀಗೆ ಬಹಳ ಸಪ್ಪೆಯಾಗಿದೆ. ಅವರ ಭಾಷಣವು ಅಷ್ಟು ಸಪ್ಪೆಯಾಗಿದ್ದರೂ ಬಹಳ ಚೆನ್ನಾಗಿ ಬರೆದು ಅಂಕೀ ಅಂಶಗಳನ್ನೆಲ್ಲಾ ಜೋಡಿಸಿ ಈ ಸಭೆಯ ಮುಂದೆ ಮಂಡಿಸಿದ್ದಾರೆ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟ ಪರಿಸ್ಥಿತಿಯಲ್ಲಿದೆ ಎಂತ ಅಷ್ಟನ್ನೇ ಹೇಳಿಬಿಟ್ಟಿದ್ದಾರೆ. ಆದರೆ ಅದರ ಜೊತೆಗೆ ಒದಗಿರತಕ್ಕ ತುರ್ತುಪರಿಸ್ಥಿತಿಯನ್ನು ಅಳಗೊಂಡು ಈ ಎರಡನ್ನೂ ಹೀಗೆ ಪರಿಹಾರಮಾಡಬೇಕು ಎಂಬುದರ ವಿಚಾರವಾಗಿ ಅವರ ಭಾಷಣದಲ್ಲಿ ಏನೂ ನಮೂದಾಗಿಲ್ಲ. ಆದರೆ ಈಗ ಒದಗಿರತಕ್ಕ ತುರ್ತುಪರಿಸ್ಥಿತಿಯನ್ನು ಮತ್ತು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಒಟ್ಟಾಗಿ ಸೇರಿಸಿ ಏನು ಹೇಳಿದ್ದಾರೆಂದರೆ ಜನರ ಮೇಲೆ ಹೆಚ್ಚು ತೆರಿಗೆಗಳನ್ನೂ ಕಂದಾಯವನ್ನೂ ಹಾಕಬೇ ಕೆಂದೂ, ಅದನ್ನು ವಸೂಲ್ಮಾಡಬೇಕೆಂದೂ ಹೀಗೆ ಈ ಎರಡು ವಿಚಾರಗಳನ್ನು ಮಾತ್ರ ಹೇಳಿದ್ದಾರೆ. ಇಷ್ಟುವಿನಾ ಇದರಲ್ಲಿ ಇನ್ನು ಯಾವ ಧೀರೋದಾತ್ತ ನೀತಿಯೂ ಇಲ್ಲ. ನಮ್ಮ ದೇಶಕ್ಕೆ ತುರ್ತುಪರಿಸ್ಥಿ ಉಂಟಾಗಿದೆ ಎಂಬುದೇನೋ ನಿಜ. ನಮ್ಮ ದೇಶದಲ್ಲಿ ಇಲ್ಲಿಗೆ ಕಳೆದ 15 ವರ್ಷಗಳ ಆಡಳಿತಾವಧಿ ಯಲ್ಲಿ ಹೀಗೆ ವರ್ಷಂಪ್ರತಿ ಮುನ್ನೂಚನೆ ಪತ್ರಗಳನ್ನು ಮಂಡಿಸುವಾಗ ಈ ವರ್ಷದ ಭಾಷಣದಲ್ಲಿ ಏನನ್ನು ಹೇಳಿದ್ದಾರೋ ಅದನ್ನೇ ಹೇಳಿಕೊಂಡು ಬಂದಿದ್ದಾರೆ. ನಮ್ಮ ದೇಶ ಬಹಳ ಗಂಡಾಂತರ ಪರಿಸ್ಥಿತಿಯಲ್ಲಿದೆ ಎಂಬ ವಿಚಾರವನ್ನು ಹೇಳಿ ಮುಂಗಡ ಪತ್ರದಲ್ಲೂ ಹೀಗೇ ಮಂಡಿಸಿದ್ದಾರೆ. ಆದರೆ

[MR. Deputy Speker in the Chair]

ಈ ವರ್ಷ ಯಾವ ಹೊಸ ತೆರಿಗೆಗಳನ್ನು ಜನರ ಮೇಲೆ ಹಾಕುವುದಿಲ್ಲ ಎಂತ ನಮ್ಮ ಹಣಕಾಸಿನ ಸಚಿವರು, ಅಪ್ಪಣೆ ಕೊಡಿಸಿದರು, ಆದರೆ ಅವರ ಅಪ್ಪಣೆ ಕೊಡಿಸಿರತಕ್ಕ ಭಾಷಣವನ್ನು ಓದಿದರೆ ಅದರಲ್ಲಿ ಈ ತೆರಿಗೆ ವಿಚಾರವನ್ನು ಬಹಳ ಮೊಗುಂ ಆಗಿ ಹೇಳಿದ್ದಾರೆ. ಆದರೆ ಈಗ ನಮ್ಮ ರಾಜ್ಯಕ್ಕೆ ಉಂಟಾಗಿರತಕ್ಕ 40 ಲಕ್ಷ ರೂ.ಗಳ ಖೋತಾ ಹಣವನ್ನು ತುಂಬಿಕೊಳ್ಳಲು ಮಾರಾಟ ತೆರಿಗೆಯನ್ನು ಮಾರ್ಪಾಡು ಮಾಡಲಾಗುತ್ತದೆ. ಮತ್ತು ನೀರು ಕಂದಾಯವನ್ನು ಹೊಂದಾವಣಿಕೆ ರೂಪದಲ್ಲಿ ಸ್ವಲ್ಪ ಜಾಸ್ತಿಮಾಡುತ್ತೇವೆ ಎಂದು ಮೊಗುಂ ಆಗಿ ಹೇಳಿದ್ದಾರೆ. ಆದರೆ ಈ ದಿವಸ ನಮ್ಮ ಮಂತ್ರಿ ಗಳೇನು ಜನರ ಮೇಲೆ ಹೊಸ ತೆರಿಗೆಗಳನ್ನು ಹಾಕುವುದಿಲ್ಲ ಎಂತ ಹೇಳಿದ್ದಾರೋ ಅದು ಕೇವಲ ಅವರ ಒಂದು ಪ್ರಚಾರಕ್ಕಾಗಿ ಹಾಗೆ ಹೇಳಿದ್ದಾರೆಂದು ಕಾಣುತ್ತದೆ. ಆದರೆ ಅವರ ಭಾಷಣದಲ್ಲಿ ಅಡಕವಾಗಿ ರತಕ್ಕ ವಿಚಾರವೇ ಬೇರೆ ಇದೆ. ಈ ದಿವಸ ನಮ್ಮ ಈ ಆಯವ್ಯಯದ ಪಟ್ಟಿಯನ್ನು ನೋಡಿದರೆ ಈ ಸರ್ಕಾರದವರು ಈ ದೇಶದ ಆಡಳಿತವನ್ನು 15 ವರ್ಷಗಳ ಕಾಲ ತಮ್ಮ ಕೈಲಿಟ್ಟುಕೊಂಡು ಏನು ದೇಶಕ್ಕೆ ಅನುಕೂಲಮಾಡಿದ್ದಾರೆ ಎಂಬುದನ್ನು ಕೇಳುವಂತಿಲ್ಲದಿದ್ದರೂ, ದೇಶಕ್ಕೆ ತೆರಿಗೆ ಕೊಡತಕ್ಕ ಜನರ ನಿಲುವು ಮಾತ್ರ ಎಷ್ಟರ ಮಟ್ಟಿಗೆ ಆ ತೆರಿಗೆಯ ಹೊರೆಯನ್ನು ಹೆಚ್ಚಿಸಿಕೊಂಡು ಬರುತ್ತಿದ್ದಾರೆಂ ಬುದು ಇದರಲ್ಲಿ ಚೆನ್ನಾಗಿ ಕಾಣುತ್ತಿದೆ. ಈ ದಿವಸ ನಮ್ಮ ರಾಜ್ಯದ ವರಮಾನವು 99.12 ಕೋಟಿಗೆ ಏರಿದೆ. ಆದರೆ ರಾಜ್ಯದ ಈ ವರಮಾನವು ಏಕ ಪ್ರಕಾರವಾಗಿ 1956 ರಿಂದಲೂ ಏರುತ್ತಲೇ ಬಂದಿದೆ. ಈ ದಿವಸ ನಮ್ಮ ದೇಶಕ್ಕೆ ಡೈರೆಕ್ಟ್ ಟ್ಯಾಕ್ಸ್‌ಗಳಿಂದ ಬರತಕ್ಕ ಆದಾಯ 17 ಕೋಟಿ 4 ಲಕ್ಷ ರೂ. ಗಳಿದೆ. 1957-58ರಲ್ಲಿ ಇದು 10 ಕೋಟಿ 39 ಲಕ್ಷವಿತ್ತು. ಸ್ಟೇಟಿನವರು ಹಾಕತಕ್ಕ ಟ್ಯಾಕ್ಸ್ ಈ ದಿವಸ 25 ಕೋಟಿ 63 ಲಕ್ಷಕ್ಕೆ ಏರಿದೆ. ಇದು 1957-58ರಲ್ಲಿ 11 ಕೋಟಿ 36 ಲಕ್ಷವಿತ್ತು. ಹೀಗೆ

ಕೇಂದ್ರದಿಂದ ನಮಗೆ ಬರುತ್ತಿದ್ದ ಟ್ರ್ಯಾಕ್ಸ್‌ಗಳ ಕೋತಾ ಹಣ 1957-58 ರಲ್ಲಿ 2½ ಕೋಟಿ ರೂ. ಗಳಿತ್ತು. ಈ ದಿವಸ ಅದು 6½ ಕೋಟಿಗೇರಿದೆ. ಹೀಗೆ ಜನತೆ ದೇಶಕ್ಕೆ ತೆರುತ್ತಿರುವ ಕಂದಾಯ, ಸುಂಕಗಳಿಂದ 1957–58 ರಲ್ಲಿ ಸರ್ಕಾರಕ್ಕೆ 24 ಕೋಟಿ ಬರುತ್ತಿದ್ದು ಈ ದಿವಸ 49½ ಕೋಟಿಗೆ ಏರಿರುತ್ತದೆ. ಹೀಗೆ ಸರ್ಕಾರದವರು ಒಂದೇ ಸಮನಾಗಿ ಕಳೆದ ಆರು ವರ್ಷಗಳಿಂದಲೂ ತೆರಿಗೆಗಳನ್ನು ಏರಿಸುತ್ತ 1957–58ರಲ್ಲಿ 24 ಕೋಟಿ ಇದ್ದ ತೆರಿಗೆಯನ್ನು ಈ ದಿವಸ 50 ಕೋಟಿಗೇರಿಸಿದ್ದಾರೆ, ಆದರೆ ಹೀಗೆ ದೇಶದ ವರಮಾನ ಜಾಸ್ತಿಯಾಗುತ್ತಿರುವುದಕ್ಕೆ ಸರ್ಕಾರದವರು ತಮ್ಮ ಭುಜ ತಟ್ಟಿಕೊಳ್ಳಬೇಕಾಗಿಲ್ಲ. ಈ ವಿಚಾರದಲ್ಲಿ ನಾವು ಸರ್ಕಾರಕ್ಕೆ ತೆರಿಗೆ ತೆರತಕ್ಕ ಜನತೆಯೇನಿದೆ ಅವರನ್ನು ಶ್ಲಾಘನೆ ಮಾಡಬೇಕು. ಅವರ ನೀತಿಯನ್ನು ನಾವು ಹೊಗಳಬೇಕು. ಈ ದಿವಸ ಅವರು ಒಂದಕ್ಕೆ ಎರಡರಷ್ಟು ತೆರಿಗೆಯನ್ನು ತೆರುತ್ತಿದ್ದಾರೆ. ಇಷ್ಟು ಅವರು ದೇಶಕ್ಕೆ ತ್ಯಾಗಮಾಡಲು ಸಿದ್ಧರಾಗಿರುವುದರಿಂದ ನಾವು ಅವರನ್ನು ಎಷ್ಟು ಶ್ಲಾಘನೆ ಮಾಡಿದರೂ ತೀರದಾಗಿದೆ. ಆದರೆ ಹಾಗೆ ಜನಗಳಿಂದ ವಸೂಲ್ಮಾಡಿದ ಹಣವನ್ನು ಈ ಸರ್ಕಾರದವರು ಯಾವ ರೀತಿ ಖರ್ಚುಮಾಡಿದ್ದಾರೆ? ಈ ತೆಗೆ ಹಣದ ವಿಚಾರ ಒಂದು ಕಡೆಗೆ ಇರಲಿ. ಇವರು ಹೊರಗಡೆಯಿಂದ ಸಾಲಮಾಡಿ ತಂದಿರತಕ್ಕ ಹಣವೆಷ್ಟು? ಅದನ್ನೀಗ ವಿಚಾರ ಮಾಡೋಣ. ಈ ಹೊತ್ತು ನಮ್ಮ ಸರ್ಕಾರ ದೇಶದ ಜನರನ್ನು ಎಷ್ಟು ಸಾಲಕ್ಕೆ ಈಡುಮಾಡಿದೆ ಎಂದರೆ ಅದು 209 ಕೋಟಿ ರೂ. ಗಳು. ದೇಶದಲ್ಲಿರತಕ್ಕ ಜನ ಈ ದಿವಸ ಇಷ್ಟು ಸಾಲಕ್ಕೆ ತಲೆ ಕೊಡಬೇಕಾಗಿದೆ. ಆದರೆ ಸರ್ಕಾರದವರು ಈ ಬಂಡವಾಳವನ್ನೆಲ್ಲ ಭಾರಿ ಭಾರಿ ಯೋಜನೆಗಳು ಅಂದರೆ ತುಂಗಭದ್ರ ಅಣೆಕಟ್ಟು, ಶರಾವತಿ ಇತ್ಯಾದಿಗಳ ಮೇಲೆ ಹಾಕಿದ್ದೇವೆ ಎಂದು ಹೇಳಬಹುದು, ಆ ಹಣ ಈ ಆಸ್ತಿಗಳ ಮೇಲೆ ಸುಭದ್ರವಾಗಿದೆ ಎಂತ ಅವರು ಹೇಳುತ್ತಾರೆ. ಆದರೆ ನಮಗೆ ನಾವು ಹಾಕಿರತಕ್ಕ ಬಂಡವಾಳಕ್ಕೆ ತಕ್ಕಹಾಗೆ ನಮಗೆ ಈ ಯೋಜನೆಗಳಿಂದ ವರಮಾನ ಬರುತ್ತಿಲ್ಲ. ಆ ರಿಟರ್ನ್ ಬರುವ ವಿಚಾರ ಹಾಗಿರಲಿ, ನಮಗೆ ಇವುಗಳಿಂದ ಆ ಬಡ್ಡಿಗೂ ಸಹ ಸರಿಯಾದ ವರಮಾನ ಬರುತ್ತಿಲ್ಲ. ನಾವು ಈ ದಿವಸ ಮಾಡಿರತಕ್ಕ 257 ಕೋಟಿ ರೂ. ಗಳಿಗೆ ಸುಮಾರು 8½ ಕೋಟಿ ರೂ. ಗಳನ್ನು ಬಡ್ಡಿ ರೂಪದಲ್ಲಿ ತೆರಬೇಕಾಗಿದೆ. ಮತ್ತು ವೇರ್ ಅಂಡ್ ಟೇರ್ ಎಲ್ಲ ಸೇರಿ 11 ಕೋಟಿ ರೂ. ಗಳನ್ನು ನಾವು ಈ ವರ್ಷ ತೆರಬೇಕಾಗಿದೆ. ಈ ಹಣ ಮುಂದಿನ ಸಾಲಿನಲ್ಲಿ ಇನ್ನೂ ಜಾಸ್ತಿಆಗಬಹುದು. ಈಗಲೇ ನಾವು ಕೊಡಬೇಕಾದ ಬಡ್ಡಿಯೊಂದೇ 11 ಕೋಟಿಗೇರಿದೆ. ಆದರೆ ಮಾನ್ಯ ಮಂತ್ರಿಗಳು ತಿಳಿಸಿರುವಂತೆ ನಾವು ಈ ಸಾಲಿನಲ್ಲಿ ಬಡ್ಡಿಗೋಸ್ಕರವಾಗಿಯೇ 16 ಕೋಟಿ 95 ಲಕ್ಷ ರೂ. ಗಳನ್ನು ತೆರಬೇಕಾಗಿದೆ. ಈಗಿನ ಬಡ್ಜೆಟ್ಟಿನಲ್ಲಿ ನಮ್ಮ ಸಾಲ ತೀರ್ವೆಗಾಗಿ ಈ ಹಣ ಕೊಡಬೇಕಾಗಿದೆ. ಆದರೆ ನಮ್ಮ ಸರ್ಕಾರ ಹೀಗೆಲ್ಲ ಸಾಲ ಮಾಡುತ್ತಿರುವ ಮತ್ತು ಸಾಲಕ್ಕೆ ಬಡ್ಡಿ ತೆರುತ್ತಿರುವುದನ್ನು ನೋಡಿದರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಯಾವರೀತಿಯಿದೆ ಎಂಬುದು ಎಲ್ಲರಿಗೂ ಗೊತ್ತಾಗುವುದು. ಅಂತೂ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟು ಹೋಗಿದೆ. ಹೀಗೆ ನಮ್ಮ ಸರ್ಕಾರ ಹೊರಗಡೆಯಿಂದ ಸಾಲದ ರೂಪದಲ್ಲಿ ತಂದಿರುವ 210 ಕೋಟಿ ರೂ. ಗಳಿಗೆ ಏನು ಪ್ರತಿಫಲ ಬರುತ್ತಿದೆ. ಈ ಬಂಡವಾಳವನ್ನು ಹೇಗೆ ಖರ್ಚು ಮಾಡಿದ್ದಾರೆ, ಆ ಖರ್ಚು ವೆಚ್ಚಗಳು ಶಾಸ್ತ್ರೀಯವಾಗಿವೆಯೋ, ಯಾವ ಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ, ಅವುಗಳಿಂದ ನಮಗೇನು ಪ್ರತಿಫಲ ಬರುತ್ತಿದೆ, ಎಂಬುದನ್ನು ಆಲೋಚನೆ ಮಾಡಿದಲ್ಲಿ ನಮ್ಮ ಶರಾವತಿ ವ್ಯಾಲಿ ಕೆಲಸವಿನ್ನೂ ಮುಗಿದಿಲ್ಲ. ಆ ಮುಗಿದಿರುವ ತುಂಗಭದ್ರ ಯೋಜನೆಯಿಂದ ಎಷ್ಟು ಪ್ರತಿಫಲ ಬರಬೇಕೋ ಅಷ್ಟು ಬರುತ್ತಿಲ್ಲ. ಹೀಗೆ ನಾವು ಯಾವ ಯಾವ ಯೋಜನೆಗೆ ದುಡ್ಡು ಹಾಕಿದ್ದೇವೆ ಅವುಗಳಿಂದ ನಮಗೆ ಮೂರುಕಾಸಿನ ಪ್ರಯೋಜನವೂ ಇಲ್ಲ. ನಮ್ಮ ಸರ್ಕಾರದಲ್ಲಿ ಹಣವನ್ನು ಮಿತವ್ಯಯದಿಂದ ಖರ್ಚು ಮಾಡಬೇಕೆಂಬ ನೀತಿ ಮೊದಲಿಂದಲೂ ಇಲ್ಲ. ಇದೇ ವಿಚಾರದಲ್ಲಿ ಆ ಮೂರನೆಯ ಫೈನಾನ್ಸ್ ಕಮಿಷನವರು ತಮ್ಮ ವರದಿಯಲ್ಲಿ ಮೈಸೂರು ಸರ್ಕಾರದವರು ಹಣವನ್ನು ಬಳಸತಕ್ಕ ರೀತಿ ನೀತಿ ಹೇಗಿದೆ ಎನ್ನುವುದರ ಬಗ್ಗೆ ಹೀಗೆ ಹೇಳಿದ್ದಾರೆ :—

"The increased need of assistance is not entirely a concomitant of planning; in many cases it is additionally attributable to ineffective expenditure control and laxity in fuller mobilisation of available resources."

ನಿಮ್ಮಲ್ಲಿ ineffective expenditure control ಎಂದರೆ, ಖರ್ಚಿನ ಮೇಲೆ ಸಾಕಾದಷ್ಟು ಹಿಡಿತವಿಲ್ಲ, ಖರ್ಚನ್ನು ಹಿಡಿತದಿಂದ ಮಾಡತಕ್ಕ ಶಕ್ತಿಯಿಲ್ಲ, ಎಂದು ಫೈನಾನ್ಸ್ ಕಮಿಷನವರು ಅವರ ವರದಿಯಲ್ಲಿ ಹೇಳಿದ್ದಾರೆ. ಅವರು ಇನ್ನೂ ಮುಂದೆ ಹೋಗಿ ಹೇಳುತ್ತಾರೆ!

"We are unable to assess the relative efficiency and performance due to inadequacy and even unreliability of the statistical and other material ....."

Finance Commission says this.

ಎಂದರೆ ಅಂಕಿಅಂಶಗಳಿಲ್ಲವೆಂದು ಹೇಳುತ್ತಾರೆ.

" Unreliability of statistical and other material. "

ಎಂದರೆ ನೀವು ಮಾಡುತ್ತಿರುವ ಕೆಲಸದ ಮೇಲೆ ಎಷ್ಟರ ಮಟ್ಟಿನ ಹಿಡಿತವಿದೆ ಎನ್ನುವುದನ್ನು ಫೈನಾನ್ಸ್ ಕಮಿಷನವರು ಬಹಳ ಚೆನ್ನಾಗಿ ಬರೆದಿದ್ದಾರೆ.

" Negligence develops in the procurement and supplies and execution of projects and cost control."

ಬೆಲೆ ನಿಗದಿ ಮಾಡುವುದರಲ್ಲಿ ಹತೋಟಿಯಿಲ್ಲ; cost control ಕೂಡ ಇಲ್ಲವೆಂದು ಬಹಳ ಬಿಗಿಯಾಗಿ ಹೇಳಿದ್ದಾರೆ, ಇನ್ನೂ ಮುಂದೆ ಹೋಗಿ ಅವರು ಹೇಳುತ್ತಾರೆ.

" ......both tax levies and expenditure programmes you should introduce a measure of uniformity. It should ensure the optimum mobilisation of resources and introduce a greater amount of responsibility in the expenditure control. "

ಎಂದು ಹೇಳುತ್ತಾರೆ. ಖರ್ಚುಮಾಡುವುದರಲ್ಲಿ ಹಿಡಿತವಿಲ್ಲವೆಂದು ಒತ್ತಿಒತ್ತಿ ಹೇಳುತ್ತಾರೆ. ಇಷ್ಟಾದರೂ ಕೂಡ ನಮ್ಮ ದೇಶದಲ್ಲಿರತಕ್ಕ ಪ್ರಾಜೆಕ್ಟ್‌ಗಳ ಮೇಲ್ವಿಚಾರಣೆಗೆ ಒಂದು ಕಮಿಟಿ ಮಾಡಿಯೋ, ಒಂದು ಕಮಿಷನ್ ಮಾಡಿಯೋ ಯಾವ ರೀತಿ ಹಣ ವ್ಯಯವಾಗಿದೆ, ಆ ವ್ಯಯಕ್ಕೆ ತಕ್ಕಂತೆ ಎಷ್ಟು ಮಟ್ಟಿನ ಕೆಲಸವಾಗಿದೆ ಎಂದು ತಿಳಿಯಲು ಒಂದು evaluation ಕಮಿಟಿಯನ್ನು ಮಾಡಿಲ್ಲವೆಂದು ಹೇಳಿದ್ದಾರೆ. ನಿಮ್ಮ ಮೇಲೆ ಸವಾರಿ ಮಾಡುವವರನ್ನು ನಿಜವಾಗಿಯೂ ನೀವು ಒಪ್ಪುವುದಿಲ್ಲ. ಲಂಗು ಲಗಾಮಿಲ್ಲದ ಕುದುರೆಯೋಪಾದಿಯಲ್ಲಿ ಹೋಗಬೇಕೇ ಹೊರತು ಲಗಾಮು ಹಾಕುತ್ತೇವೆಂದು ಯಾರು ಹೇಳಿದರೂ ಅದಕ್ಕೆ ಒಪ್ಪುವುದಿಲ್ಲ.

" In this connection, we have mentioned earlier that we considered that it would be useful if the States were to set up an apparatus to draw up their own development plans which should undertake a review at suitable intervals of the progress of the execution of projects and evaluate the expenditure on non-plan programmes. "

ಒಂದು Evaluation Committee ಮಾಡಿ ಪ್ರಾಜೆಕ್ಟ್‌ಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ, ಯಾವ ರೀತಿ ನಿರೀಕ್ಷೆಗೆ ತಕ್ಕ ಕಾರ್ಯನಡೆಯುತ್ತಿದೆ ಎನ್ನುವುದನ್ನು ತಿಳಿಯಲು ಒಂದು ಲಗಾಮು ರೀತಿಯಲ್ಲಿರಬೇಕು ಎಂದು ಪ್ಲಾನಿಂಗ್ ಕಮಿಷನ್ ಅವರು ಹೇಳಿದ್ದಾರೆ. ನಾವೂ ಇದನ್ನು ಅನೇಕ ಸಲ ಹೇಳಿದ್ದೇವೆ. ಶರಾವತಿ ಯೋಜನೆಗೆ ಸಿಕ್ಕಾಬಟ್ಟೆ ಬಹಳ ದುಡ್ಡು ಖರ್ಚಾಗಿದೆ, ಅದರ ಮೇಲೆ ನಿಯಂತ್ರಣವಿಡಬೇಕು ಎಂದರೆ ಮುಖ್ಯ ಮಂತ್ರಿಗಳು ಮೊನ್ನೆ ಬಹಳ ಹಗುರವಾಗಿ ಹೇಳಿದರು, ನಮಗೆ ಬಿಡಿ, ನಾವು ಮಾಡುತ್ತೇವೆ ಎಂದು. ನಿಮ್ಮಲ್ಲಿ ಆತ್ಮಪರೀಕ್ಷೆ ಮಾಡಿಕೊಳ್ಳುವ ಶಕ್ತಿಯಿಲ್ಲ, ಖರ್ಚು ಮಾಡುವುದರಲ್ಲಿ ನಿಯಂತ್ರಣವಿರಬೇಕು, ಅದಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಕಮಾಡಿ ಎಂದರೆ ಅದನ್ನು ಬಹಳ ಹಗುರವಾಗಿ ತಳ್ಳಿಹಾಕುತ್ತಿದ್ದಾರೆ. ಇದರಿಂದ ದೇಶದಲ್ಲಿ ನಾವು ಕೋಟಿ, ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿದರೂ ಕೂಡ ಅದರಿಂದ ಪ್ರಯೋಜನವಾಗುತ್ತಿಲ್ಲ. ದೇಶದಲ್ಲಿ ಆರ್ಥಿಕ ನೀತಿಯ ಶೂನ್ಯತೆಗಳಿಂದ ಬಹಳ ಕಷ್ಟ ಒದಗಿದೆ. ನಾನು ಮೊದಲೇ ಹೇಳಿದ ಹಾಗೆ ಇಷ್ಟು ಕೋಟಿ ರೂಪಾಯಿಗಳನ್ನು ನಿಮ್ಮ ಕೈಗೆ ಕೊಟ್ಟರೆ ಆದರಿಂದ ಪ್ರಯೋಜನ ಬರುತ್ತದೆ, ನಮ್ಮ ದೇಶದಲ್ಲಿ ಬಹಳ ಕಾಮಗಾರಿಗಳಾಗಿ ಸಂಪತ್ತನ್ನು ಹೆಚ್ಚಿಸತಕ್ಕ ಶಕ್ತಿ ಬರುತ್ತದೆ ಎಂದು ತಿಳಿದುಕೊಂಡು, ಎಷ್ಟೇ ಕಷ್ಟ ಬಂದರೂ ತೆರಿಗೆಗಳನ್ನು ಕೊಡುವುದಕ್ಕೆ ಜನತೆ ಒಪ್ಪಿತು. ತುಂಗಭದ್ರ, ಭದ್ರ, ಶರಾವತಿ ಇತ್ಯಾದಿ ಪ್ರಾಜೆಕ್ಟ್‌ಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ ಎಂದು ಸ್ವಲ್ಪ ವಿಮರ್ಶೆ ಮಾಡಿ ನೋಡಿ. ಭದ್ರ ಪ್ರಾಜೆಕ್ಟ್, ಶರಾವತಿ ಪ್ರಾಜೆಕ್ಟ್, ಇವುಗಳಲ್ಲಿ ಕೆಲಸ ಮಾಡುತ್ತಿರುವ ರೀತಿಯನ್ನು ನೋಡಿದರೆ, ಬಹುಶಃ ಮೈಸೂರು ದೇಶದಲ್ಲಿಲ್ಲದೆ ಬೇರೆ ಕಡೆ ಆಗಿದ್ದರೆ ನಿಮ್ಮನ್ನು ಏನು ಮಾಡುತ್ತಿದ್ದರೋ ಗೊತ್ತಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಗಡೀಪಾರು ಮಾಡುತ್ತಿದ್ದರು.

ಶ್ರೀ ಎಸ್. ಶಿವಪ್ಪ.—ನಮ್ಮ ಹತ್ತಿರ ಏನು ಬೇಕಾದರೂ ಮಾಡಿ ಬಚಾಯಿಸಿಕೊಳ್ಳಬಹುದು ಎಂದು ಮಾಡುತ್ತಿದ್ದೀರಿ.

ಹಿಂದೆ ಇದೇ ಸಮಯದಲ್ಲಿ ಮಂತ್ರಿಗಳ ಮಕ್ಕಳೊಬ್ಬರು ಕಂಟ್ರಾಕ್ಟರಾಗಿದ್ದರೆಂದು ಆ ಬಗ್ಗೆಯಲ್ಲಿ enquiry ಆಗಬೇಕೆಂದು ಒತ್ತಾಯ ಮಾಡಿದೆವು. ಈಗ ನನಗೆ ಬಂದಿರುವ ವರ್ತಮಾನದ

ಪ್ರಕಾರ ಇವೊತ್ತು ಕೂಡ ಭದ್ರಾ ಪ್ರಾಜೆಕ್ಟ್‌ನಲ್ಲಿ, ಶರಾವತಿ ಪ್ರಾಜೆಕ್ಟ್‌ನಲ್ಲಿ ಕೆಲವು ಮಂತ್ರಿಗಳು ಮಾಜಿ ಮಂತ್ರಿಗಳು, ಅವರ ಹತ್ತಿರದ ಸಂಬಂಧಿಗಳೂ ಕಂಟ್ರಾಕ್ಟರುಗಳಾಗಿದ್ದಾರೆ, ಮತ್ತು ತಮ್ಮ ಮಕ್ಕಳ ಹೆಸರಿನಲ್ಲಿ ಕಂಟ್ರಾಕ್ಟ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇಂಥವರಿಗೆ ಕೆಲಸವನ್ನು ಕೊಡುವುದರಿಂದ ಇಂಜಿನಿಯರುಗಳು ಕಟ್ಟುನಿಟ್ಟಾಗಿ ಕೆಲಸ ಮಾಡುತ್ತಾರೆಯೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಅವರು ಇಂದು ಇಂಜಿನಿಯರುಗಳನ್ನು ಹೆದರಿಸಿ ಟೆಂಡರ್ ಇಲ್ಲದೆಯೇ ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಬೇಕಾದರೆ ಉದಾಹರಣೆಯನ್ನು ಕೊಡುತ್ತೇನೆ. ಭದ್ರಾ ಜಲಾಶಯದಿಂದ ಕಾಲುವೆಯನ್ನು ತೋಡತಕ್ಕ ಕೆಲಸವನ್ನು ಟೆಂಡರುಗಳಿಲ್ಲದೆ ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದಾರೆ. ಅವರು ಯಾರು ಎನ್ನುವುದು ವಿಮರ್ಶೆ ಮಾಡಬೇಕು. ಬಹಳ ಪ್ರಭಾವವಿರತಕ್ಕ ವ್ಯಕ್ತಿಗಳು ಇದರಲ್ಲಿದ್ದಾರೆ. ಹೀಗೆ ಪ್ರಭಾವಕ್ಕೆ ಒಳಗಾಗಿ ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನು ದೇಶದಲ್ಲಿ ನಿರ್ಮಾಣ ಮಾಡುತ್ತಿದ್ದೀರಿ. ಕೋಟಿಗಟ್ಟಲೆ ಹಣ ವ್ಯಯವಾಗತಕ್ಕ ಪ್ರಾಜೆಕ್ಟ್‌ಗಳು ಕಾರ್ಯರೂಪಕ್ಕೆ ಬರುತ್ತಿವೆ. ಈ ಯೋಜನೆಗಳಿಂದ ಪ್ರಯೋಜನವನ್ನು ನಿರೀಕ್ಷೆ ಮಾಡುವುದು ಸಾಧ್ಯವೇ ಎಂದು ಕೇಳುತ್ತಿದ್ದೇನೆ. ಇದನ್ನು ಬಹಿರಂಗವಾಗಿ ವಿಚಾರಣೆ ಮಾಡಬೇಕು. ಇಂಥ ಕೆಲಸಗಳಲ್ಲಿ ಸಂಬಂಧಪಟ್ಟ ವ್ಯಕ್ತಿ ಯಾರೇ ಆಗಿರಲಿ ಅವರಿಂದ ಸರ್ಕಾರದ ದುಡ್ಡು ಸರಿಯಾಗಿ ಖರ್ಚಾಗದೆ ಬಹಳ ಹಾನಿಯಾಗುತ್ತದೆ ಮತ್ತು ದೇಶದ ಆರ್ಥಿಕ ನೀತಿ ದಿವಾಳಿಯಾಗುವುದರಲ್ಲಿ ಖಂಡಿತವಾಗಿ ಅನುಮಾನವಿಲ್ಲ. ಇದರಲ್ಲಿ ಕಟ್ಟುನಿಟ್ಟಾದ ನೀತಿಯನ್ನು ಆರ್ಥಿಕ ಸಚಿವರು ಮಾಡಬೇಕೆಂದು ಈ ಸಭೆಯ ಮುಖಾಂತರ ಕೇಳುತ್ತೇನೆ. ದಯವಿಟ್ಟು ಈ ವಿಚಾರದಲ್ಲಿ ಮಾನ್ಯ ಆರ್ಥಿಕ ಸಚಿವರು ವಿಮರ್ಶೆ ಮಾಡಿ ಅಂಥ ಸಂದರ್ಭಗಳಿದ್ದಾಗ ಯಾವ ವ್ಯಕ್ತಿಯೇ ಆಗಿರಲಿ, ನಿರ್ದಾಕ್ಷಿಣ್ಯವಾಗಿ ವರ್ತಿಸಿ ಬಹಳ ಬಿಗಿಯಾಗಿರಬೇಕು ಎಂದು ಹೇಳುತ್ತೇನೆ.

ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳೇನಿವೆ, ಅವುಗಳ ಮೇಲ್ವಿಚಾರಣೆಗೆ ಒಂದು ತಜ್ಞರ ಕಮಿಟಿಯನ್ನು ಮಾಡಿದರೆ ಖಂಡಿತವಾಗಿ ಬಹಳ ಉಪಕಾರವಾಗುತ್ತದೆ. ಖರ್ಚಿನಲ್ಲಿ ಮಿತವ್ಯಯ ಕೂಡ ಆಗುತ್ತದೆಂದು ಈ ಸಭೆಯ ಮುಖಾಂತರ ಸಿಫಾರಸು ಮಾಡಲು ಕೋರುತ್ತೇನೆ.

General economic situation ವಿಚಾರವಾಗಿ ಮಾನ್ಯ ಆರ್ಥಿಕ ಸಚಿವರು ಮೊದಲನೆಯ ಪುಟದಲ್ಲಿ ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ. ನಾವು ಇಷ್ಟೊಂದು ಹಣವನ್ನು ಖರ್ಚುಮಾಡಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡಿದ್ದರ ಮುಖಾಂತರವಾಗಿ ಆಹಾರ ಪರಿಸ್ಥಿತಿ ಬಹಳ ಉತ್ತಮವಾಗಿದೆ ಎಂದು ಹೇಳಿದ್ದಾರೆ. ಅವರು ಕೊಟ್ಟಿರತಕ್ಕ ಅಂಕಿ ಅಂಶಗಳಿಂದ ಅಕ್ಕಿ, ರಾಗಿ ಇತ್ಯಾದಿ ದವಸ ಧಾನ್ಯಗಳ ವಿಚಾರ ತಿಳಿಯುತ್ತದೆ. ಇದರಲ್ಲಿ ನೀವು ಭುಜತಟ್ಟಿಕೊಳ್ಳತಕ್ಕ ವಿಷಯ ಖಂಡಿತವಾಗಿಯೂ ಇಲ್ಲವೆಂದು ಹೇಳುತ್ತೇನೆ. ದೇಶದಲ್ಲಿ ಮಳೆ ಬೆಳೆ ಚೆನ್ನಾಗಿ ಆದರೆ ರೈತ ಚೆನ್ನಾಗಿ ಭೂಮಿಯನ್ನು ಉತ್ತು ವ್ಯವಸಾಯ ಮಾಡಿದರೆ ದೇಶದಲ್ಲಿ ಆಹಾರ ಉತ್ಪತ್ತಿ ತನ್ನಷ್ಟಕ್ಕೆ ತಾನೇ ಆಗುತ್ತದೆ. ಇಲ್ಲದೆ ಹೋದರೆ ಏನೂ ಸಾಧನೆಯಾಗುವುದಿಲ್ಲ. 1959ನೆಯ ಇಸವಿಯಲ್ಲಿ ಶ್ರೀಮಾನ್ ಟಿ. ಮರಿಯಪ್ಪನವರು ಈ ಸಭೆಯ ಮುಂದೆ ಆಯವ್ಯಯದ ಅಂದಾಜುಗಳನ್ನು ಮಂಡಿಸುತ್ತ ಮಾಡಿದ ಭಾಷಣದಲ್ಲಿ ಹೀಗೆ ತಿಳಿಸಿದ್ದಾರೆ--

"It will be seen from these figures that large areas are dependent upon the vagories of monsoon."

ಅವರು ನಿಜವಾಗಿ ಒಪ್ಪಿಕೊಂಡಿದ್ದಾರೆ. ಅವರು ಸತ್ಯಸಂಗತಿ ಹೇಳಿರುವುದನ್ನು ಒಪ್ಪಿಕೊಳ್ಳಬೇಕಾಗಿದೆ. ಸಜ್ಜೆ (ಬಜರ) ತೆಗೆದುಕೊಂಡರೆ 1960-61ನೇ ಇಸವಿಯಲ್ಲಿ 12,22,000 ಎಕರೆಗಳಲ್ಲಿ 1,24,000 ಟನ್ ಉತ್ಪತ್ತಿಯಾಗಿದೆ. ಅದೇ 1956-57ರಲ್ಲಿ ನೋಡಿದರೆ 12,73,000 ಎಕರೆಯಲ್ಲಿ 1,42,000 ಟನ್ ಎಂದರೆ ಸುಮಾರು 20 ಸಾವಿರ ಟನ್‌ನಷ್ಟು ಹೆಚ್ಚಾಗಿ ಆರು ವರ್ಷಗಳ ಹಿಂದೆ ಬೆಳೆದಿದ್ದಾರೆ. ಎಂದರೆ ಇವೊತ್ತು ಜಾಸ್ತಿಯಾಗುವುದಕ್ಕೆ ಬದಲು ಕಡಮೆಯಾಗಿದೆ. ಅದೇ ರೀತಿ ರಾಗಿ ವಿಷಯ ತೆಗೆದುಕೊಂಡರೆ, 1956-57ರಲ್ಲಿ 19,14,000 ಎಕರೆಗಳಲ್ಲಿ 7,43,000 ಟನ್ ಬೆಳೆದಿದ್ದಾರೆ. 1960-61ರಲ್ಲಿ 21,76,000 ಎಕರೆಗಳಲ್ಲಿ 6,52,000 ಟನ್ ಬೆಳೆದಿದ್ದಾರೆ. ಎರಡು ಲಕ್ಷ ಎಕರೆ ಜಾಸ್ತಿಯಾಗಿದ್ದರೂ ಕೂಡ ಉತ್ಪತ್ತಿ ಮೊದಲಿಗಿಂತ ಒಂದು ಲಕ್ಷ ಕಡಮೆಯಾಯಿತು.

2-30 P. M.

ಆದ್ದರಿಂದ ನಾನು ಹೇಳತಕ್ಕದ್ದು ಇಲ್ಲಿ ಕೊಟ್ಟಿರುವ ಆರ್ಥಿಕ ಪ್ರವೃತ್ತಿಯ ಅಂಕಿಗಳಂತೆ 1960-61ರಲ್ಲಿ ಕಡ್ಲೆಕಾಯಿಯನ್ನು ನೋಡುವುದಾದರೆ 21 ಲಕ್ಷ ಎಕರೆಗಳಷ್ಟು ಇದ್ದು ಅದರಿಂದ ಉತ್ಪಾದನೆ 7,91,431 ಟನ್ನುಗಳಷ್ಟು ಎಂದಿದ್ದದ್ದು, 1961-62ರಲ್ಲಿ 21 ಲಕ್ಷ ಚಿಲ್ಲರೆ ಎಕರೆಗಳಿದ್ದರೂ ಉತ್ಪಾದನೆ ಮಾತ್ರ 4,98,757 ಟನ್ನುಗಳಷ್ಟು ಎಂದು ಉತ್ಪತ್ತಿಯಲ್ಲಿ ಇಳಿದಿದೆ. ಇದರಿಂದ ನೀವು ಬಹಳ ಮಾಡಿಬಿಟ್ಟಿದ್ದೇವೆ ಎನ್ನುವುದು ಇಲ್ಲಿರುವ ಅಂಕಿ ಅಂಶಗಳೇ ತೋರಿಸುತ್ತವೆ. ಏನಾದರೂ ಉತ್ಪತ್ತಿ ಜಾಸ್ತಿಯಾಗುತ್ತಿದ್ದಾಗ, ಅಥವಾ ಕಡಿಮೆಯಾಗುತ್ತಿದ್ದರೆ ಅದು ಮಳೆಯ ಒಂದು ಪ್ರಭಾವದಿಂದ ರೈತನು ಶಕ್ತಿ ಮೀರಿ ದುಡಿದು ನಮಗೆಲ್ಲಾ ಅನ್ನವನ್ನು ಬೆಳೆದು ಕೊಡುತ್ತಿದ್ದಾನೆ. ಹೀಗಿರುವಾಗ ಇದರಲ್ಲಿ

ಒಂದು ಲಕ್ಷ ಟನ್ನಿನಷ್ಟು ಹೆಚ್ಚಾಗಿ ಬೆಳೆದಿದ್ದೇವೆ ಎಂದು ಹೇಳುವುದು ಕೇವಲ ಉತ್ಪ್ರೇಕ್ಷೆಯೇ ವಿನಾ ಮತ್ತೇನಿಲ್ಲ. ಹಿಂದೆ ಇದ್ದ ನಮ್ಮ ಆರ್ಥಿಕ ಮಂತ್ರಿಗಳು ಏನು ಹೇಳುತ್ತಿದ್ದರೋ ಅದನ್ನೇ ಇವರೂ ಕೂಡ ಈವೊತ್ತಿನ ದಿವಸ ನಮ್ಮ ಮುಂದೆ ಇಟ್ಟಿದ್ದಾರೆ. ಇವೊತ್ತಿನ ದಿವಸ ಸಾಲ ಸೋಲ ಮಾಡಿ ಏಕ ಪ್ರಕಾರವಾಗಿ ದೇಶದ ಆಹಾರದ ಕಣಜವನ್ನು ತುಂಬತಕ್ಕವನು ರೈತ. ನೀವು ಎಷ್ಟೋ ತೆರಿಗೆಯನ್ನು ಮತ್ತು ಕಂದಾಯದ ಹೊರೆಯನ್ನು ಅವನ ಮೇಲೆ ಹೊರಿಸಿದರೂ ನಿಜವಾಗಿಯೂ ಕೂಡ ಉತ್ಸಾಹ ಪೂರಿತವಾಗಿ ತನ್ನ ಒಂದು ನಿಷ್ಠೆಯಿಂದ ನಮ್ಮ ದೇಶಕ್ಕೆ ಅನ್ನ ಕೊಡುವ ಕಾರ್ಯದಲ್ಲಿ ಮಳೆರಾಯನಿಂದ ಬರುವ ಮಳೆಯನ್ನು ಅನುಸರಿಸಿಕೊಂಡು ದೇಶದಲ್ಲಿ ಅನ್ನದ ಉತ್ಪತ್ತಿಯನ್ನು ಸ್ಫೂರ್ತಿಯಿಂದ ಮಾಡುತ್ತಿದ್ದಾನೆ. ಅಂತಹವನಿಗೆ ಗೊಬ್ಬರ ಮತ್ತು ಬೀಜಗಳನ್ನು ಇಲಾಖೆಯವರು ಉತ್ತಮ ರೀತಿಯಲ್ಲಿ ಸಹಾಯ ಮಾಡುತ್ತಿದ್ದೇವೆಂದು ಬರೀ ಮಾತಿನಲ್ಲಿ ಹೇಳುತ್ತಿದ್ದಾರೆಯೇ ಹೊರತು ಕಾರ್ಯತಃ ಅದು ಆಗಿಲ್ಲ ಎಂದು ನಾನು ತಮಗೆ ಹೇಳಬೇಕಾಗಿದೆ. ಏಕೆಂದರೆ ಸುಮಾರು ಈಗ ಕೊಟ್ಟಿರುವ ಹತ್ತು ವರ್ಷಗಳ ಅಂಕಿ ಅಂಶಗಳನ್ನು ನೋಡಿದರೆ ಆಹಾರದ ಉತ್ಪತ್ತಿ ಏಕಪ್ರಕಾರ (stand-still) ಒಂದು ಸಾರಿ ಹೆಚ್ಚಾಗುತ್ತದೆ, ಒಂದು ಸಾರಿ ಕಡಿಮೆಯಾಗುತ್ತದೆ. ಆದರೆ ಯಾವ ರೀತಿಯಾದ ಕ್ರಾಂತಿಕಾರಕವಾದ ಬದಲಾವಣೆ ಆಹಾರದ ಉತ್ಪತ್ತಿಯಲ್ಲಾಗಲೀ, ಕೈಗಾರಿಕೆಯ ಉತ್ಪತ್ತಿಯಲ್ಲಾಗಲೀ ಆಗಿಲ್ಲ. ಆ ರೀತಿ ಯಾವ ಒಂದು ಕ್ರಾಂತಿಕಾರಕವಾದ ಬದಲಾವಣೆಯನ್ನು ಮಾಡಲು ಪ್ರಯತ್ನವನ್ನೂ ಮಾಡಿಲ್ಲ. ಆಹಾರದ ವಿಚಾರದಲ್ಲೇ ಆಗಲೀ ಕೈಗಾರಿಕೆಯಲ್ಲೇ ಆಗಲಿ ಏನೂ ಆಗಿಲ್ಲ ಎನ್ನುವುದನ್ನೂ ತಾವು ಯೋಚನೆ ಮಾಡುವುದು ಅಗತ್ಯ. ತಾವೇ ಈಗ ನಡೆಸತಕ್ಕ ಸರಕಾರಿ ಕಾರ್ಖಾನೆಗಳಲ್ಲಿ ಎಷ್ಟುಮಟ್ಟಿಗೆ ಕೆಲಸ ನಡೆಯುತ್ತಿದೆ ಎನ್ನುವುದನ್ನು ನೋಡಬಹುದು. 1961ರಿಂದಲೂ ನೀವು ನಿಮ್ಮ ಸರಕಾರದ ನೇತೃತ್ವದಲ್ಲಿ ನಡೆಸುತ್ತಿರುವ ಕೈಗಾರಿಕೆಗಳು ಎಷ್ಟು ಮಟ್ಟಿಗೆ ಕೆಲಸ ಮಾಡುತ್ತವೆ ಎನ್ನುವುದು ನಿಮ್ಮ ಸರಕಾರದ ನೇತೃತ್ವದಲ್ಲಿ ನೇಮಕವಾದ ಆಡಿಟ್ ರಿಪೋರ್ಟಿನಿಂದಲೇ ಗೊತ್ತಾಗುತ್ತದೆ. ಇದರ ಬಗ್ಗೆ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ಹೇಳತಕ್ಕದ್ದು ಸರಕಾರದ ಕಡೆಯಿಂದ ನಡೆಸ ತಕ್ಕ ಕೈಗಾರಿಕೆಗಳ ಸ್ಥಿತಿ ಎಷ್ಟು ಮಟ್ಟಿಗೆ ಬೆಳೆಯುತ್ತಿದೆ· ಎಷ್ಟುಮಟ್ಟಿಗೆ ಕೈಗಾರಿಕಾ ಸಂಪತ್ತು ಹೆಚ್ಚಬೇಕು, ಎಷ್ಟು ಮಟ್ಟಿಗೆ ಕಾರ್ಯಗತ ಮಾಡಬೇಕು ಎನ್ನುವುದರ ಕಡೆಗೆ ತಾವು ಯೋಚನೆ ಮಾಡಬೇಕು. ಇವೊತ್ತು ಸಮತಾವಾದದ ಆಧಾರದ ಮೇಲೆ ದೇಶವನ್ನು ಕಟ್ಟಬೇಕು ಎಂದು ಹೇಳುವುದನ್ನು ಒಪ್ಪುತ್ತೇನೆ. ಆ ತತ್ವದ ಮೇಲೆ ರಚನೆ ಮಾಡಬೇಕೆಂದು ಹೇಳುತ್ತಾ ನಿಮ್ಮ ನೀತಿ ಯಲ್ಲಿ ಒಂದು ಹೆಜ್ಜೆಯಾದರೂ ಅಡಿ ಇಟ್ಟು ಮುಂದೆ ಹೋಗಿದ್ದೀರಾ ಎಂದು ನೋಡಿದರೆ ಈಗಿರತಕ್ಕ ಕೈಗಾರಿಕಾ ನೀತಿಯಿಂದ ಬಹಳ ಚೆನ್ನಾಗಿ ಗೊತ್ತಾಗುತ್ತಿದೆ, ನ್ಯಾಯವಾಗಿರುವುದನ್ನು ಅನ್ಯಾಯ ವಾಗಿ ಬದಲಾವಣೆ ಮಾಡುತ್ತಿದ್ದೀರಿ. ನಿಮ್ಮ ಇಂಡಸ್ಟ್ರಿ ಇಲಾಖೆಯಲ್ಲಿರುವ ಡೈರೆಕ್ಟರುಗಳು, ಅಸಿಸ್ಟೆಂಟು ಡೈರೆಕ್ಟರುಗಳು ಮಾಡುತ್ತಿರುವ ಕೆಲಸಗಳನ್ನು ತನಿಖೆ ಮಾಡಿ ತಪ್ಪಿಗೆ ಸಿಕ್ಕಿದವರಲ್ಲಿ ಯಾರನ್ನಾದರೂ ಜೈಲಿಗೆ ಕಳುಹಿಸಿದ್ದಿದ್ದರೆ ಆಗ ನಾನು ಸರಕಾರದ ಕಾರ್ಯವನ್ನು ಒಪ್ಪುತ್ತಿದ್ದೆ. ಅವರು ಮಾಡತಕ್ಕ ಅನ್ಯಾಯ ಅವರು ತೆಗೆದುಕೊಳ್ಳತಕ್ಕ ಲಂಚ ಇವನ್ನೆಲ್ಲಾ ನೋಡಿದರೆ, ನಿಜ ವಾಗಿಯೂ ಕೈಗಾರಿಕೆಯ ನೀತಿ, ಮಟ್ಟ ಎಷ್ಟು ಅವನತಿಗಿಳಿದಿದೆ ಎನ್ನುವುದು ಗೊತ್ತಾಗುತ್ತದೆ. ಯಾರಾದರೂ ಹೊಸದಾಗಿ ಕೈಗಾರಿಕೆಯನ್ನು ತೆರೆಯಬೇಕು ಎಂದು ಸರಕಾರಕ್ಕೆ ಸಹಾಯಕ್ಕಾಗಿ ಬಂದರೆ ಅವನಿಗೆ ಸಹಾಯವೂ ಇಲ್ಲ, ಸಹಕಾರವೂ ಇಲ್ಲ. ಇವರುಗಳೇ ಬ್ಲಾಕ್‌ಮಾರ್ಕೆಟ್ಟು, ಲಂಚಕ್ಕೆ ಒಳಗಾಗಿರುತ್ತಾರೆ. ಇಂತಹವರಿಂದ ಬೇರೆ ಜನಕ್ಕೇನು ಸಿಗುತ್ತದೆ. ಏನೂ ಸಹಾಯ ಸಿಕ್ಕುವುದಿಲ್ಲ.

†SRI B. D. JATTI (Minister for Finance).—Sir, may I request the Hon. Leader of the opposition to give some facts and figurets and mention some of the industries which have not got benefis from the Government.. It is no use making vague statements and accusatons ?

SRI S. SIVAPPA.—Sir, I will give names if the Minister wants Because I do not want to say in public, I will give the names in writing Please enquire and see that the concerned officers are punished. Then, I will congratulate the Minister.

†SRI B. D. JATTI.—Sir, I am interested in knowing the suggestions for the development of industries and I am also interested in the development of Government owned industries. If the Hon'ble Member is also interested in this he may give facts and figures. If there is any mistake

anywhere on the part of the Government, we will be glad to rectify it. Otherwise, there is no use, making vague statements here.

ಶ್ರೀ ಎಸ್. ಶಿವಪ್ಪ.—ನಮ್ಮ ಆರ್ಥಿಕ ಸಚಿವರು ಏನು ಭರವಸೆ ಕೊಡುತ್ತಾರೋ ಅದನ್ನು ಮಾಡುತ್ತಾರೆ. ಅದರಂತೆ ವಿಚಾರಣೆ ಮಾಡಲಿ ನೋಡೋಣ. ಅದರಂತೆ ದೇಶದ ಅಭಿವೃದ್ಧಿಯನ್ನು ಮಾಡಿದರೆ ಮುಂದಿನ ಸಭೆಯಲ್ಲಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನೀವು ತಿಳಿದು ಕೊಂಡಿರುವಂತೆ ಇಲ್ಲಿರುವವರು ಸುಲಭವಾದ ಜನರಲ್ಲ. ಪ್ರಭಾವವುಳ್ಳ ದೊಡ್ಡ ಜನರು ನಿಮ್ಮ ಮೇಲೆಯೆ ತಿರುಗಿ ಬಿದ್ದು ನಿಮ್ಮನ್ನು ಸ್ಥಾನದಿಂದ ಕಿತ್ತು ಹಾಕುತ್ತಾರೆ. ತೆಗೆದುಹಾಕತಕ್ಕ ಶಕ್ತಿ ಅವರಲ್ಲಿದೆ. ಅದಕ್ಕೋಸ್ಕರ ತಮ್ಮ ಜೇಬಿನಲ್ಲಿ ಕಾಲು ಗಜದಷ್ಟು ಕಾಗದವಿದ್ದರೆ ನೀವು ಮಾಡುತ್ತೀರಿ. ಹಾಗಿಲ್ಲದೇ ಹೋದರೆ ನಿಮ್ಮಲ್ಲಿ ಶಕ್ತಿ ಖಂಡಿತ ಇಲ್ಲ ಎಂದು ಹೇಳಬೇಕಾಗುತ್ತದೆ. ಇದನ್ನು ಧೈರ್ಯ ದಿಂದ ಮಾತ್ರ ತಡೆಗಟ್ಟುವುದಕ್ಕೆ ಸಾಧ್ಯ, ಎಂದು ಈ ಕೈಗಾರಿಕೆಯ ನೀತಿಯ ವಿಷಯವಾಗಿ ಇಷ್ಟು ವಿಷಾದದಿಂದ ಹೇಳಬೇಕಾಗಿದೆ. ತಮ್ಮ ಆರ್ಥಿಕ ಸಂಪತ್ತು ಈ ದೇಶದಲ್ಲಿ ಅಭಿವೃದ್ಧಿಯಾಗಬೇಕು, ಎಂದಿದ್ದರೆ ಕೈಗಾರಿಕೆಯ ನೀತಿಯಲ್ಲಿ ಕ್ರಾಂತಿಕಾರಕವಾದ ಬದಲಾವಣೆಯಾದ ಹೊರತು ಈ ದೇಶದ ಉತ್ಪತ್ತಿ ಖಂಡಿತ ಆಗುವುದಿಲ್ಲ. ಇದು ಶತಸ್ಸಿದ್ಧವಾದ ಮಾತು. ಯಾವುದಾದರೂ ಹೊಸ ಯೋಜನೆ ಬೇಕು, ಹೊಸ ಕೈಗಾರಿಕೆ ಸ್ಥಾಪನೆಯಾಗಬೇಕು ಎಂದು ಬಂದರೆ, ಈಗಿರುವ ಡೈರೆಕ್ಟರುಗಳ ಹತ್ತಿರ ವ್ಯವಹಾರ ಮಾಡಿದರೆ ಅಂತಹವರಿಗೆ ಯಾವ ತರಹ ಸಹಾಯವೂ ದೊರೆಯುವುದಿಲ್ಲ. ಇದನ್ನು ಪಡೆಯುವವರು ನಿಮ್ಮ ಅಕ್ಕಪಕ್ಕದಲ್ಲಿರುವ ಮಂತ್ರಿಗಳ ಪ್ರಭಾವವನ್ನು ಪಡೆದಿರತಕ್ಕ ವ್ಯಕ್ತಿಗಳು ಇಂತಹವರಿಗೇ ದೊಡ್ಡ ದೊಡ್ಡ ಇಂಡಸ್ಟ್ರೀಗಳು, ಕಂಟ್ರಾಕ್ಟುಗಳು, ಅವರಿಗೇನೇನು ಸೌಲಭ್ಯಗಳು ಬೇಕೋ ಅದನ್ನೆಲ್ಲಾ ಪಡೆಯುತ್ತಾರೆ. ದೇಶದಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತೇವೆಂದು ಬಾಯಲ್ಲಿ ಹೇಳಿಕೊಂಡು ಬೋಗಸ್ ಕಾರ್ಖಾನೆಗಳನ್ನು ಮಾಡಿ ಅಲ್ಲಿ ಬರತಕ್ಕ ಉತ್ಪತ್ತಿಯಿಂದ ದೇಶದ ಸಂಪತ್ತನ್ನು ಹೆಚ್ಚು ಮಾಡುತ್ತೇವೆಂದು ಹೇಳುವುದು ಬರೀ ಒಂದು ಭ್ರಮೆ ಎಂದು ನಾನು ಹೇಳುತ್ತೇನೆ. ಇವೊತ್ತಿನ ದಿವಸ ಆರ್ಥಿಕ ನೀತಿಯನ್ನು ಸರಿಯಾಗಿ ಮಾಡಿದ ಪಕ್ಷದಲ್ಲಿ ನಿಜವಾಗಿಯೂ ದೇಶದ ಸಂಪತ್ತು ಇನ್ನೂ ಹೆಚ್ಚಾಗಬಹುದಿತ್ತು. ಸುಮ್ಮನೆ ನಮ್ಮ ದೇಶದ ಪರ್‌ಕ್ಯಾಪಿಟಾ ಇನ್‌ಕಂ 311 ಕ್ಕೇರಿದೆ ಎಂದು ಹೇಳುತ್ತಾರೆ. ಶ್ರೀಮಾನ್ ಎ ಜಿ. ರಾಮಚಂದ್ರರಾಯರು ಕೊಟ್ಟಿರುವ ರಿಪೋರ್ಟಿ ನಲ್ಲಿ ಅವರು ಹೇಳಿರುವಂತೆ ಆಲ್—ಇಂಡಿಯಾ ಲೆವಲ್‌ಗಿಂತ ನಮ್ಮದು ಶೇಕಡ 4.5ರಷ್ಟು ಕಡಿಮೆ ಇದೆ ಎಂದು ಹೇಳಿದ್ದಾರೆ. ಶೇಕಡ 311 ರಷ್ಟು ಜಾಸ್ತಿಯಾಗಿದೆ ಈ ಪರ್‌ಕ್ಯಾಪಿಟಾ ಇನ್‌ಕಂ ಎಂದು ತಿಳಿದುಕೊಂಡಿದ್ದರೆ ಇದು ಖಂಡಿತ ತಪ್ಪು. ಈಗಲೂ ಕೂಡ ಈ ದೇಶದ ವಿವಿಧ ಕೈಗಾರಿಕೆ ಗಳನ್ನು ನೋಡಿದರೆ ಅದರಿಂದ ಬರುವ ಉತ್ಪತ್ತಿಯೆಲ್ಲಾ ಬರುವ ಹಣದಲ್ಲಿ ಬಹುಶಃ ಅರ್ಧ ಮುಕ್ಕಾಲು ಭಾಗದಷ್ಟು ದೊಡ್ಡ ದೊಡ್ಡ Tatas Birlas ಗಳಿಗೆ ಸೇರಿದಂತಹವುಗಳು ಇದರಲ್ಲಿ Hierarchy ಯಂತೆ ಶೇಕಡಾ 75 ರಷ್ಟು ಅವರ ವ್ಯಕ್ತಿಗಳೇ ಸೇರಿರುವರು. ನಮ್ಮ ದೇಶದಲ್ಲೂ ಸಹ ಈ ದೇಶದ ಕೈಗಾರಿಕೆಗಳು ಅವರಂತಹ ಛೋಟಾ ಬಿರ್ಲಾಗಳು ಹಾಗೂ ಛೋಟಾ ತಾತಾಗಳ ಕೈ ಸೇರಿವೆ. ಇಂತಹ ಕೈಗಾರಿಕೆಗಳ ಸಂಪಾದನೆಯನ್ನು ಸೇರಿಸಿಕೊಂಡು ಪರ್‌ಕ್ಯಾಪಿಟಾ ಇನ್‌ಕಂ 31 ಎಂದಿರಬಹುದು. ತಾವು ಬಡ ಬೋರೇಗೌಡನನ್ನು ಇನ್ನೂ ಬಡವನನ್ನಾಗಿ ಮಾಡಿ ಅವರ ಏಳಿಗೆ ಗಳ ಕಡೆಗೆ ನೀವು ಹಾಕಿಕೊಂಡಿರುವ ಕಾರ್ಯಕ್ರಮ, ಅನುಸರಿಸುತ್ತಿರುವ ನೀತಿಗಳನ್ನು ನೋಡಿದರೆ ನಮ್ಮ ಹಳ್ಳಿಗಳ ಸ್ಥಿತಿ ಯಾವ ರೀತಿ ಇವೆ ಎನ್ನುವುದು ತಿಳಿಯುತ್ತದೆ. ರೈತನು ತನ್ನ ಉತ್ಪನ್ನವನ್ನೂ ಬೆಳೆಯುತ್ತಿರುವ ಬೆಲೆ ಏನು, ಅವನು ತೆಗೆಯುತ್ತಿರುವ ಉತ್ಪತ್ತಿಯಿಂದ ಆರ್ಥಿಕ ಸಂಪತ್ತು ಎಷ್ಟು ಜಾಸ್ತಿಯಾಗುತ್ತಿದೆ, ಎಲ್ಲಿಯವರೆಗೆ ಇದು ಹೋಗಬಹುದು ಎನ್ನುವುದನ್ನು ತಾವು ಟಾರ್ಚ್ ಇಟ್ಟು ಕೊಂಡು ಹುಡುಕಿ ನೋಡಿದರೂ ನಿಮಗೇನೂ ಸಿಗುವುದಿಲ್ಲ. ಅದು ಬೆಂಗಳೂರು, ಮೈಸೂರು ಇಂತಹ ದೊಡ್ಡ ದೊಡ್ಡ ನಗರಗಳಿಗೆ ಸೇರಿಕೊಂಡು ಬಿಟ್ಟಿದೆ. ತಾವು ಅವರುಗಳ ಒಂದು ಆರ್ಥಿಕ ಉತ್ಪನ್ನ ವನ್ನೂ ಲೆಕ್ಕಹಾಕಿಕೊಂಡು ನಿಮ್ಮ ಪರ್ ಕ್ಯಾಪಿಟಾ 311ರಷ್ಟಿದೆ ಎಂದು ಹೇಳಿದರೆ, ಅದರಿಂದ ಖಂಡಿತ ವಾಗಿಯೂ ನಮ್ಮ ದೇಶದಲ್ಲಿ ಆರ್ಥಿಕ ಸಮಾನತೆ ಇದೆ ಎಂದು ಹೇಳುವುದು ಒಪ್ಪತಕ್ಕ ಮಾತಲ್ಲ. ಇಲ್ಲಿ ರುವ ಅಂಕಿಗಳನ್ನು ಒಪ್ಪಬೇಡಿ ಇದೆಲ್ಲಾ ಮೋಸ ಮಾಡುವುದಕ್ಕಾಗಿ ಕೊಟ್ಟಿರುವಂತಹುದು. ಇಂತಹ ಒಂದು ಪರಿಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ನಿವೃತ್ತರಾದ ಸಚಿವರನ್ನೋ ಇಲ್ಲವೇ ದೊಡ್ಡಮನುಷ್ಯರನ್ನೋ ಕಾರ್ಪೊರೇಷನ್ನುಗಳ ಅಧ್ಯಕ್ಷರುಗಳಾಗಿ ಮಾಡುವುದಕ್ಕೋಸ್ಕರ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನು, ಎಲೆಕ್ಟ್ರಿಸಿಟಿ ಬೋರ್ಡ್ ವೇರ್ ಹೌಸಿಂಗ್ ಕಾರ್ಪೊರೇಷನ್ ಹಾಗೂ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಹೀಗೆ ಮಾಡಿದ್ದೀರಿ. ಇದನ್ನೆಲ್ಲಾ ಏತಕ್ಕೆ ಮಾಡಿದ್ದೀ ರೆಂದರೆ, ನಿಮ್ಮಲ್ಲಿ ಯಾರಾದರೂ ನಿವೃತ್ತ ಸಚಿವರುಗಳು ನಿರುದ್ಯೋಗಿಗಳಾಗಿರುವುದರಿಂದ ಅವರಿಗೆ ಉದ್ಯೋಗವನ್ನು ಕಲ್ಪಿಸಿ ಕೊಳ್ಳಲು ಈ ಕಾರ್ಪೊರೇಷನ್ನುಗಳನ್ನು ಮಾಡಿ ಅವರನ್ನೆಲ್ಲಾ ಇಲ್ಲಿ ಅಧ್ಯಕ್ಷರಾಗಿ ಮಾಡುತ್ತಿದ್ದೀರಿ.

ಅಧಿಕಾರದ ಸಂಪ್ರದಾಯ ಈ ರೀತಿ ಬಂದಿದೆ. ನಿಮ್ಮ ಜೊತೆಯಲ್ಲಿದ್ದವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಅಂಥವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ ಈ ನೀತಿಯಿಂದ ಕೈಗಾರಿಕೆಯು ಉದ್ಧಾರವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇಂಥ ಅಧ್ಯಕ್ಷರಾಗುವ ಕಾರ್ಪೊರೇಷನ್ ಮಾಡಬೇಡಿ. ಒಳ್ಳೆಯದರ ಬದಲು ಕೆಟ್ಟದ್ದು ಆಗುತ್ತದೆ. ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಆದ ಮೇಲೆ ಅದರಿಂದ ಬರತಕ್ಕ ಉತ್ಪತ್ತಿ ಕಡಿಮೆಯಾಗಿದೆ. ಇದರಲ್ಲಿ ರಾಜಕೀಯ ನಡೆದಿದೆ. ರಾಜಕೀಯದಲ್ಲಿ ನೊಂದವರಿಗೆ ಒಂದು ಸ್ಥಾನ ಕೊಡುವುದಕ್ಕೋಸ್ಕರ ಕಾರ್ಪೊರೇಷನ್ ಮಾಡಿ ಅಂಥವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುತ್ತಿದ್ದೀರಿ. ಈ ರೀತಿಯಾದರೆ ಕೈಗಾರಿಕೆಗಳು ಹೇಗೆ ಬೆಳೆಯುತ್ತವೆ? ಅನುಭವವಿದ್ದವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಒಬ್ಬ ನಿವೃತ್ತ ಮಂತ್ರಿಯನ್ನು ಕಾರ್ಪೊರೇಷನ್ ಅಧ್ಯಕ್ಷ ಸ್ಥಾನದ ಅಧಿಕಾರಕ್ಕೆ ಏರಿಸಿದರೆ ದೇಶಕ್ಕೆ ಏನು ಪ್ರಯೋಜನವಾಗುತ್ತದೆ? ಎಲ್ಲ ಕಾರ್ಪೊರೇಷನ್‌ಗಳಲ್ಲಿ ಕಾಂಗ್ರೆಸ್ ನಾಯಕರು, ನಿವೃತ್ತ ಮಂತ್ರಿಗಳು ಅಧ್ಯಕ್ಷರಾಗಿದ್ದಾರೆ. ಈ ನೀತಿ ಅನುಸರಿಸುವದರಿಂದ ಬರಬೇಕಾದ ಉತ್ಪತ್ತಿ ಬರುತ್ತಿಲ್ಲ ಯಾವ ಹೊಸ ಬೆಳಕು ಹೊರಬಿದ್ದಿಲ್ಲ. ಬಹಳ ಅನ್ಯಾಯವಾಗುತ್ತಿದೆಯೆಂದು ಸಭೆಯ ಗಮನಕ್ಕೆ ತರಬಿಚ್ಛಿಸುತ್ತೇನೆ. ಆಹಾರಧಾನ್ಯ ಪರಿಸ್ಥಿತಿ ಉತ್ತಮವಾಗಿದೆ, ಬೆಲೆಯನ್ನು ಹತೋಟಿಯಲ್ಲಿಟ್ಟಿದ್ದೇವೆ ಎಂದು ಹೇಳಿದ್ದಾರೆ. ಆಹಾರ ಧಾನ್ಯಗಳ ಬೆಲೆ ಏರುತ್ತಿದೆಯೆ? ಬೆಲೆ ಕೆಳಗೆ ಇಳಿಯುತ್ತಿದೆ. ಈಗಾಗಲೆ ಶೇಕಡ 25 ರಷ್ಟು ಬೆಲೆ ಬಿದ್ದು ಹೋಗಿದೆ. ಇದಕ್ಕೆ ಕಾರಣವೇನು? ನಮ್ಮ ಆಹಾರ ನೀತಿ ಸಫಲವಾಗಿಲ್ಲ. ಅಂಕಿ ಅಂಶಗಳು ನಿಜಾಂಶವನ್ನು ತೋರಿಸುತ್ತಿಲ್ಲ. ಆಹಾರ ಧಾನ್ಯ ಉತ್ಪಾದನೆ ಮಾಡುವ ರೈತನಿಗೆ ಉತ್ತೇಜನ ದೊರೆತು ಸಹಾಯವಾಗುತ್ತಿಲ್ಲ. ಆಹಾರ ಧಾನ್ಯಗಳಿಗೆ ಸರಿಯಾದ ದರ ದೊರೆಯುತ್ತಿಲ್ಲ. ರೈತನಿಗೆ ಲುಕ್ಸಾನಾಗದ ಹಾಗೆ ನೋಡಿಕೊಳ್ಳಲು ಅವನ ಸಹಾಯಕ್ಕೆ ಸರಕಾರ ಏಕೆ ಹೋಗಲಿಲ್ಲ? ಸರಕಾರದ ನೀತಿಯ ಪರಿಣಾಮವಾಗಿ ದೇಶದಲ್ಲಿ ನಿರುದ್ಯೋಗತನ ಕಡಿಮೆಯಾಗಿದೆ, ಎಂಪ್ಲಾಯ್‌ಮೆಂಟ್ ಜಾಸ್ತಿಯಾಗಿದೆ ಎಂದು ಭಾಷಣದಲ್ಲಿ ಹೇಳಿದ್ದಾರೆ. ನಿಜವಾಗಿಯೂ ಇದು ಸತ್ಯಕ್ಕೆ ದೂರವಾದ ವಿಷಯ. ಅಂಕಿ ಅಂಶಗಳನ್ನು ನೋಡಿದರೆ ನಮ್ಮ ದೇಶದಲ್ಲಿ ನಿರುದ್ಯೋಗತನ ದಿನದಿನಕ್ಕೆ ವಿಷ ಏರಿದಂತೆ ಏರುತ್ತಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಲ್ಲ. ದೇಶದಲ್ಲಿ ಸಂಪತ್ತು ಜಾಸ್ತಿಯಾಗಿಲ್ಲ. ವಿದ್ಯಾವಂತರಾದ ಯುವಕರು ಕೆಲಸವಿಲ್ಲದೆ ಬೀದಿಬೀದಿಗಳಲ್ಲಿ ಅಲದಾಡುತ್ತಿದ್ದಾರೆ. ಅವರಿಗೆ ಕೆಲಸ ಕೊಡತಕ್ಕಂಥ ಶಕ್ತಿ ಸರಕಾರದಲ್ಲಿಲ್ಲ. ದೇಶದಲ್ಲಿ ಎರಡು ಪಂಚವಾರ್ಷಿಕ ಯೋಜನೆಗಳು ಮುಗಿದು ಮೂರನೇ ಯೋಜನೆಯು ಅರ್ಧದಷ್ಟು ಆಗಿದ್ದರೂ ಕೂಡ ನಿರುದ್ಯೋಗಿಗಳ ಸಂಖ್ಯೆ ಕಡಮೆಯಾಗಿಲ್ಲ. ಈ ಸಮಸ್ಯೆ ವಿಷ ಏರಿದ ಹಾಗೆ ಏರುತ್ತಿದೆ. ಈ ರೀತಿಯಾಗುವುದಾದರೆ ಇಂಥ ಆರ್ಥಿಕ ನೀತಿಯಿಂದ ಏನು ಸಾಧನೆ ಮಾಡಿದ ಹಾಗಾಯಿತು ಎಂದು ಕೇಳುತ್ತೇನೆ. ನಿಜವಾಗಿಯೂ ಈ ಸಮಸ್ಯೆ ಬಗೆ ಹರಿಯಲಿಲ್ಲ. ಈ ನೀತಿಯನ್ನು ಕೂಡಲೇ ತಡೆಗಟ್ಟಬೇಕು. ಸರಕಾರ ಫಂಡಮೆಂಟಲ್ ರೆಸ್‌ಪಾನ್ಸಿಬಲಿಟಿ ನೆರವೇರಿಸಿಲ್ಲ. ನಿರುದ್ಯೋಗ ಸಮಸ್ಯೆ ಬಗೆಹರಿಸಿಲ್ಲ.

ಎಕನಾಮಿಕ್ ಮೆಷರ್‍ಸ್ ಕಾರ್ಯಗತ ಮಾಡಿದ್ದೇವೆ. ಈ ಬಗ್ಗೆ ಎ. ಜಿ. ಆರ್. ಕಮಿಟಿಯವರು ಶಿಫಾರಸು ಮಾಡಿದ್ದಾರೆಂದು ಹೇಳಿದ್ದಾರೆ ನಾನು ಒಂದು ಮಾತು ಕೇಳುತ್ತೇನೆ. ಈ ಮಾತನ್ನು ನಾವು ಪದೇ ಪದೇ ಹೇಳುತ್ತಲೇ ಇದ್ದೇವೆ. ಆದರೆ ಇನ್ನು ಮುಂದೆ ಹೇಳುವುದಿಲ್ಲ. ಇದು ನಿಮಗೆ ಸಂಬಂಧಪಟ್ಟ ವಿಚಾರ. ಈ ದೇಶಕ್ಕೆ ಎಂಟು ಜನ ಮಂತ್ರಿಗಳು ಸಾಕು. ಎಂಟು ಜನ ಮಂತ್ರಿಗಳಿಂದ ರಾಜ್ಯಭಾರ ಚೆನ್ನಾಗಿ ಮಾಡಬಹುದು ಎಂದು ಎ. ಜಿ. ಆರ್. ಸಮಿತಿಯು ಸಹ ಹೇಳಿದೆ ಇದನ್ನು ಕಾರ್ಯಗತ ಮಾಡಿಲ್ಲ. ಇನ್ನೂ ಅನೇಕ ಶಿಫಾರಸ್ಸುಗಳನ್ನು ಕಾರ್ಯಗತ ಮಾಡಿಲ್ಲ. ನೀವು ಹೇಳುವುದು ಪೊಳ್ಳು ವಾದ ಆಗುತ್ತದೆ. ಇದಲ್ಲದೆ 25 ಜನ ಮಂತ್ರಿಗಳಲ್ಲಿ ಸಮವಾಗಿ ಕೆಲಸ ಹಂಚಿಕೊಂಡಿದ್ದೀರಾ? ಕೆಲವರಿಗೆ ಕೆಲಸವೇ ಇಲ್ಲ. ಒಬ್ಬೊಬ್ಬರಿಗೆ ಹೆಚ್ಚು ಕೆಲಸದ ಭಾರವಿದೆ. ಈ ಮಂತ್ರಿಮಂಡಳ 25 ಕುದುರೆ ಹೂಡಿದ ರಥವಿದ್ದಹಾಗೆ ಈ ರಥ ಕುಂಟುತ್ತ ನಡೆದಿದೆ. ಕೆಲವು ಕುದುರೆಗಳ ಬೆನ್ನುಮೂಳೆ ಸೊಂಟ ಮುರಿದು ಹೋಗಿದೆ. Equitable distribution of work ಇಲ್ಲದೇ ಹೋದರೆ ರಥ ಬಿದ್ದು ಹೋಗುತ್ತದೆ. ಕುದುರೆಗಳು ಸಮವಾಗಿ ಓಡುತ್ತಿಲ್ಲ. ಈ ರಾಜಕೀಯ ರಥಕ್ಕೆ ಸರಿಯಾದ ಲಗಾಮು ಹಾಕಿಲ್ಲ. ಶ್ರೀ ಕಂಠಿಯವರಿಗೆ ಬೆನ್ನುಮೂಳೆ ಮುರಿಯುವಷ್ಟು ಕೆಲಸದ ಹೊರೆ ಇದೆ. ಈ ರೀತಿ ಏಕೆ ಮಾಡಬೇಕು. ಎಷ್ಟು ಭಾರ ಹೊರುವುದಕ್ಕೆ ಸಾಧ್ಯವೋ ಅಷ್ಟು ಹೊರೆ ಹೊರಬೇಕು. ಎಷ್ಟು ಕುದುರೆಗಳು ಬೇಕೋ ಅಷ್ಟು ಕುದುರೆಗಳನ್ನು ರಥಕ್ಕೆ ಹೂಡಬೇಕು ಈ ಧೋರಣೆಯ ಬಗ್ಗೆ ವಿರೋಧ ಪಕ್ಷದವರು ಮೇಲಿಂದ ಮೇಲೆ ಹೇಳುತ್ತಲೇ ಬಂದಿದ್ದಾರೆ. ಟೀಕ ಟಿಪ್ಪಣಿಗೋಸ್ಕರ ಹೇಳುವುದಿಲ್ಲ. ಹೊಣೆಗಾರಿಕೆಯಿಲ್ಲದೆ ಮಾತನಾಡುವುದಿಲ್ಲ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ರಾಜ್ಯಪದ್ಧತಿ ಹೊಸದಾಗಿ ಪ್ರಾರಂಭ ಮಾಡಲಾಗಿದೆ.

ನಮ್ಮಲ್ಲಿ ಒಂದು ಧೈರ್ಯವಿರಬೇಕ ; ಮಾಡಿರತಕ್ಕಂಥ ತಪ್ಪನ್ನು ಒಪ್ಪಿಕೊಳ್ಳತಕ್ಕಂಥ ಶಕ್ತಿ ಇರಬೇಕು. ವಿಚಾರ ಮಾಡತಕ್ಕಂಥ ಶಕ್ತಿ ಇಲ್ಲದೆ ಹೋದರೆ, ಕೇವಲ ಉಡಾಫೆ ಮಾಡುತ್ತಾ ಹೋದರೆ, ಶಾಸನ ಸಭೆ ಇರುವ ಒಂದು ಪರಿಣಾಮವಾಗಿ ಏನು ಆಗಬೇಕೋ, ಅದು ಖಂಡಿತವಾಗಿ ಆಗುವುದಿಲ್ಲವೆಂದು ತಮ್ಮಲ್ಲಿ ಹೇಳಬಹುದು.

ದೇಶದ ಜನತೆ ನಿಮ್ಮಿಂದ ಹೆಚ್ಚಿನ ಕೆಲಸವನ್ನು ನಿರೀಕ್ಷೆ ಮಾಡುತ್ತಿದೆ; ಆ ನಿರೀಕ್ಷಣೆ ಸಾಧ್ಯವಾಗಬೇಕಾದರೆ ಮಂತ್ರಿ ಮಂಡಲದಲ್ಲಿ ಒಂದು ಕೆಲಸ ನಿಜವಾಗಿ ಸರಾಗವಾಗಿ ಆಗಬೇಕು; ಎಲ್ಲರೂ ಕೂಡ ಒಂದೇ ಮನಸ್ಸಿನಿಂದ ಕೆಲಸ ಮಾಡಬೇಕು. ಆ ಮನಸ್ಸು ಬರಬೇಕಾದರೆ ನಮ್ಮ ನಿಮ್ಮ ಕೆಲಸ ಗೌರವದಲ್ಲಿ ತಾರತಮ್ಯವಿರಬಾರದು ; ಹಾಗಿದ್ದರೆ ನಿಮ್ಮ ಮಂತ್ರಿ ಮಂಡಲ ದೇಶಕ್ಕೆ ಹೆಚ್ಚಿನ ಕೆಲಸವನ್ನು ಮಾಡಬಹುದೆಂದು ಹೇಳಬಹುದು. ದಶರಥನ ರಥಕ್ಕೆ 10 ಕುದುರೆಗಳಿದ್ದವು. ನೀವು 25 ಕುದುರೆಗಳನ್ನು ಹಿಡಿಯಬೇಕಾದರೆ ಬಹಳ ಕಷ್ಟವಾಗುತ್ತದೆ.

ಇನ್ನು General Administration ವಿಚಾರ ಹೇಳಬೇಕಾಗಿದೆ. ಅದರಲ್ಲಿ ಡೆಪ್ಯುಟಿ ಕಮಿಷನರ ಕೆಲಸ ಮತ್ತು ಅವರ ಅಧಿಕಾರದ ವಿಚಾರ ಹೇಳಬೇಕು. ಈಗ ಜಿಲ್ಲಾಧಿಕಾರಿಗಳ ಕೆಲಸ ವೇನಾಗಿದೆಯೆಂದರೆ, ಮುಖ್ಯಮಂತ್ರಿಗಳು ಬರಬೇಕು. National Defence Fundಗೆ ಲಕ್ಷಾಂತರ ರೂಪಾಯಿ ಕಲೆಕ್ಟ್ ಮಾಡಬೇಕು. ಅದನ್ನು ಮುಖ್ಯಮಂತ್ರಿಗಳಿಗೆ ಕೊಡುವಾಗ ಅವರ ಜೊತೆ ಫೋಟೋ ತೆಗೆಸಿಕೊಳ್ಳಬೇಕು, ಅವರದೂ ಮುಖ್ಯಮಂತ್ರಿಯವರದೂ ಫೋಟೋ ಪತ್ರಿಕೆಯಲ್ಲಿ ಬರಬೇಕು. ಈ ದೃಷ್ಟಿ ಇಟ್ಟುಕೊಂಡು ಕೆಲವು ಜಿಲ್ಲಾಧಿಕಾರಿಗಳು ತಮ್ಮ ಹದ್ದು ಮೀರಿ ಕೆಲಸ ಮಾಡುತ್ತಿದ್ದಾರೆ. ಮುಖ್ಯ ಮಂತ್ರಿಯವರ ಜಿಲ್ಲೆಯಿಂದ ಬಂದಿರತಕ್ಕ ವರ್ತಮಾನದ ಪ್ರಕಾರ, ಆ ಜಿಲ್ಲೆಯ ಒಬ್ಬ ಅಧಿಕಾರಿ ನಡೆಯುವುದನ್ನು ಕೇಳಿದರೆ, ಆತ ಸರ್ವಾಧಿಕಾರಿಯ ಹಾಗೆ ವರ್ತನೆ ಮಾಡುತ್ತಿದ್ದಾನೆ. ಯಾರಾದರೂ ಕೂಡ ಒಬ್ಬರು ಅವರ ಹತ್ತಿರ ಕೆಲಸಕ್ಕೆ ಹೋದರೆ, ದುಡ್ಡು ಕೊಡಿರಿ, ಚಿನ್ನ ಕೊಡಿರಿ ಎಂದು ಕೇಳುತ್ತಾರಂತೆ; ಚಿನ್ನ ಇಲ್ಲವೆಂದರೆ ಅಂಗಡಿಯಿಂದ ಕೊಂಡು ಕೊಂಡು ಬಾ ಎಂದು ಹೇಳುತ್ತಾರಂತೆ. "ನಮ್ಮ ಮುಖ್ಯ ಮಂತ್ರಿಯವರನ್ನು ಚಿನ್ನದಲ್ಲಿ ತೂಕ ಮಾಡಬೇಕು, ಅಷ್ಟು ಚಿನ್ನ ಬೇಕು, ಇಷ್ಟು ಚಿನ್ನ ಬೇಕು" ಎಂದು ಹೇಳಿ, ಕೊಡದೆ ಹೋದರೆ ಸಿಮೆಂಟ್ ಕೊಡುವುದಿಲ್ಲವಂತೆ; ಲೈಸೆನ್ಸ್ ಕೊಡುವುದಿಲ್ಲವಂತೆ ಇದು ಎಂತಹ ನೀತಿ ? ಇವತ್ತಿನ ದಿವಸ ಪ್ರಧಾನ ಮಂತ್ರಿಗಳು ಹೇಳಿದ್ದಾರೆ : "ಒತ್ತಾಯದಿಂದ ಬಂದಂಥ ದುಡ್ಡನ್ನು ಸಮುದ್ರಕ್ಕೆ ಬಿಸಾಡಿ" ಎಂದು. ನಾನು ಕೇಳುತ್ತೇನೆ, ಏಕೆ ಈ ಒಂದು ಒತ್ತಾಯ ನಮ್ಮ ರಾಜ್ಯದಲ್ಲಿ. ನಿಮ್ಮ ತೂಕ ನಿಮಗೆ ಗೊತ್ತಿಲ್ಲವೇ ? ಅದನ್ನು ಚಿನ್ನದಲ್ಲಿ ತೂಕಮಾಡಿ ತಿಳಿದುಕೊಳ್ಳಬೇಕೆ ? ನೋಟ್ ಹಾಕಿ, ಬೆಳ್ಳಿ ಹಾಕಿ ತೂಕ ಮಾಡಿಕೊಳ್ಳಬೇಕೆ ? ಚಿನ್ನ, ಕಾಗದ, ಬೆಳ್ಳಿಯಿಂದ ತುಲಾಭಾರವಾಗಬೇಕೆ ? ಈ ತುಲಾಭಾರಕ್ಕೆ ಹೆಚ್ಚು ಗ[illegible]ನ ಕೊಡದೆ, ಈ ರಾಷ್ಟ್ರದ ತುರ್ತು ಪರಿಸ್ಥಿತಿಯಲ್ಲಿ ಮುಖ್ಯವಾಗಿ ಜನತೆಯಲ್ಲಿ ಉತ್ಸಾಹ ಬೆಳೆಯಲು, ಪ್ರಜಾಪ್ರಭುತ್ವದ ಮಮತೆ ದೇಶದಲ್ಲಿ ಬೆಳೆಯಲು ಪ್ರಯತ್ನಿಸಿ. ಈಗಿನ ಸನ್ನಿವೇಶದಲ್ಲಿ ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಮಹತ್ವವಾದುದು. ಈಗ ಜನರಲ್ಲಿ ಉತ್ಪತ್ತಿಯಾಗಿರತಕ್ಕಂಥ ಹುಮ್ಮಸ್ಸನ್ನು ಕಲಕಿ ಬೇರೆ ದಾರಿಯಲ್ಲಿ ವ್ಯಯವಾಗುವಂತೆ ಮಾಡಬೇಡಿ. ಈ ಅಪೂರ್ವವಾದ ಹುಮ್ಮಸ್ಸು, ಅಪೂರ್ವವಾದ ಮಮತೆ, ದೇಶಕ್ಕೆ ಒದಗಿರತಕ್ಕಂಥ ಒಂದು ತುರ್ತು ಪರಿಸ್ಥಿತಿಯಿಂದ ಉದ್ಭವವಾಗಿವೆ. ಹೀಗೆ ಜನರಲ್ಲಿ ಉದ್ಭವವಾಗಿರತಕ್ಕಂಥ ಮಮತೆಗೆ ಮತ್ತು ದೇಶಪ್ರೇಮಕ್ಕೆ ತಾವು ವಿಷ ಹಾಕಿ ಕದಡಬೇಡಿ. ಶತಮಾನದಿಂದ ಇಲ್ಲದಂಥ ಒಗ್ಗಟ್ಟು ಇವತ್ತು ನಮ್ಮ ದೇಶದಲ್ಲಿ ಮೂಡಿ ಬಂದಿದೆ. ಈ ನವಶಕ್ತಿಯನ್ನು ವಿಷಬೀಜ ಹಾಕಿ ಹಾಳುಮಾಡಬೇಡಿ. ಈ ನಿಮ್ಮ ಅಧಿಕಾರಿಗಳಿಗೆ Overloyalty ಬಂದಿದೆ. ಅವರು More loyal than the king ಆಗಿಬಿಟ್ಟು, ಮುಖ್ಯಮಂತ್ರಿಗಳ ಪ್ರೀತಿ ಗಳಿಸುವುದಕ್ಕೆ ರಕ್ಷಣಾ ನಿಧಿ ಸಂಗ್ರಹದಲ್ಲಿ ಒತ್ತಾಯ ಹಾಕಿ ಬಹಳ ಕೆಲಸ ಮಾಡುತ್ತಿದ್ದಾರೆಂದು ಆರ್ಥಿಕ ಸಚಿವರಲ್ಲಿ ಹೇಳುತ್ತೇನೆ. ಇಂಥ ಒಂದು ಅವಕಾಶವನ್ನು ಖಂಡಿತವಾಗಿ ಅಧಿಕಾರಿಗಳಿಗೆ ಕೊಡಕೂಡದು. ಚಿನ್ನವನ್ನೂ, ಹಣವನ್ನೂ ವಸೂಲು ಮಾಡಲಿ, ಬೇಡವೆಂದು ಹೇಳುವುದಿಲ್ಲ. ನಾನೂ ನಿಮ್ಮ ಜೊತೆಗೆ ಬಂದು ಜನರಿಂದ ದುಡ್ಡು ಕೊಡಿಸುತ್ತೇನೆ. ಆದರೆ ತೂಕ ಮಾಡಿಸಿಕೊಳ್ಳುವ ಹಂಬಲ ಬೇಡ. ಜಿಲ್ಲಾಧಿಕಾರಿ ಯಾರ ಜೊತೆಯಲ್ಲಿಯೋ ಕಾಂಗ್ರೆಸಿನ ಕಾರಿನಲ್ಲಿ ಬಾವುಟ ಹಾರಿಸಿ ಕೊಂಡು, ಹಣ ಸಂಗ್ರಹಣೆಗೆ ಹೋಗುವುದು ಬೇಡ. ಪೋಲೀಸ್ ವ್ಯಾನಿನಲ್ಲಿ ಹೋಗುವುದು ಬೇಡ. ನಮ್ಮ ದೇಶದಲ್ಲಿ Non-official Deputy Commissioner ಒಬ್ಬರನ್ನು ಮಾಡಿದ್ದೀರ ? ನಿಮ್ಮ ಡೆಪ್ಯುಟಿ ಕಮಿಷನರು ವ್ಯಾನಿನಲ್ಲಿ ಅವರೇ ಈ ಕೆಲಸಕ್ಕೆ ಹೋಗಲಿ, ಟಿ. ಎ. ತೆಗೆದುಕೊಳ್ಳಲಿ. ಈ ಕಾಂಗ್ರೆಸ್ ಸೆಕ್ರೆಟರಿ ಜೊತೆ ಸುತ್ತಾಡುವುದು ಬೇಡ. ಈ ಚಿತ್ರದುರ್ಗದ ಜಿಲ್ಲಾಧಿಕಾರಿ ಮಾಡುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

SRI C. J. MUCKANNAPPA.—The Chief Minister is elected from Bagalkote and that is his constituency.

ಶ್ರೀ ಎಸ್. ಶಿವಪ್ಪ.—ಅವರು ಯಾವುದೇ ತಾಲ್ಲೂಕಿನಿಂದ ಎಲೆಕ್ಟಾಗಿ ಬಂದಿದ್ದರೂ, ಅವರು ಹುಟ್ಟಿರುವುದು ಚಿತ್ರದುರ್ಗದಲ್ಲಿ. ಆದ್ದರಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬಂದಿದೆ.

ಶ್ರೀ ಎಸ್. ಆರ್. ಕಂಠಿ (ವಿದ್ಯಾ ಶಾಖೆಯ ಮಂತ್ರಿಗಳು).—ಮುಖ್ಯಮಂತ್ರಿಗಳು ಯಾವುದೋ ಒಂದು ಜಿಲ್ಲೆಯವರು ಅಂದರೆ ಒಪ್ಪುವುದಿಲ್ಲ. ಅವರು ಇಡೀ ರಾಜ್ಯಕ್ಕೆ ಸಂಬಂಧ ಪಟ್ಟವರು.

ಶ್ರೀ ಕೆ. ಲಕ್ಕಪ್ಪ.—ಅವರೇ ಒಂದು ಕಡೆ ಚಿತ್ರದುರ್ಗಕ್ಕೆ ಸೇರಿದವನು ಎಂದು ಹೇಳಿದರು.

ಶ್ರೀ ಎಸ್. ಆರ್. ಕಂಠಿ.—ಎಲ್ಲೋ ನಿಮ್ಮಂಥವರನ್ನು ಸಂತೋಷಪಡಿಸುವುದಕ್ಕೆ ಹಾಗೆ ಹೇಳಿರಬಹುದು.

ಶ್ರೀ ಎಸ್. ಶಿವಪ್ಪ.—ಇವತ್ತು ನಾನು ಹೇಳುವುದು ಪ್ರಜಾಪ್ರಭುತ್ವಕ್ಕೆ ನಾವೂ, ಅವರೂ ನಿಷ್ಠೆಯಿಂದ ಪೂಜೆ ಸಲ್ಲಿಸಬೇಕು, ವ್ಯಕ್ತಿಗಲ್ಲ. ನಾವು ನಮ್ಮ ರಾಜ್ಯಾಂಗದ ಪ್ರಕಾರ ಈ ಪ್ರತಿಜ್ಞೆಯನ್ನು ಕೊಟ್ಟು ಈ ಸಭೆಗೆ ಬಂದಿದ್ದೇವೆ. ಈ ಕಾಂಗ್ರೆಸ್ ಸರ್ಕಾರದ ವಿಚಾರದಲ್ಲಿ ಮಾಡುತ್ತಿರುವ ಪ್ರಚಾರವನ್ನು ಗೋಬೆಲ್ಸ್ ಪ್ರಾಪಗಾಂಡ ಎಂದು ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ವರ್ಣಿಸಿದರು. ಈ ದೇಶದಲ್ಲಿ ಅಂಥ ಪ್ರಚಾರ ನಡೆಯುತ್ತಿದೆಯೆಂದು ಹೇಳಿದರು. ಅದನ್ನು ಬಹಳ ವಿಷಾದದಿಂದ ಪ್ರತಿಭಟನೆ ಮಾಡಬೇಕಾಗಿದೆ. ದೇಶದಲ್ಲಿ ಯಾರಾದರೂ ಟೀಕೆ ಟಿಪ್ಪಣಿಗಳನ್ನು ಮಾಡಿದರೆ, ಅದನ್ನು ಜವಾಬ್ದಾರಿಯುತವಾಗಿ ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿ ಮಾಡುತ್ತಾ ಇದ್ದರೆ, ಇವರು ಈ ರೀತಿಯಲ್ಲಿ ಅದನ್ನು ಗೋಬೆಲ್ಸ್ ಪ್ರಾಪಗ್ಯಾಂಡ ಎಂದು ಹೇಳಿದರೆ, ಇವರೇ ಗೋಬೆಲ್ಸ್ ಆಗಿದ್ದಾರೆ. ಇವತ್ತು 1963ನೇ ಇಸವಿಯಲ್ಲಿ ಇವರು ಗೋಬೆಲ್ಸ್ ರೀತಿಯಲ್ಲಿ ಮಾತನಾಡುವುದಾದರೆ ಅದು ಪ್ರಜಾಪ್ರಭುತ್ವಕ್ಕೆ ಒಪ್ಪದ ಮಾತು ಎಂದು ನಾನು ಹೇಳುತ್ತೇನೆ. ಈ ರೀತಿ ಗೋಬೆಲ್ಸ್ ರೀತಿಯ ಮಟ್ಟಕ್ಕೆ ಮುಖ್ಯಮಂತ್ರಿಯವರು ಇಳಿಯುವುದು ಅಷ್ಟು ಒಳ್ಳೆಯದಲ್ಲವೆಂದು ಅವರಿಗೆ ಹೇಳಬೇಕಾಗಿದೆ; ಅವರು ಬಂದಮೇಲೆ ಹೇಳುತ್ತೇನೆ. ಇದು ನಿಮಗೆ ಒಪ್ಪದ ಮಾತು ಎಂದು.

ಶ್ರೀ ಕೆ. ನಾಗಪ್ಪ ಆಳ್ವ (ಆರೋಗ್ಯ ಶಾಖೆಯ ಮಂತ್ರಿಗಳು).—ಮುಖ್ಯಮಂತ್ರಿಗಳು ಹೇಳಿದ್ದು ಈ ಸಭೆಯಲ್ಲಿ ಮಾಡಿದ ಚರ್ಚೆಯ ವಿಷಯದಲ್ಲಿ ಅಲ್ಲ; ಹೊರಗೆ ಮಾಡಿದ ಅಪಪ್ರಚಾರದ ವಿಷಯದಲ್ಲಿ.

ಶ್ರೀ ಎಸ್. ಶಿವಪ್ಪ.—ಇರಲಿ ಇದು ಯಾರಿಗೆ ಹೇಳಿದರೋ ನಮಗೆ ಗೊತ್ತಿಲ್ಲ. ಈ ಸಭೆಯಲ್ಲಿ ಚರ್ಚೆಯಾಗಿರತಕ್ಕಂಥಾದ್ದಕ್ಕೆ ಬಂದಿರತಕ್ಕಂಥ ಉತ್ತರ ಅವರದು; ಆ ಉತ್ತರದಲ್ಲಿ ಅವರು ಎಲ್ಲಿಯೋ ಮಾಡಿದ ಭಾಷಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಆ ಜನಗಳಿಗೆ ಇಲ್ಲಿ ಉತ್ತರ ಹೇಳಿದರೆ ಅದು ಅಸಮಂಜಸವಾದುದು. ಆದ್ದರಿಂದ ಈ ರೀತಿಯ ಅವರ ಒಂದು ಹೇಳಿಕೆ ಬಹಳ ಕೆಟ್ಟದು. ಇವತ್ತಿನ ದಿವಸ ನಾನು General Administration ವಿಚಾರ ಹೇಳುವುದಾದರೆ, ಇವತ್ತು ನಾವು ಎಲ್ಲ ಕಡೆ ಹೋದರೂ, ತಮ್ಮದೇ ಒಂದು ಗುಂಪು ಅಲ್ಲಲ್ಲಿ ಕೆಲಸ ಮಾಡುತ್ತಿದೆ. ಇವತ್ತಿನ ದಿವಸ ಕಾಂಗ್ರೆಸ್ ಅಂದರೆ "ನಮ್ಮ ಸರ್ಕಾರ", ನಾವು ಹೇಳಿದಂತೆ ಈ ದೇಶದಲ್ಲಿ ನಡೆಯಬೇಕು, ಅಧಿಕಾರಿಗಳು ನಾವು ಹೇಳಿದಂತೆ ಕೇಳಬೇಕು, ಮಾಡಬೇಕು". ಇವತ್ತು ದೇಶದಲ್ಲಿ ಈ ಮನೋಭಾವ ಹುಟ್ಟಿಬಿಟ್ಟಿದೆ. ಈ ತರಹ ಮನೋಭಾವವನ್ನು ಅಧಿಕಾರಿಗಳಲ್ಲಿ ನೀವು ಉಂಟುಮಾಡಿದರೆ, ಪ್ರಜಾಪ್ರಭುತ್ವ ಎಷ್ಟರಮಟ್ಟಿಗೆ ನಡೆಯುವುದಕ್ಕೆ ಸಹಕಾರಿಯಾಗುತ್ತದೆ. ಹಿಂದೆ ಹಿಟ್ಲರ್ ಕಾಲದಲ್ಲಿ ಹಿಮ್ಲರ್ ಅಂತ ಒಬ್ಬ ಗೆಸ್ಟಪೊ ಇದ್ದ. ಅವನು ಒಂದು ಗುಂಪು ಇಟ್ಟುಕೊಂಡು ಬಿಟ್ಟು ದೇಶದ ಪ್ರಜೆಗಳ ಮೇಲೆ ಗೆಸ್ಟಪೊ ಮೆಥಡ್ ಉಪಯೋಗಿಸಿ ಅವರನ್ನು ಕಂಟ್ರೋಲ್ ಮಾಡಲು ಪ್ರಯತ್ನ ಮಾಡಿದ, ಹಿಟ್ಲರ್‌ಶಾಹಿ ಸಾಮ್ರಾಜ್ಯ ಸ್ಥಾಪನೆ ಮಾಡಬೇಕೆಂದು ಹೊರಟ. ಆದರೆ Gestapo methods ನಡೆಯಲಿಲ್ಲ. Himmler's Gestapo Method ಯಶಸ್ವಿಯಾಗಲಿಲ್ಲ. ಆ ಮೆಥಡ್ಡಿನಿಂದ ಹಿಟ್ಲರ್ ಮೇಲೆ ಏನು ಪರಿಣಾಮವಾಯಿತು, ಅವನ ಗತಿ ಏನಾಯಿತು ಎಂದು ನೀವು ದಯೆಯಿಟ್ಟು ಯೋಚನೆ ಮಾಡಬೇಕು. ತಮಗೆ ಹಿಟ್ಲರ್ ಗತಿ ಆಗಬೇಕೆಂದು ನನಗೆ ಇಚ್ಛೆ ಇಲ್ಲ. ಆದರೆ ದಯೆಯಿಟ್ಟು ಹಿಟ್ಲರನಿಗೆ ಏನು ಗತಿ ಆಯಿತು ಎನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಹಿಟ್ಲರ್‌ಶಾಹಿ ಸಾಮ್ರಾಜ್ಯವನ್ನು ಈ ದೇಶದಲ್ಲಿ ನೀವು ಆಚರಣೆಗೆ ತರುವುದಕ್ಕೆ ಪ್ರಯತ್ನಪಡಬೇಡಿ, ಅದರಿಂದ ನಿಮಗೇ ಅಪಾಯವೆಂದು ಹೇಳುತ್ತೇನೆ. ಅದರಿಂದ ಪ್ರಜಾಪ್ರಭುತ್ವಕ್ಕೆ ಅಪಾಯ; ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ಜನತೆಗೆ ಅಪಘಾತವಾಗುತ್ತದೆಂದು ನಿಮಗೆ ನೇರವಾಗಿ ಹೇಳುತ್ತೇನೆ. ಇಂಥ ಒಂದು ಸಾಮ್ರಾಜ್ಯಶಾಹಿ ತತ್ವ ನೀತಿಗೆ ಬೆಲೆ ಕೊಡಬಾರದು. ಪ್ರಜಾಪ್ರಭುತ್ವ ಯಶಸ್ವಿಯಾಗಿ ಬೆಳೆಯಬೇಕಾದರೆ, ನ್ಯಾಯದಿಂದ, ಧರ್ಮದಿಂದ, ಸತ್ಯದಿಂದ, ದೇಶದಲ್ಲಿ ಸರ್ಕಾರದ

ಆಡಳಿತ ಮತ್ತು ಅಧಿಕಾರಿಗಳು ಕೆಲಸ ಮಾಡಬೇಕೆಂದು ನಿರ್ದಿಷ್ಟವಾಗಿ ಹೇಳಬೇಕಾಗಿದೆ. ನಾನು ಈ ಸಭೆಯಲ್ಲಿ ಮುಖ್ಯ ಮಂತ್ರಿಗಳಿಲ್ಲದಿರುವುದರಿಂದ, ಅರ್ಥಿಕ ಮಂತ್ರಿಗಳಿಗೆ ಅವರಿಗೆ ತಿಳಿಸಬೇಕೆಂದು ಈ ಒಂದು ಅಭಿಪ್ರಾಯವನ್ನು ಸೂಚಿಸಬಯಸುತ್ತೇನೆ.

MR. SPEAKER.—The House will now rise for recess to reassemble after half-an-hour.

The House adjourned at Three of the Clock and re-assembled at Thirty-five Minutes past Three of the Clock.

MR. DEPUTY SPEAKER in the Chair].

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರವಾಗಿ ನಾನು ಈಗ ತಾನೆ ಮಾತನಾಡುತ್ತ ಇದ್ದೆ. ಡಿಸ್ಟ್ರಿಕ್ಟಿನ ಆಡಳಿತ ಮತ್ತು ಅವರ ಕೈಕೆಳಗೆ ಇರತಕ್ಕ ಅಧಿಕಾರಿಗಳ ಆಡಳಿತದ ವಿಚಾರಕ್ಕೆ ತಾವು ಹೇರಳವಾಗಿ ಹಣವನ್ನು ಇಲ್ಲಿ ತೋರಿಸಿದ್ದೀರಿ. ಜಿಲ್ಲಾ ಆಡಳಿತದ ವಿಚಾರವಾಗಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಈ ಜಿಲ್ಲಾ ಆಡಳಿತಕ್ಕೆ ಒಬ್ಬ ಡೆಪ್ಯೂಟಿ ಕಮಿಷನರ ಜೊತೆಗೆ ಇನ್ನೂ ಹೆಚ್ಚಿನ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳತಕ್ಕ ಅಧಿಕಾರಿವನ್ನು ಈಗಾಗಲೇ ಒಂದು ಮಸೂದೆಯ ಮುಖಾಂತರ ತಾವು ತೆಗೆದುಕೊಂಡಿದ್ದೀರಿ. ಇದರಿಂದಾಗಿ ಜಿಲ್ಲೆಯ ಆಡಳಿತ ಎಷ್ಟು ಏಕರೂಪತೆಯಿಂದ ಮತ್ತು ಬಿಗಿಯಾದ ದೃಷ್ಟಿಯಿಂದ ನಡೆಯಬೇಕೋ ಆ ದೃಷ್ಟಿಯಿಂದ ನಡೆಯುತ್ತಿಲ್ಲ. ಒಂದು ಒಳ್ಳೆಯ ಪರಿಣಾಮವಾಗುವುದಕ್ಕೆ ಬದಲಾಗಿ ಕೆಟ್ಟ ಪರಿಣಾಮ ವುಂಟಾಗಿದೆ. ಒಂದು ಜಿಲ್ಲೆಗೆ ಒಬ್ಬ ಜಿಲ್ಲಾಧಿಕಾರಿಯ ನೇತೃತ್ವದಲ್ಲಿ ಆಡಳಿತ ನಡೆಸುವುದು ಮೊದಲಿನಿಂದಲೂ ಬಂದಿರತಕ್ಕ ಸಂಪ್ರದಾಯ. ಇವತ್ತು ಎರಡು ಜನ ಜಿಲ್ಲಾಧಿಕಾರಿಗಳನ್ನಿಟ್ಟರೆ ಎಷ್ಟು ಮಟ್ಟಿಗೆ ಏಕರೂಪತೆಯಿಂದ ಆಡಳಿತ ನಡೆಯುತ್ತದೆ? ಮತ್ತು ತನ್ನದೇ ಆದ ಅಧಿಕಾರ ಚಲಾಯಿಸತಕ್ಕ ಮನೋಭಾವ ಬಂದು ಎರಡು ಮಟ್ಟದ ಅಧಿಕಾರ ನಡೆಯುತ್ತ ಇರುವುದರಿಂದ ಇವತ್ತಿನ ದಿವಸ ಜಿಲ್ಲೆಗಳ ಆಡಳಿತದಲ್ಲಿ ಬಹಳವಾಗಿ ಬಿಗಿ ಕಡಿಮೆಯಾಗಿದೆ. ಆದ್ದರಿಂದ ದಯವಿಟ್ಟು ಯಾವ ಒಂದು economy measure ಸಾಧನೆ ಮಾಡುತ್ತೇವೆ ಎಂದು ಹೇಳುತ್ತೀರೋ ಆ ದೃಷ್ಟಿಯಿಂದಲೂ ಕೂಡ ಜಿಲ್ಲೆಗೆ ಒಬ್ಬ ಅಧಿಕಾರಿಯನ್ನು ಹಾಕುವುದು ಸೂಕ್ತ. ಆಡಳಿತ ದೃಷ್ಟಿಯಿಂದಲೂ ಸಾಧುವಾದುದು. ಒಂದು ಅಧಿಕಾರದ ಮಿತಿ ಇರತಕ್ಕ ಕಾರ್ಯಕ್ಕೆ ಎರಡು ಅಧಿಕಾರಿಗಳನ್ನು ನೇಮಕಮಾಡುವುದರಿಂದ ಕೆಟ್ಟ ಪರಿಣಾಮವಾಗುತ್ತದೆ. ಜಿಲ್ಲೆಗೆ ಒಬ್ಬ ಜಿಲ್ಲಾಧಿಕಾರಿ ಇರಬೇಕೆಂಬ ಅಭಿಪ್ರಾಯ ಈ ಸಭೆ ಮತ್ತು ಎಲ್ಲಾ ಕಡೆಯಲ್ಲೂ ಹುಟ್ಟಿರುವುದರಿಂದ ಅದನ್ನು ಶೀಘ್ರವಾಗಿ ಕಾರ್ಯರೂಪಕ್ಕೆ ತರುವುದರಿಂದ ಆಡಳಿತ ಬಿಗಿಯಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ತಮ್ಮ ಭಾಷಣದಲ್ಲಿ ಇಲಾಖಾವಾರು ಎಷ್ಟೆಷ್ಟು ಹಣವನ್ನು ಒದಗಿಸಿದ್ದೀರಿ ಮತ್ತು ಯಾವ ರೀತಿ ಖರ್ಚು ಮಾಡುತ್ತೀರಿ ಎಂಬ ಅಂಶವನ್ನು ತೋರಿಸಿದ್ದೀರಿ. ನಾನು ಪ್ರತಿಯೊಂದು ಇಲಾಖೆಯ ಅಂಕಿ ಅಂಶವನ್ನು ಇವತ್ತಿನ ದಿವಸ ಪ್ರಶ್ನೆ ಮಾಡತಕ್ಕ ಕೆಲಸಕ್ಕೆ ಹೋಗುವುದಿಲ್ಲ. ಏಕೆಂದರೆ ಮುಂದೆ ಡಿಮ್ಯಾಂಡ್‌ಗಳು ಬಂದಾಗ ಸಂಬಂಧಪಟ್ಟ ಇಲಾಖೆಯ ಮೇಲೆ ದೀರ್ಘವಾಗಿ ಚರ್ಚೆಮಾಡತಕ್ಕ ಅವಕಾಶವಿರುವುದರಿಂದ ಈ ದಿವಸ ಕೆಲವು ಬಾಬುಗಳ ಬಗ್ಗೆ ಮತ್ತು ಅದಕ್ಕೆ ಹೊಂದಿರತಕ್ಕ ಅರ್ಥಿಕ ನೀತಿಯ ಬಗ್ಗೆ ಕೆಲವು ವಿಷಯಗಳನ್ನು ಹೇಳದೇ ವಿಧಿಯಿಲ್ಲ. ಪ್ರಥಮವಾಗಿ ಈ ದಿವಸ ಎಜ್ಯುಕೇಷನ್ ಡಿಮ್ಯಾಂಡ್ ಏನಿದೆ ಇದಕ್ಕೆ ಹೇರಳವಾಗಿ ಹಣವನ್ನು ಬಡ್ಜೆಟ್‌ನಲ್ಲಿ ಒದಗಿಸಿದ್ದೀರಿ. 19 ಕೋಟಿ ರೂಪಾಯಿಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದೀರಿ. ಮೊದಲನೆಯದು ವಿಶ್ವವಿದ್ಯಾನಿಲಯ. ಎರಡನೆಯದು ಪ್ರೌಢಶಾಲೆಗಳು ಮೂರನೆಯದು ಪ್ರಾಥಮಿಕ ವಿದ್ಯಾಭ್ಯಾಸ. ಮೊದಲನೆಯದಾಗಿ ಹೇಳುವುದಾದರೆ ವಿಶ್ವವಿದ್ಯಾನಿಲಯಕ್ಕೆ 3 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಈ ವಿದ್ಯಾಖಾತೆಯ ವಿಚಾರವಾಗಿ ನಮ್ಮ ದೇಶದಲ್ಲಿ ಒಂದು ದೊಡ್ಡ ಗೊಂದಲ ಎದ್ದಿದೆ. ಈ ವಿದ್ಯಾಭ್ಯಾಸದ ನೀತಿ ವಿಚಾರವಾಗಿಯೂ ಕೂಡ ನಮ್ಮ ದೇಶದಲ್ಲಿ ಒಂದು ಬಿಗಿಯಾದ ನೀತಿ ಇಲ್ಲದೇ ಇರುವುದು ಬಹಳ ದುರದೃಷ್ಟಕರ ಮತ್ತು ವಿಷಾದನೀಯ. ಯಾವ ದೇಶದಲ್ಲೂ ಅದರಲ್ಲೂ ಕೂಡ ಪ್ರಜಾಪ್ರಭುತ್ವದಲ್ಲಿ ನಮ್ಮ ದೇಶ ಮುಂದುವರಿಯಬೇಕಾದರೆ ವಿದ್ಯೆಗೆ ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಂಡು ಹೋಗಬೇಕು. ವಿದ್ಯೆ ಅದರಲ್ಲೂ ವಿಶ್ವವಿದ್ಯಾನಿಲಯದ ವಿದ್ಯೆ ದೇಶದಲ್ಲಿ ಮುಖಂಡರನ್ನು ತಯಾರು ಮಾಡತಕ್ಕ ಒಂದು ವಿದ್ಯಾಭ್ಯಾಸವಾಗಿದೆ. ಪದವೀಧರರನ್ನು ತಯಾರುಮಾಡತಕ್ಕ ವಿಶ್ವವಿದ್ಯಾನಿಲಯ

ಮುಂದೆ ಅವರು ಎಲ್ಲಾ ಕ್ಷೇತ್ರದಲ್ಲೂ ಪ್ರವೀಣರಾಗುವಂತೆ ಮಾಡತಕ್ಕ ವಿಶ್ವವಿದ್ಯಾನಿಲಯ, ಅದು ಸರ್ವ ಸುಂದರವಾದ, ಸರ್ವಸಮರ್ಪಕವಾದ ನೀತಿಯನ್ನು ಬೆಳೆಸಿಕೊಂಡು ಹೋಗಬೇಕಾಗಿದೆ. ಇವತ್ತು ಮೈಸೂರು ದೇಶದಲ್ಲಿ ಎರಡು ವಿಶ್ವವಿದ್ಯಾನಿಲಯಗಳು ಇವೆ. ಒಂದು ಕರ್ನಾಟಕ ವಿಶ್ವವಿದ್ಯಾನಿಲಯ, ಇನ್ನೊಂದು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಬಹಳ ಹಳೇ ಕಾಲದಿಂದಲೂ ಕೂಡ ಇಂಡಿಯಾ ದೇಶಕ್ಕೇ ಹೆಸರು ವಾಸಿಯಾದ ವಿಶ್ವವಿದ್ಯಾನಿಲಯವಾಗಿದೆ. ಬಹಳ ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದೆ. ಇಂಥಾ ವಿಶ್ವವಿದ್ಯಾನಿಲಯದಲ್ಲಿ ಸರ್ಕಾರದವರು ಒಂದು ಸರಿಯಾದ ನೀತಿಯನ್ನು ಅನುಸರಿಸಿಕೊಂಡು ಬರುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಈ ದಿವಸ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಬ್ಬ ಉಪಕುಲಪತಿಯವರನ್ನು ನೇಮಕ ಮಾಡದೆ ಈ ಪ್ರಶ್ನೆಯನ್ನು ಹಿಂದೆಹಿಂದಕ್ಕೆ ತಳ್ಳಿಕೊಂಡು ಬರುತ್ತಿದ್ದಾರೆ. ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಏಕೆ ಹೀಗೆ ಹಿಂದುಮುಂದು ನೋಡುತ್ತಿರುವುದರ ಕಾರಣವೇ ಗೊತ್ತಾಗುತ್ತಿಲ್ಲ. ಈ ಉಪಕುಲಪತಿಯವರನ್ನು ಖಾಯಂ ಆಗಿ ನೇಮಿಸತಕ್ಕ ಇಂಥಾ ಒಂದು ಸಣ್ಣ ಕೆಲಸವನ್ನು ಸಹ ಮಾಡಲು ಈ ಸರ್ಕಾರಕ್ಕೆ ಶಕ್ತಿಯಿಲ್ಲದಿದ್ದರೆ ಇವರು ಇನ್ನೇನು ಕೆಲಸ ಮಾಡಲು ಇವರಿಗೆ ಶಕ್ತಿಯಿದೆ ಎಂಬುದನ್ನು ಈಗ ಈ ಸಭೆಯು ವಿಚಾರ ಮಾಡಬೇಕಾಗಿದೆ. ಕಳೆದ ಆರು ತಿಂಗಳಿಂದಲೂ ಹೀಗೆ ಹಿಂದೆಮುಂದೆ ನೋಡುತ್ತಾ ಈ ಸ್ಥಾನಕ್ಕೆ ಯಾರನ್ನೋ ಒಬ್ಬರನ್ನು ಹೊರಗಡೆಯಿಂದ ತರುತ್ತೇವೆಂದು ಸರ್ಕಾರದವರು ಹೇಳಿಕೊಂಡು ಇದನ್ನು ಹಾಗೇ ತಳ್ಳಿಕೊಂಡು ಬರುತ್ತಿದ್ದಾರೆ. ಈ ವಿಚಾರದಲ್ಲಿ ನಮ್ಮ ಸರ್ಕಾರದವರ ಖಚಿತವಾದ ನಿಲುವೇನು ಎಂಬುದನ್ನು ಈ ಸಭೆಗೆ ಅವರು ತಿಳಿಸಲೇ ಬೇಕು. ಹೊರಗಡೆಯಿಂದ ಒಬ್ಬರನ್ನು ತರುವಂಥ ಪರಿಸ್ಥಿತಿಯಾದರೂ ಏನಿದೆ? ಹೊರಗಡೆಯವರನ್ನು ಏತಕ್ಕೆ ತರಬೇಕು? ಈ ದಿವಸ ನಮ್ಮ ರಾಜ್ಯದಿಂದ ಅನೇಕ ವಿದ್ಯಾವಂತರು-ಇಂಜಿನಿಯರುಗಳು-ಇತ್ಯಾದಿ ಅನೇಕರು ಹೊರಗಡೆಗೆ ಹೋಗುತ್ತಿದ್ದಾರೆ. ನಮ್ಮಲ್ಲಿ ಅನೇಕ ಜನ ತಜ್ಞರಿರುತ್ತಾರೆ. ಇವರು ಹೊರಗಡೆ ಹೋಗಿ ತಮ್ಮ ಕರ್ತವ್ಯ ನಿರ್ವಹಿಸಿ ಅಲ್ಲಿ ಖ್ಯಾತಿಗಳಿಸಿದ್ದಾರೆ. ಅಂಥ ದಕ್ಷರಾದ ವಿದ್ಯಾವಂತರು ನಮ್ಮಲ್ಲೇ ಇರುವಾಗ ಈ ದಿವಸ ನಾವು ಈ ಸ್ಥಾನಕ್ಕೆ ಒಬ್ಬರನ್ನು ಹೊರಗಡೆಯಿಂದ ತರುವುದೆಂದರೆ ಏನರ್ಥ? ಇಂಥ ಮೀನಾಮೇಷವನ್ನು ನಮ್ಮ ಸರ್ಕಾರ ಏಕೆ ಮಾಡುತ್ತಿದೆಯೋ ಕಾಣೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಷ್ಪಕ್ಷವಾದ ಯೋಗ್ಯರಾದವರನ್ನು ತರುತ್ತಾರೆ.

ಶ್ರೀ ಎಸ್. ಶಿವಪ್ಪ.—ನಾನೂ ಸಹ ಅಂಥಾ ಯೋಗ್ಯರಾದವರನ್ನೂ ನಿಷ್ಪಕ್ಷಪಾತದಿಂದ ಕೆಲಸ ಮಾಡತಕ್ಕವರನ್ನೇ ಅಲ್ಲಿಗೆ ಹಾಕಬೇಕೆಂದು ಹೇಳುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ.—ಈ ಹಿಂದೆ ನೀವೇ ಹೊರಗಡೆಯಿಂದ ಯಾರನ್ನಾದರೂ ತರಬೇಕಾಗಿತ್ತು ಎಂದು ಹೇಳಿಲ್ಲವೇ?

ಶ್ರೀ ಎಸ್. ಶಿವಪ್ಪ.—ನಾನು ಹಾಗೆ ಎಂದೂ ಹೇಳಿಲ್ಲವೆಂದು ಖಚಿತವಾಗಿ ತಿಳಿಸುತ್ತೇನೆ. ನಮ್ಮ ರಾಜ್ಯವನ್ನು ಆಳುವಶಕ್ತಿ ನಮಗಿದೆ ಎಂದು ಹೇಳತಕ್ಕವರಲ್ಲಿ ನಾನೂ ಒಬ್ಬ. ಸಮಯಕ್ಕೆ ತಕ್ಕ ಹಾಗೆ ಸಾಧನೆಮಾಡಲು, ಮಾತನಾಡಲು, ತರ್ಕವನ್ನು ಬದರಾವಣೆ ಮಾಡಿಕೊಳ್ಳುವ ಅಗತ್ಯ ನಮ್ಮ ಪಕ್ಷಕ್ಕಿಲ್ಲ. ಆ ಪಕ್ಷದವರಿದ್ದರೂ ಇರಬಹುದು.

ಇನ್ನು ವಿದ್ಯಾರ್ಥಿಗಳ ವಿಚಾರಕ್ಕೆ ಬಂದರೆ ಈ ದಿವಸ ಸರ್ಕಾರದವರು ಈ ಕಾಲೇಜುಗಳ ಫೀ ಜಾಸ್ತಿಮಾಡತಕ್ಕ ಸಂದರ್ಭದಲ್ಲಿ ಹೊರಡಿಸಿರತಕ್ಕ ಆಜ್ಞೆಯಿಂದ ಅನೇಕ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯುಂಟಾಗಿದೆ. ಫೀ ಜಾಸ್ತಿಮಾಡಿ ಕಾಲೇಜುಗಳ ಆಡಳಿತವನ್ನು ಅಭಿವೃದ್ಧಿ ಮಾಡುತ್ತೇವೆ, ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುತ್ತೇವೆ, ವಿದ್ಯಾರ್ಥಿಯರುಗಳನ್ನು ನೇಮಕ ಮಾಡುತ್ತೇವೆಂದು ಏನೇನೋ ಆಶ್ವಾಸನೆಗಳನ್ನು ನಮ್ಮ ವಿದ್ಯಾ ಮಂತ್ರಿಗಳು ಕೊಟ್ಟಿದ್ದರು. ಆದರೆ ಈ ದಿವಸ ಆ ಆಶ್ವಾಸನೆಗಳನ್ನು ಅವರು ಎಷ್ಟರ ಮಟ್ಟಿಗೆ ಈಡೇರಿಸಿದ್ದಾರೆ? ಈ ವಿಚಾರವನ್ನು ಕೇಳುವಹಾಗೇ ಇಲ್ಲ. ಯಾರಾದರೂ ಒಬ್ಬ ವಿದ್ಯಾರ್ಥಿಗೆ ಈ ದಿವಸ ಸ್ಕಾಲರ್‌ಷಿಪ್ ಬಂದರೆ ಅವನಿಗೆ ಫ್ರೀಷಿಪ್ ಇಲ್ಲ ಎಂದು ಆಜ್ಞೆ ಮಾಡಿದ್ದಾರೆ. ಇದರಿಂದ ಬಹಳ ಕುಂದುಕ ಉಂಟಾಗಿದೆ. ಯಾವತ್ತೂ ಇಂಥ ಆಜ್ಞೆ ಹೊರಟಿರಲಿಲ್ಲ. ಇಲ್ಲಿಯತನಕ ಯಾವ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನ ದೊರೆಯುತ್ತಿತ್ತೋ ಅವನು ಸ್ಕೂಲು ಫೀಜನ್ನು ಕೊಡಬೇಕಾಗಿರಲಿಲ್ಲ. ಆದರೆ ಈ ದಿವಸ ಹೊರಡಿಸಿರತಕ್ಕ ವಿಚಿತ್ರ ಆಜ್ಞೆಯಿಂದ ಅವನು ಸ್ಕೂಲು ಫೀ ಕೊಡಬೇಕಾಗಿದೆ. ಇದರಿಂದ ಸ್ಕಾಲರ್‌ಷಿಪ್ ಬರತಕ್ಕ ಅನೇಕ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯುಂಟಾಗಿದೆ. ದಯವಿಟ್ಟು ಈ ಆಜ್ಞೆಯನ್ನು ಸರ್ಕಾರದವರು ವಾಪಸ್ಸು ತೆಗೆದುಕೊಂಡು ಆ ತೊಂದರೆಯನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ವಿದ್ಯಾರ್ಥಿಗಳು ಕೊಡತಕ್ಕ ಫೀ ಜಾಸ್ತಿ ಆಗಿದ್ದರೂ ಹೆಚ್ಚು ಉಪಾಧ್ಯಾಯರನ್ನು ನೇಮಕಮಾಡದಿದ್ದರೆ ಹೋಗಲಿ ಎಷ್ಟು ಜನ ಒಂದು ಕಾಲೇಜಿಗೆ ಉಪಾಧ್ಯಾಯರಿರಬೇಕೋ ಅಷ್ಟನ್ನು ಕೂಡ ಈಗ ನೇಮಕಮಾಡಿಲ್ಲ.

ಹೀಗಾಗಿ ಕಾಲೇಜುಗಳಲ್ಲಿ ಎಲ್ಲಿಯೂ ಪಾಠ ಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ. ನಮ್ಮ ಹಾಸನ ಕಾಲೇಜು ಒಂದನ್ನೇ ತೆಗೆದುಕೊಳ್ಳೋಣ. ಅದಕ್ಕೆ ಒಬ್ಬ ಖಾಯಂ ಪ್ರಿನ್ಸಿಪಾಲರನ್ನು ನೇಮಿಸತಕ್ಕ ಬಗ್ಗೆ ಸರ್ಕಾರಕ್ಕೆ ಎಷ್ಟೋ ತಂತಿ ಸಮಾಚಾರಗಳನ್ನು ಕೊಟ್ಟಿದ್ದಾಯಿತು. ಆದರೂ ಆ ಕೆಲಸ ಮಾಡಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಇನ್ನು ಎಷ್ಟರ ಮಟ್ಟಿಗೆ ಈ ಸರ್ಕಾರಕ್ಕೆ ಕಾಲೇಜುಗಳ ಆಡಳಿತ ನಿರ್ವಹಿಸಲು ಶಕ್ತಿ ಇದೆ ಎಂಬುದನ್ನು ನಾವು ಅರಿತುಕೊಳ್ಳಬಹುದು. ಆದರೆ ಎಷ್ಟೋ ಸಾರ್ತಿ ವೇದಿಕೆಗಳ ಮೇಲೆ ವಿದ್ಯಾ ಮಂತ್ರಿಗಳೇ ಖುದ್ದಾಗಿ ಈ ಸರ್ಕಾರಿ ಕಾಲೇಜುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಮ್ಮ ಕಾಲೇಜುಗಳಲ್ಲಿ ವಿಧ್ಯಾ ಮಟ್ಟ ಕೆಳಗಿಳಿಯುತ್ತಿದೆಯೆಂದೂ ಈ ವಿಚಾರ ವಲ್ಲಿ ಖಾಸಗೀ ಕಾಲೇಜುಗಳೇ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದೂ ಅನೇಕ ಕಡೆ ಹೇಳಿದ್ದಾರೆ. ಇದು ಏನನ್ನು ಸೂಚಿಸುತ್ತಿದೆಯೆಂದರೆ—ಅವರನ್ನು ಅವರೇ ನಿಂದನೆ ಮಾಡಿಕೊಂಡಿದ್ದಾರೆ. ಅವರು ಕಾಲೇಜಿಗೆ ಸಕಾಲಕ್ಕೆ ಉಪಾಧ್ಯಾಯರನ್ನು ನೇಮಕ ಮಾಡದೆ ಮತ್ತು ವಿದ್ಯಾರ್ಥಿಗಳಿಗೆ ಬೇಕಾದ ಸಲಕರಣೆಗಳನ್ನು ಒದಗಿಸದೆ ಕಾಲೇಜುಗಳ ಆಡಳಿತ ನಡೆಸುವ ನೀತಿಗೆ ಏನೆಂದು ಹೇಳೋಣ? ಅವರ ಆಡಳಿತದಲ್ಲಿರತಕ್ಕ ಕಾಲೇಜುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳತಕ್ಕವರು ಆ ಸ್ಥಾನದಲ್ಲಿರುವುದಕ್ಕೆ ಲಾಯಖ್ಖೆ? ಎಂಬ ಪ್ರಶ್ನೆಗೆ ಅವರೀಗ ಉತ್ತರ ಕೊಡಬೇಕಾಗಿದೆ. ಯಾವಾಗ ಒಂದು ಸ್ಥಾನದಲ್ಲಿ ಒಬ್ಬರಿರುತ್ತಾರೋ ಆಗ ಅವರು ಅವರ ಕೆಲಸವನ್ನು ದಕ್ಷತೆಯಿಂದ ನೆರವೇರಿಸಲು ಸಾಧ್ಯವಿಲ್ಲವೆಂದು ಕಂಡುಬಂದಾಗ ಅವರು ಅವರ ಜವಾಬ್ದಾರಿಯನ್ನು ನಿರ್ವಹಿಸಿದಂತೆ ಆಗಲಿಲ್ಲ. ಹಾಗೆ ತಮ್ಮ ಜವಾಬ್ದಾರಿಯನ್ನು ಯಾವಾಗ ಅವರು ಸರಿಯಾಗಿ ನಿರ್ವಹಿಸಲಿಲ್ಲವೋ ಆಗ ಅವರು ಆ ಸ್ಥಾನದಲ್ಲಿರುವ ಹಕ್ಕು ಅವರಿಗಿರುತ್ತದೆಯೇ ಎಂಬ ಮೂಲಭೂತ ಪ್ರಶ್ನೆಗೆ ಅವರೀಗ ಉತ್ತರ ಹೇಳಬೇಕಾಗಿದೆ.

ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಆಹಾರೋತ್ಪನ್ನಗಳನ್ನು ಜಾಸ್ತಿ ಮಾಡಬೇಕು, ವ್ಯವಸಾಯಕ್ಕೆ ಹೆಚ್ಚಿನ ನಿಗಾ ಕೊಡಬೇಕು ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಿ ಸರ್ಕಾರದ ಗಮನವನ್ನು ಸೆಳೆಯಬೇಕೆಂದಿದ್ದೇನೆ. ವ್ಯವಸಾಯಕ್ಕೆ ಪ್ರಾಮುಖ್ಯತೆ ಕೊಟ್ಟು ವ್ಯವಸಾಯವನ್ನು ಹೆಚ್ಚು ಮಾಡಬೇಕಾದ್ದರಿಂದ ಹೆಚ್ಚು ನಿಗಾ ಕೊಡುತ್ತೇವೆ. ಹೆಚ್ಚು ಹಣ ಖರ್ಚು ಮಾಡುತ್ತೇವೆನ್ನುವ ಈ ಸರ್ಕಾರ ಈಗಾಗಲೇ ಅವರು ಒಂದು ನಿರ್ಧಾರ ಕೈಗೊಂಡಿರುವುದರಲ್ಲಿ ವ್ಯವಸಾಯವನ್ನು ಹೆಚ್ಚು ಮಾಡುವಂಥ ದೃಷ್ಟಿಗೆ ಕುಂದನ್ನು ತಂದಿದೆ ಎಂದು ನನ್ನ ಭಾವನೆ. ಕೇಂದ್ರ ಸರ್ಕಾರವು ಮೈಸೂರು ರಾಜ್ಯಕ್ಕೆ 23 ಸಂಶೋಧನಾ ಕೇಂದ್ರಗಳನ್ನೂ ಕೊಟ್ಟಿದೆ. ಅದರಲ್ಲಿ citrus, cashe wnuts ಮುಂತಾದುವುಗಳ ಸಂಶೋಧನೆಗಾಗಿ ಅನೇಕ ರೀತಿಯ ಸಹಾಯವನ್ನೂ, ಹಣವನ್ನೂ ಕೊಟ್ಟು ವ್ಯವಸ್ಥೆ ಮಾಡಿದೆ. ಅದೂ ಅಲ್ಲದೆ Indian Council of Agriculture ನಿಂದ ಸಹ ಇಂಥ ಸಹಾಯವನ್ನು ಪಡೆದು ಕೇಂದ್ರಗಳು ಸ್ಥಾಪನೆಯಾಗಿ ವ್ಯವಸಾಯ ಇಲಾಖೆಯ ಅಧೀನದಲ್ಲಿ ನಡೆಯುತ್ತ ಬಂದಿವೆ. ಈ 23 ಕೇಂದ್ರಗಳನ್ನು ವ್ಯವಸಾಯ ಇಲಾಖೆಯಿಂದ ತೆಗೆದು ಒಬ್ಬ Director of Horticulture ಎಂದು ಮಾಡಿ ಅವರ ಅಧೀನದಲ್ಲಿಡಬೇಕು ಎನ್ನುವ ಕಾರ್ಯಕ್ರಮವನ್ನು ಮೈಸೂರು ಸರ್ಕಾರ ಸಾಧಾರಣವಾಗಿ ಐದಾರು ವರ್ಷಗಳಿಂದ ಆಲೋಚನೆ ಮಾಡುತ್ತ ಬಂದಿದೆ. ಈ ಒಂದು ಆಲೋಚನೆಯನ್ನು ಕೇಂದ್ರ ಸರ್ಕಾರದವರು ಅನೇಕ ವರ್ಷಗಳಿಂದ ಒಪ್ಪಲಿಲ್ಲ. ಇವೊತ್ತು ನಮ್ಮ ದೇಶ ಪಂಜಾಬ್ ಹಣ್ಣು ಹಂಪಲಿನ ಒಂದು ಕೇಂದ್ರವಾಗಿ ಬೆಳೆದಿದೆ. ಅಲ್ಲಿ ಹಣ್ಣು ಹಂಪಲಿನ ಬೆಳವಣಿಗೆಯನ್ನು ಬಹಳ ಉತ್ತಮವಾದ ಮಟ್ಟದಲ್ಲಿ ಮಾಡಿದ್ದಾರೆ. ಅಂಥ ಒಂದು ರಾಜ್ಯದಲ್ಲಿಯೂ ಸಹ

ತೋಟಗಾರಿಕೆ ವ್ಯವಸಾಯ ಇಲಾಖೆಯ ಅಧೀನದಲ್ಲಿದೆ. ಈ ಹಣ್ಣು ಹಂಪಲಿನ ಸಂಶೋಧನಾ ಕೇಂದ್ರಗಳು ವ್ಯವಸಾಯ ಇಲಾಖೆಯ ಅಧೀನದಲ್ಲಿರುವುದರಿಂದ ಒಂದು ಪ್ರಯೋಜನವೇನಿವೆ ಎಂದರೆ, ವ್ಯವಸಾಯ ಇಲಾಖೆಯಲ್ಲಿರುವಂಥ Entomology, Pathology, Chemistry ಮುಂತಾದ ಪ್ರಯೋಗ ಶಾಲೆಗಳನ್ನು ಈ ಸಂಶೋಧನಾ ಕೇಂದ್ರಗಳು ಉಪಯೋಗಿಸುವಂಥ ಸೌಲಭ್ಯ ದೊರೆಯುತ್ತಿದೆ. ಇದನ್ನು ವಿಂಗಡಿಸಿ ಪ್ರತ್ಯೇಕವಾಗಿ Director of Horticulture ಎಂದು ಮಾಡಬೇಕು ಎನ್ನುವಂಥ ಕಾರ್ಯಕ್ರಮವನ್ನು ಮೈಸೂರು ಸರ್ಕಾರ ಆಲೋಚನೆ ಮಾಡಿದ್ದರೂ ಸಹ ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಅದನ್ನು ನಿರಾಕರಿಸಿತ್ತು. ಆದರೆ ಮೊನ್ನೆ ಮೊನ್ನೆ ಈ ಸಂಶೋಧನಾ ಕೇಂದ್ರಗಳನ್ನು ವಿಂಗಡಿಸಿ Director of Horticulture ಎಂದು ಒಬ್ಬರನ್ನು ಮಾಡಿ ಅವರ ಅಧೀನದಲ್ಲಿ ಆ ಕೇಂದ್ರಗಳನಿಟ್ಟಿದ್ದಾರೆ. ಇದರ ಪರಿಣಾಮ ಹಣ್ಣು ಹಂಪಲನ್ನು ಬೆಳೆಸುವ ಸಂಶೋಧನಾ ಕಾರ್ಯಗಳಿಗೆ ಪ್ರಯೋಗಶಾಲೆಗಳ ಉಪಯೋಗ ಹೇಗೆ ಆಗ ಬೇಕು ಎನ್ನುವುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಇವೊತ್ತು ಒಂದು Department ಎಂದು ಮಾಡಿ ಅದಕ್ಕೆ ಈ ಸಂಶೋಧನಾ ಕೇಂದ್ರಗಳನ್ನು ವಹಿಸಿದ್ದೇ ಆದರೆ, ಅಲ್ಲಿ Pathology, ಅಥವಾ Entomology, ಅಥವಾ ಇನ್ನೂ ಯಾವುದಾದರೂ ವಿಷಯಕ್ಕೆ ಸಂಬಂಧಿಸಿದ ಪ್ರಯೋಗ ಶಾಲೆ ಇಲ್ಲ. ವ್ಯವಸಾಯ ಇಲಾಖೆಯಲ್ಲಿರುವಂಥ ಪ್ರಯೋಗ ಶಾಲೆಗಳನ್ನು ಉಪಯೋಗಿಸುವಂಥ ಸೌಲಭ್ಯವಿಲ್ಲದೆಹೋಯಿತು.

ಎರಡನೆಯದಾಗಿ ಇವುಗಳಿಗೆ ಖರ್ಚಾಗುವ ಹಣವನ್ನು ಕೇಂದ್ರ ಸರ್ಕಾರ ಮತ್ತು Indian Council of Agriculture ಇವರು ಕೊಡುವಾಗ ಒಂದು ನಿಬಂಧನೆಯನ್ನು ಹಾಕಿದ್ದಾರೆ. 23 ಹಣ್ಣು ಹಂಪಲು ಸಂಶೋಧನಾ ಕೇಂದ್ರಗಳನ್ನು Supervise ಮಾಡು ವುದರಲ್ಲಿ ಯಾವುದಾದರೂ ರೀತಿಯ ಬದಲಾವಣೆ ಮಾಡಬೇಕಾದರೆ ಕೇಂದ್ರ ಸರ್ಕಾರವನ್ನು ಕೇಳಿಯೇ ಮಾಡಬೇಕು ಎಂಬ ನಿಬಂಧನೆ ಇದೆ. ಆದರೂ ಸಹ ಅವರನ್ನು ಕೇಳದೆ Department of Horticulture ಎಂದು ಮಾಡಿ ಅದರ ಸ್ವಾಧೀನಕ್ಕೆ ಈ ಸಂಶೋಧನಾ ಕೇಂದ್ರಗಳನ್ನು ಕೊಟ್ಟಿ ದ್ದಾರೆ. ಇದರಿಂದ ಹಣ್ಣು ಹಂಪಲಿನ ಬೆಳವಣಿಗೆ ಆಗುತ್ತದೆಯೋ ಇಲ್ಲವೋ ಎನ್ನುವ ಸಂಶಯ ವುಂಟಾಗಿದೆ. ಇದನ್ನು ಸರ್ಕಾರ ಸ್ವಲ್ಪ ಗಮನದಲ್ಲಿಡಬೇಕು. ಪಂಜಾಬಿನಲ್ಲಿ ಹಣ್ಣು ಹಂಪಲನ್ನು ಎಷ್ಟರ ಮಟ್ಟಿಗೆ ಬೆಳೆಯುತ್ತಾರೆ, ಎಷ್ಟು ಉತ್ಪನ್ನ ಮಾಡುತ್ತಾರೆ, ಎಂಬುದನ್ನು ನೋಡಿದ್ದೇ ಆದರೆ, ಅದಕ್ಕೆ ಒಂದು ಇಲಾಖೆಯನ್ನು ಮಾಡಬೇಕಾಗಿತ್ತು. ಆದರೂ ಸಹ ಅಂಥರಾಜ್ಯದಲ್ಲಿಯೂ ಹಣ್ಣು ಹಂಪಲಿನ ಸಂಶೋಧನಾ ಕೇಂದ್ರಗಳನ್ನು ವ್ಯವಸಾಯ ಇಲಾಖೆಯಿಂದ ವಿಂಗಡಿಸಿಲ್ಲ. ಇಡೀ ಹಿಂದೂ ದೇಶದಲ್ಲಿ ಯಾವ ರಾಜ್ಯದಲ್ಲಿಯೂ Horticulture ಇಲಾಖೆಯನ್ನು ಪ್ರತ್ಯೇಕಮಾಡಿಲ್ಲ. ಇಂಥ ನಿದರ್ಶನಗಳಿರು ವಂಥ ಸಂದರ್ಭದಲ್ಲಿ ವ್ಯವಸಾಯ ಇಲಾಖೆಯಲ್ಲಿ ಅನೇಕ ಪ್ರಯೋಗಶಾಲೆಗಳಿದ್ದು ಅವನ್ನು ಉಪ ಯೋಗಿಸುವಂಥ ಸೌಲಭ್ಯವಿದ್ದು, ಕೇಂದ್ರ ಸರ್ಕಾರ ಅದಕ್ಕೆ ವಿರೋಧವಾಗಿದ್ದರೂ ಸಹ ಅದನ್ನು ಬೇರೆ ಇಲಾಖೆಯಾಗಿ ಮಾಡಿ, ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್ ಎಂದು ಮಾಡಿದ್ದಾರೆ.

MR. SPEAKER.—If a Horticulture Department is separately established, does it prevent the use of the laboratory by the Horticulture Department?

SRI S. R. KANTHI.—I cannot say. I think it may not prevent.

MR. SPEAKER.—I think so. They are co-ordinating departments; they are not independent departments to fight with each other.

SRI V. M. DEO.—Research on horticulture is conducted in Lal-bagh, while research on agriculture is carried on in Hebbal. There may be overlapping of work in the research carried on in two different places.

SRI S. R. KANTHI.— This is the first time I am hearing about the difficulty. I suppose Government will look into it.

ಶ್ರೀ ಎ. ಪಿ. ಅಪ್ಪಣ್ಣ.—ಪ್ರತ್ಯೇಕ ಇಲಾಖೆಯನ್ನು ಮಾಡಿ, ಕೇಂದ್ರದಿಂದ ಕೊಟ್ಟಂಥ ಈ ಸಂಶೋ ಧನಾ ಕೇಂದ್ರಗಳನ್ನು ಆ ಇಲಾಖೆಯ ಅಧೀನದಲ್ಲಿಡಲಿಕ್ಕೆ ಸರ್ಕಾರದ ಆರ್ಡರಿನಲ್ಲಿ ಏನು ಕಾರಣ ಕೊಟ್ಟಿದ್ದಾರೆಂದರೆ ನೂರಕ್ಕೆ 60ಭಾಗ ಉಳಿತಾಯ ಮಾಡುತ್ತೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಕೊಡುವಂಥ ಹಣವನ್ನು ಪೂರ್ತಿಯಾಗಿ ಉಪಯೋಗಿಸಿ ಸಂಶೋಧನೆಯ ಪ್ರಯೋಜನವನ್ನು ಹೊಂದುವಂಥ ಕಾರ್ಯದಲ್ಲಿ ನೂರಕ್ಕೆ 60ಭಾಗ ಉಳಿತಾಯ ಮಾಡುತ್ತೇವೆ ಎಂದು ಹೇಳುವುದಾದರೆ

ಅವರು ಕೊಡತಕ್ಕ ಒಂದು ಕೋಟಿ ರೂಪಾಯಿನಲ್ಲಿ 40ಲಕ್ಷ ರೂಪಾಯಿ ಖರ್ಚುಮಾಡಿ 60ಲಕ್ಷ ರೂಪಾಯಿ ಹಿಂದಕ್ಕೆ ಕೊಡುವಂತಾಗುತ್ತದೆ. ಆ ದೃಷ್ಟಿಯಿಂದ ವ್ಯವಸಾಯ ಮಂತ್ರಿಗಳು ಮೊದಲಿನಿಂದಲೂ ಈ ರೀತಿಯ ಬದಲಾವಣೆ ಆಗಬಾರದೆನ್ನುವಂಥ ರೀತಿಯಲ್ಲಿದ್ದರೂ ಅದಕ್ಕೆ ಒಪ್ಪದೇ ಇದ್ದರೂ ಸಹ, ಈಗಿನ ಸಂದರ್ಭದಲ್ಲಿ ಹಣಕಾಸಿನ ಮಂತ್ರಿಗಳು ಒಪ್ಪುವುದಕ್ಕೆ ತಯಾರಿಲ್ಲದೆ ಇದ್ದರೂ ಸಹ, ಇಂಥ ನಿರ್ಣಯವನ್ನು ಕೈಗೊಂಡಿದ್ದಾರೆ. ಇದು ನಮ್ಮ ದೇಶದಲ್ಲಿ ನಡೆಯುವಂಥ ಹಣ್ಣು ಹಂಪಲಿನ ಸಂಶೋಧನಾ ಕೇಂದ್ರಕ್ಕೆ ಧಕ್ಕೆ ಬರುತ್ತದೆ, ಹಣ್ಣು ಹಂಪಲಿನ ಉತ್ಪತ್ತಿ ಜಾಸ್ತಿಯಾಗುವುದಿಲ್ಲ, ವ್ಯವಸಾಯಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಂತೆ ಆಗುವುದಿಲ್ಲವೆಂದು ಈ ಮೂಲಕ ಸರ್ಕಾರಕ್ಕೆ ಹೇಳಲು ಬಯಸುತ್ತೇನೆ. ಇದನ್ನು ಸರಕಾರ ಪುನಃ ಪರ್ಯಾಲೋಚಿಸಬೇಕು. ತಾವು ಮಾಡಿದಂತಹ ವ್ಯವಸಾಯದ ವ್ಯವಸ್ಥೆಗೆ ಧಕ್ಕೆ ಬರುತ್ತದೆ. ಹಣ್ಣು ಹಂಪಲು ಸಂಶೋಧನೆಗೆ ಧಕ್ಕೆ ಬರುತ್ತದೆ ಎನ್ನುವುದನ್ನು ಪರ್ಯಾಲೋಚಿಸಬೇಕು ಎಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

5-00 P.M.

ಮತ್ತೆ ಇದೇ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಅನೇಕ ಸಾವಿರ ಎಕರೆಗಳಷ್ಟು ಭೂಮಿಯಲ್ಲಿ ಕಾಫಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಈ ದೇಶದಲ್ಲಿ ಇವರ ಉತ್ಪನ್ನವು ಇನ್ನೂ ಹೆಚ್ಚುತ್ತಿದೆ. ಇವೊತ್ತು ಕಾಫಿಯ ಬೇಸಾಯ ಮಾಡುವವರಿಗೆ ಒಂದು ದೊಡ್ಡ ಧಕ್ಕೆಯಾಗಿದೆ ಅದೇನೆಂದರೆ, ಮೊದಲು ಅವರಿಗೆ ಹಣವನ್ನು ಸಾಲವಾಗಿ ಪಡೆಯುವ ಸೌಲಭ್ಯಗಳು ಎಷ್ಟಿತ್ತೋ ಅದು ಇವೊತ್ತಿನ ದಿವಸ ಬಹಳ ಕಡಿಮೆಯಾಗಿದೆ. ಆ ದೃಷ್ಟಿಯಿಂದ ಕೇಂದ್ರ ಸರಕಾರ ಕಾಫಿಬೋರ್ಡಿನ ಮೂಲಕ ನಮ್ಮ ರಾಜ್ಯಕ್ಕೆ ಡೆವಲಪ್‌ಮೆಂಟ್ ಲೋನಿಗೆಂದು ಎರಡು ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದಾರೆ. ಆದರೆ ಇದನ್ನು ಕಾಫೀಬೋರ್ಡಿನಿಂದಲೇ ನೇರವಾಗಿ ಕೊಡುವಂತೆ ವ್ಯವಸ್ಥೆಮಾಡಿರುವುದರಿಂದ ಇದರ ವ್ಯವಹಾರವನ್ನೆಲ್ಲಾ ಬೆಂಗಳೂರಿನಲ್ಲೇ ಮಾಡಬೇಕಾಗಿದೆ. ಮತ್ತೆ ಲೋನನ್ನು ಪಡೆಯಬೇಕಾದರೆ, ಕಾಫಿಬೆಳೆಯುವವರೆಲ್ಲಾ ಬೆಂಗಳೂರಿಗೆ ಬಂದು, ಇಲ್ಲಿಯೇ ಅರ್ಜಿಗಳನ್ನು ಬರೆಯುವುದು, ಮತ್ತಿತರ ಕಾರ್ಯಕಲಾಪಗಳನ್ನು ಪೂರ್ಣಗೊಳಿಸಬೇಕಾದರೆ ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತದೆ ಹಾಗೆ 1,75,000 ಲಕ್ಷ ರೂಪಾಯಿಗಳಷ್ಟು ಉಳಿಯುತ್ತದೆ. ಈ ಸಂದರ್ಭದಲ್ಲಿ ನಾನು ಸರಕಾರವನ್ನು ಕೇಳಿಕೊಳ್ಳುವುದು ಈ ಎರಡು ಕೋಟಿ ರೂಪಾಯಿಗಳಷ್ಟು ರಾಜ್ಯ ಸರಕಾರದವರೇ ನೇರವಾಗಿ ಕೇಂದ್ರದವರಿಂದ ಪಡೆದು, ಒಂದು ರಿಯಾಯತಿಯಿಂದ ಕಾಫಿ ಬೆಳೆಯುವವರಿಗೆ ಅದನ್ನು ಉಪಯೋಗಿಸಲು ಕೊಡುವಂತೆ ಮಾಡಿದರೆ, ಎರಡು ಕೋಟಿಯಷ್ಟು ಹಣದ ಪೂರ್ಣ ಪ್ರಯೋಜನವನ್ನು ನಮ್ಮ ದೇಶದಲ್ಲಿ ಕಾಫಿ ಬೆಳೆಯನ್ನು ಬೆಳೆಯುವ ಬೇಸಾಯಗಾರರು ಪಡೆಯುವಂತೆ ಆಗುತ್ತದೆ. ಅಲ್ಲದೆ ರಾಜ್ಯ ಸರಕಾರದವರು ಈ ಜವಾಬ್ದಾರಿಯನ್ನು ಹೊತ್ತು, ಅವರು ಈ ಹಣವನ್ನು ಕೊಡುವ ನಿಯಮಗಳನ್ನು ಸಹ ಸ್ವಲ್ಪ ಸುಲಭರೀತಿಯಲ್ಲಿ ಸಡಿಲಮಾಡಿದರೆ ಇದರಿಂದ ಜನರು ಈ ಕೃಷಿಯ ಪ್ರಯೋಜನವನ್ನು ಹೊಂದುವುದಕ್ಕಾಗುತ್ತದೆ. ನಮ್ಮ ಮೈಸೂರು ರಾಜ್ಯದಲ್ಲಿ ಕಾಫಿಯನ್ನು ಬೆಳೆಯುವ ಸ್ಥಳಗಳು ಅನೇಕವಿವೆ. ಅನೇಕ ಎಕರೆಗಳಷ್ಟು ಜಮೀನಿನಲ್ಲಿ ಕಾಫಿಯನ್ನು ಬೆಳೆಸಲು ಯೋಗ್ಯವಾದಂತಹ ಜಮೀನುಗಳಿವೆ, ಇಂತಹ ಬೆಳೆಯನ್ನು ಅಭಿವೃದ್ಧಿ ಮಾಡುವುದರಿಂದ ಕೇಂದ್ರ ಸರ್ಕಾರ ಕೊಡತಕ್ಕಂತಹ ಎರಡು ಕೋಟಿ ರೂಪಾಯಿಗಳನ್ನು ಉಪಯೋಗಿಸಿಕೊಂಡು ಅದರಿಂದ ಅನೇಕ ಎಕರೆಗಳಷ್ಟು ಭೂಮಿಯಿಂದ ಕಾಫಿ ಬೆಳೆಯನ್ನು ಮಾಡಿಕೊಳ್ಳಬಹುದು ಮತ್ತು ನಮ್ಮ ದೇಶದ ಆರ್ಥಿಕ ಸ್ಥಿತಿಯೂ ಉತ್ತಮವಾಗುತ್ತದೆ. ಅದೂ ಅಲ್ಲದೆ ಇದರಿಂದ ಫಾರಿನ್ ಎಕ್ಸ್‌ಚೇಂಜೂ ಸಿಕ್ಕಿ ನಮ್ಮ ದೇಶದ ಕೆಲಸವೂ ಅನುಕೂಲವಾಗುವಂತೆಮಾಡಲು ಆಗುತ್ತದೆ. ಈ ದೃಷ್ಟಿಯಿಂದ ಕೇಂದ್ರ ಸರಕಾರ ಕಾಫಿ ಬೋರ್ಡಿನ ಮೂಲಕ ಕೊಡುವ ಎರಡು ಕೋಟಿ ರೂಪಾಯಿಗಳನ್ನು ರಾಜ್ಯ ಸರಕಾರವೇ ಪಡೆದು, ಹಣದ ಹಂಚುವಿಕೆಯ ನಿಯಮವನ್ನು ಸ್ವಲ್ಪ ಸಡಿಲಮಾಡಿ ಎಲ್ಲ ಹಣವನ್ನು ಪೂರ್ತಿಯಾಗಿ ಕಾಫಿ ಬೆಳೆಯುವವರು ಉಪಯೋಗಮಾಡಿಕೊಳ್ಳುವಂತೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಅರ್ಥಸಚಿವರು ತಮ್ಮ ಭಾಷಣದಲ್ಲಿ ನಮ್ಮ ದೇಶದಲ್ಲಿ ಇಂದು ತುರ್ತಿನ ಪರಿಸ್ಥಿತಿ ಬಂದಿರುವುದರಿಂದ ಸಾಕಷ್ಟು ಹಣವನ್ನು ನೀರಾವರಿ ಯೋಜನೆಗಳಿಗೆ ಮತ್ತು ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗಾಗಿ ಉಪಯೋಗಿಸುತ್ತಿದ್ದೇವೆ ಮತ್ತು ನಮ್ಮ ದೇಶದಲ್ಲಿ ಇನ್ನು ಮುಂದೆ ಕೊಡಬೇಕಾದಂತಹ ಸಹಾಯ ಮತ್ತು ಸಾಲದ ಹಣವನ್ನು ಕೊಡುವುದರ ನಿಯಮಗಳನ್ನು ಸಡಿಲ ಮಾಡಿದ್ದೇವೆನ್ನುವ ಭಾವನೆಯಲ್ಲಿ ಹೇಳಿದ್ದಾರೆ. ಇವೊತ್ತು ಈ ರೀತಿಯ ಯೋಜನೆಗಳನ್ನು ಪೂರ್ತಿಯಾಗಿ ನಾವು ಮಾಡಿದ್ದೇ ಆದರೆ ನಮ್ಮ ರಾಜ್ಯದ ಅನೇಕ ಸ್ಥಳಗಳಲ್ಲಿ ಬೆಳೆಸಿರತಕ್ಕ ಬೆಳೆಯನ್ನು

ಬೇರೆ ಬೇರೆ ಸ್ಥಳಗಳಿಗೆ ಹಾಗೂ ಮಾರ್ಕೆಟ್ಟುಗಳಿಗೆ ಹೋಗಿ ಈ ಆಹಾರದ ಪದಾರ್ಥಗಳನ್ನು ಮಾರಲು ಸಾಕಷ್ಟು ಅನುಕೂಲಗಳಿಲ್ಲದೆ ಕಷ್ಟವಾಗಿದೆ. ಅಲ್ಲದೆ ಬೆಳೆದು ತರುವವರಿಗೆ ಒಂದು ರೀತಿಯ ಬೆಲೆಯಿದೆ. ಮಾರ್ಕೆಟ್ಟಿನಲ್ಲಿ ಮಾರುವ ಬೆಲೆಯಲ್ಲೂ ತಾರತಮ್ಯವಿದೆ. ಈ ವ್ಯತ್ಯಾಸ ಏಕೆ ಕಂಡು ಬರುತ್ತದೆ ಎನ್ನು ವುದನ್ನು ಪರಿಶೀಲಿಸಿ ವ್ಯಾವಸಾಯದ ಉತ್ಪನ್ನಗಳು ಬೆಳೆಯುವವನಿಗಾಗಲೀ ಮಾರ್ಕೆಟ್ಟಿನಲ್ಲಿರುವ ಬೆಲೆಯೂ ಸರಿಸಮವಾಗಿರುವಂತೆ ಬದಲಾವಣೆ ಮಾಡಬೇಕು. ಅಲ್ಲದೆ ಇವತ್ತಿನದಿವಸ ಆಹಾರವನ್ನು ರೈತರು ಬೆಳೆದು ಅದನ್ನು ಮಾರ್ಕೆಟ್ಟಿಗೆ ಯಾವತೊಂದರೆಯೂ ಇಲ್ಲದಂತೆ ಸಾಗಿಸಲು ಸೌಲಭ್ಯಗಳು ದೊರೆಯುವಂತೆ ಮಾಡಬೇಕಾದುದು ಅವಶ್ಯಕ. ಈ ದೃಷ್ಟಿಯಿಂದ ಸರಕಾರ ಇಂತಹ ಸೌಲಭ್ಯವನ್ನು ಬೆಳೆಸುವವರಿಗೆ ಎಷ್ಟು ಉತ್ತೇಜನವನ್ನು ಕೊಡಬೇಕೋ ಅಷ್ಟನ್ನೂ ಕೊಡದಿದ್ದರೆ ಬೆಳೆಯುವ ರೈತರಿಗೆ ಸರಿಯಾದ ಒಂದು ಬೆಲೆಯ ಸೌಲಭ್ಯಗಳು ದೊರೆತಂತಾಗುವುದಿಲ್ಲ. ಈ ದೃಷ್ಟಿಯಿಂದ ಸರಕಾರಕ್ಕೆ ಆಹಾರ ಸಾಮಗ್ರಿಗಳನ್ನು ಬೆಳೆದವರಿಗೆ ಸರಿಯಾದ ಬೆಲೆಯನ್ನು ಸಿಗುವ ವ್ಯವಸ್ಥೆ ಮಾಡಬೇಕೆಂದು ನಾನ್ನು ವಿನಂತಿ ಮಾಡುತ್ತೇನೆ. ಈ ಸಭೆಯಲ್ಲಿ ಪಾನನಿರೋಧದ ವಿಚಾರವಾಗಿ ವಿರೋಧ ಪಕ್ಷದನಾಯಕರು ಮಾತನಾಡಿದರು. ನಾನು ಒಂದು ಮಾತನ್ನು ಇಲ್ಲಿ ಹೇಳ ಬಯಸುತ್ತೇನೆ. ಈ ಪಾನನಿರೋಧದ ವಿಚಾರವಾಗಿ ಹೇಳುವಾಗ ಇದನ್ನು ರದ್ದುಮಾಡುತೇವೆಂದು ಖಚಿತವಾದ ಮಾತನ್ನು ಹೇಳುವುದು ಉಚಿತವೆಂದು ನನಗೆ ಕಾಣುತ್ತದೆ. ಕೆಲವುಕಡೆಗಳಲ್ಲಿ ಜನರು ಎಷ್ಟುಮಟ್ಟಿಗಿದ್ದಾರೆಂದರೆ ಪಾನನಿರೋಧ ಹೋಗುತ್ತದೆ. ಅಲ್ಲದೆ ಪಾನನಿರೋಧವನ್ನು ಅಸೆಂಬ್ಲಿ ಯಲ್ಲಿಯೂ ಬಿಡಬೇಕೆಂದು ನಿರ್ಧಾರ ಮಾಡಿದ್ದಾರೆ ಎಂದು ತಪ್ಪುಪ್ರಚಾರವನ್ನು ಹರಡಿಸಿಬಿಟ್ಟಿದ್ದಾರೆ. ಇದರಿಂದ ಈಗಲೇ ಪಾನನಿರೋಧ ಹೊಗುತ್ತದೆ ಎನ್ನುವ ಭಾವನೆಬಂದಿದೆ. ಕೆಲವರು ಹೇಳಿದಹಾಗೆ ನಮ್ಮ ಪೋಲಿಸು ಇಲಾಖೆಯಲ್ಲಿಯೂ ಈ ಪಾನನಿರೋಧವನ್ನು ತೆಗೆಯುತಾರೆ ಹಾಗೂ ಅಸೆಂಬ್ಲಿಯ ವರೂ ತೆಗೆದುಹಾಕಬೇಕೆಂದು ಹೇಳುತ್ತಿದ್ದಾರೆಂದುಭಾವನೆಗೂ ಬಂದಿದೆ. ಆದ್ದರಿಂದ ನಮ್ಮರಾಜ್ಯದಲ್ಲಿ ಅನುಷ್ಠಾನಕ್ಕೆ ತರುವ ಪೋಲಿಸ್ ಅಧಿಕಾರಿಗಳು ಈ ರೀತಿಯ ಒಂದು ಅಭಿಪ್ರಾಯಕ್ಕೆ ಬಂದರೆ, ಅದು ಮುಂದೆ ಹೇಗೆ ನಡೆಯುತ್ತದೋ ನೋಡಬೇಕು. ಇದರ ಬಗೆಗೆ ಖಚಿತವಾದ ನೀತಿ ಅವರಿಗೆ ದೊರೆಯದಿದ್ದರೆ ಅವರು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ಈ ಕಾರ್ಯದಲ್ಲಿ ಮುಂದುವರಿಯುವರು ಇಲ್ಲದೆಹೋದರೆ ಇವೊತ್ತು ಪಾನನಿರೋಧದ ಪರವಾಗಿ ಅಥವಾ ವಿರೋಧವಾಗಿ ಅನೇಕರು ಅನೇಕ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಎಂದು ಹೇಳಬಯಸುತ್ತೇನೆ. ಜಾರಿತರಬೇಕಾದರೆ ಇದನ್ನು ಸರಿ ಯಾದರೀತಿಯಲ್ಲಿ ಜಾರಿಗೆತರಬೇಕು. ನಮ್ಮ ದೇಶದಲ್ಲಿ ಕಾನೂನು ಕಾಯಿದೆಯನ್ನು ಸರಿಯಾದ ರೀತಿಯಲ್ಲಿ ಕಟ್ಟುವಂತಹ ಈ ಪೋಲೀಸು ಖಾತೆಯಿಂದ ಜನರ ಹಕ್ಕು ಬಾಧ್ಯತೆಗಳನ್ನು ಕಿತ್ತುಕೊಳ್ಳುವ ಖಾತೆ ಆದೀತು. ಆದ್ದರಿಂದ ಈ ಪಾನ ನಿರೋಧವನ್ನು ಒಂದಲ್ಲ ಒಂದು ರೀತಿಯಿಂದ, ಒಂದು ಖಚಿತವಾದ ರೀತಿಯಲ್ಲಿ ಹಾಗೂ ಜವಾಬ್ದಾರಿಯುತವಾಗಿ ಸರಿಯಾದ ರೀತಿಯಲ್ಲಿ ದಾರಿಗೆ ತರಬೇಕು. ಇಲ್ಲದಿದ್ದರೆ ತೆಗೆದುಹಾಕಿ, ಇದರೊಳಗೆ ಖಚಿತವಾದ ಅಭಿಪ್ರಾಯವನ್ನು ದೇಶದ ಮುಂದೆ ಇಡದೇ ಇದ್ದರೆ ಇದನ್ನು ಜಾರಿಗೆ ತರುವ ಪೋಲೀಸಿನ ಖಾತೆಯಲ್ಲಿರುವವರೆಲ್ಲರೂ ಕುಡಿಯುವುದನ್ನು ಕಲಿಯಲಿಕ್ಕೆ ಖಾತೆಗೆ ಸಹಾಯಮಾಡಬಹುದು ಎನ್ನುವ ಒಂದು ರೀತಿಯ ಸಂಶಯ ಬಂದು ಪಾನ ನಿರೋಧನೀತಿಯಿಂದ ಅನ್ಯಾಯ ಇನ್ನೂ ಹೆಚ್ಚಾಗುವ ಸಂಭವ ಬರುತ್ತದೆ. ಆದುದರಿಂದ ಸರಕಾರ ಸರಿಯಾದ ಒಂದು ನಿರ್ಣಯವನ್ನು ತಂದು ಅದಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಸರಿಯೆಂದು ನನಗೆ ತೋರುತ್ತದೆ. ಇಷ್ಟನ್ನು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ 63-6 ನೇ ಸಾಲಿನ ಅಂದಾಜಿನ ಆಯವ್ಯಯ ಪಟ್ಟಿಯನ್ನು ನೋಡಿದರೆ, ಯಾವ ಒಂದು ಅಭ್ಯುದಯದ ಚಿಹ್ನೆಗಳು ಕಾಣುತ್ತಿಲ್ಲ. ಈ ಬಡ್ಜೆಟ್ಟನ್ನು ಮಂಡಿಸತಕ್ಕ ಕಾಲದಲ್ಲಿ ನಮ್ಮ ಅರ್ಥಿಕ ಸಚಿವರು ಹೇಳಿದ್ದಾರೆ ನಾವು ಕೇವಲ ನಲವತ್ತು ಲಕ್ಷ ರೂಪಾಯಿಗಳ ಖೋತ ಬಡ್ಜೆಟ್ಟನ್ನು ಮಾತ್ರ ಈ ಸಭೆಯ ಮುಂದೆ ಮಂಡಿಸುತಿದ್ದೇವೆ, ಹಾಗೂ ಯಾವುದೇ ತರಹದ ಹೊಸ ತೆರಿಗೆಗಳನ್ನು ಈ ಸಾರಿ ರಾಜ್ಯ ಸರಕಾರ ದವರು ವಿಧಿಸಿಲ್ಲ ಎನ್ನುವುದನ್ನ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರಕಾರ ವಿಧಿಸಿದ ತೆರಿಗೆ ಪರಿಣಾಮ ವಾಗಿ ಸಾಮಾನ್ಯ ಮನುಷ್ಯನಿಗೆ ತೊಂದರೆಯಾಗುತ್ತಿದೆ. ಕೇಂದ್ರ ಸರಕಾರ ತೆರಿಗೆ ವಿಧಿಸುವ ಬಗ್ಗೆ ಪ್ರಕಟಿಸಿದ ಮರುದಿನ ಸೀಮೆಎಣ್ಣೆ, ಮಾಚಿ ಬಾಕ್ಸ್ ಮುಂತಾದ ಅನೇಕ ಪದಾರ್ಥಗಳ ಬೆಲೆ ಜಾಸ್ತಿ ಯಾಗಿದೆ. ಸಿಗರೇಟ್ ಬೆಲೆ ಹೆಚ್ಚಾಗಿರುವದಲ್ಲದೆ ಅದು ದೊರೆಯುತ್ತಿಲ್ಲ. ಈ ಪರಿಸ್ಥಿತಿಯ ಬಗ್ಗೆ ಸರಕಾರ ಯೋಚನೆಮಾಡಬೇಕು. ಇದಕ್ಕೆ ಗಮನಕೊಡಬೇಕಾದುದು ಸರಕಾರದ ಕರ್ತವ್ಯ.

ಸರಕಾರಿ ನೌಕರರಿಗೆ 5ರಿಂದ 10ರೂಪಾಯಿವರೆಗೆ ಡಿ. ಎ. ಹೆಚ್ಚುಮಾಡಿದ್ದೇವೆಂದು ಅರ್ಥ ಸಚಿವರು ಹೇಳಿದ್ದಾರೆ. ಆದರೆ ಐದು ರೂಪಾಯಿ ಅಲ್ಲ 25ರೂಪಾಯಿ ಹೆಚ್ಚು ಡಿ. ಎ. ಕೊಟ್ಟರೂ ಕೂಡ ಈ ತೆರಿಗೆ ಪರಿಣಾಮವಾಗಿ ಅವರ ಸಮಸ್ಯೆ ಬಗೆಹರಿಯುವುದಿಲ್ಲ. ಇನ್ನೊಂದು ಕಡೆ ಹೊರೆ ಹೆಚಾ

ಗುತ್ತಿದೆ. ಜೀವನವುಟ್ಟ ಏರುತ್ತಿದೆ. ಈ ಕಡೆ ಕೊಡುವುದು ಇನ್ನೊಂದು ಕಡೆ ಕಿತ್ತುಕೊಳ್ಳುವ ವ್ಯವಸ್ಥೆಯಾಗಿದೆ. ರೈತನ ಸಮಸ್ಯೆ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. 25ಕೋಟಿ ರೂಪಾಯಿ ಸಾಲ ಕೊಡಬೇಕೆಂದು ಸರಕಾರ ಯೋಚನೆಮಾಡಿದೆ ಎಂದು ಬಡ್ಜೆಟ್ ಭಾಷಣದಲ್ಲಿ ಸಚಿವರು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಒಂದೆರಡು ಸಲಹೆ ಕೊಡುತ್ತೇನೆ. ಅದಕ್ಕೆ ಸಹಕಾರ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಂದಿನ ದಿನ ರೈತನ ಪರಿಸ್ಥಿತಿ ಏನಾಗಿದೆ ಎಂದರೆ ಒಂದಲ್ಲ ಒಂದು ರೀತಿಯಿಂದ ರೈತನ ಸಾಲ ಬೆಳೆಯುತ್ತಿದೆ. ಶಾರ್ಟ್ ಟರ್ಮ ಲೋನ್, ಲಾಂಗ ಟರ್ಮ ಲೋನ್, ಮಿಡಿಯಮ ಟರ್ಮ ಲೋನ್ ಹೀಗೆ ಹತ್ತಾರು ರೀತಿಯಿಂದ ರೈತನಿಗೆ ಸಾಲ ಕೊಡುತ್ತಾರೆ ಆದರೆ ರೈತನ ಪರಿಸ್ಥಿತಿ ಇದರಿಂದ ಉತ್ತಮಗೊಂಡಿದೆಯೇನು ? ಹಳ್ಳಿಗಾಡಿನಲ್ಲಿ ರೈತನು ಒಂದು ವರ್ಷದ ಹನ್ನೆರಡು ತಿಂಗಳುಗಳಲ್ಲಿ ಮೂರು ತಿಂಗಳ ಆಹಾರ ಸಂಪಾದನೆಮಾಡುವ ಶಕ್ತಿ ಉಳಿದಿಲ್ಲ. ಮೂರು ತಿಂಗಳು ಊಟಮಾಡುತ್ತಾನೆ. ಉಳಿದ ಒಂಭತ್ತು ತಿಂಗಳು ಅವನಿಗೆ ಏನೂ ದೊರೆಯುವದಿಲ್ಲ. ಸಹಕಾರಿ ಸಂಘಗಳ ವ್ಯವಸ್ಥೆಯ ಮೂಲಕ 25ಕೋಟಿ ರೂಪಾಯಿ ಸಾಲಕೊಡುತ್ತೇವೆಂದು ಇಲ್ಲಿ ಹೇಳಿದ್ದಾರೆ. ಆದರೆ ಸಾಲಕೊಡತಕ್ಕ ವಿಧಾನ ಸರಿಯಾಗಿಲ್ಲ. 300ರೂಪಾಯಿ ಸಾಲ ತೆಗೆದರೆ ಅವನಿಗೆ 50ರೂಪಾಯಿ ದೊರೆಯುತ್ತದೆ. ಇದನ್ನು ಮಂತ್ರಿಗಳು ಒಪ್ಪುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಟೂರ್ ಮೇಲೆ ಮಂತ್ರಿಗಳು ಹೋದಾಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಿ ತಿಳಿದುಕೊಳ್ಳಬಹುದು. ಒಂದು ಸಾಲ ದೊರೆಯಬೇಕಾದರೆ ಆರು ತಿಂಗಳು ತಿರುಗಬೇಕಾಗುತ್ತದೆ. ವ್ಯರ್ಥವಾಗಿ ಕಾಲ ಕಳೆಯಬೇಕಾಗುತ್ತದೆ. ತಾಲ್ಲೂಕ್ ಆಫೀಸಿಗೆ ಬಂದು ಅನೇಕ ದಿವಸ ಅಲ್ಲಿ ಇರಬೇಕಾದರೆ ರೈತನಿಗೆ ಪ್ರತಿ ದಿನ ಒಂದು ರೂಪಾಯಿ ಖರ್ಚು ಆಗುತ್ತದೆ. ಸಾಲದ ಹಣ ಕೂಡ ಸರಿಯಾಗಿ ದೊರೆಯ ವುದಿಲ್ಲ. ಬಹಳ ದೀರ್ಘಕಾಲ ಹಿಡಿಯುತ್ತದೆ. ಇದನ್ನು ಮಂತ್ರಿಗಳು ಯೋಚನೆಮಾಡಬೇಕು. ಮನೆ ಕಟ್ಟುವುದಕ್ಕೆ ಸಾಲಕೊಡುತ್ತಾರೆ ಆದರೆ ರೈತನಿಗೆ ಯಾರ ದಿಕ್ಕು ಇಲ್ಲ. ರೈತನ ಪ್ರತಿನಿಧಿಗಳಾದ ನಾವು ಈ ಸಭೆಯಲ್ಲಿ ಬಂದಿದ್ದೇವೆ. ಈ ಅನ್ಯಾಯ ನಡೆದುದನ್ನು ಹೇಳಬೇಕಾಗಿದೆ ಒಂದು ಉತ್ತಮವ್ಯವಸ್ಥೆ ಆಗುತ್ತದೋ ಇಲ್ಲವೋ ಎಂದು ಅನಿಸುತ್ತದೆ.ಇಷ್ಟೇ ಅಲ್ಲದೆ ಈಗ ಚಿನ್ನದ ಬೆಲೆಯನ್ನು ಅಂತರರಾಷ್ಟ್ರೀಯ ಮಾರ್ಕೆಟ್ ಬೆಲೆಯಷ್ಟು ನಿಗದಿ ಮಾಡಿದ್ದಾರೆ. ಚಿನ್ನದ ಬೆಲೆ ಕಡಿಮೆಮಾಡಿರುವುದರ ಮೂಲಕ ಮಾರ್ಕೆಟ್ಟಿನಲ್ಲಿ ಪದಾರ್ಥಗಳ ಬೆಲೆ ಕಡಿಮೆಯಾಗುತ್ತಾ ಇದೆ. ರೈತ ಬೆಳೆಯಂಥ ಆಹಾರ ಪದಾರ್ಥಗಳಿಗೆ ಸರಿಯಾದ ಮಾರ್ಕೆಟ್ ಬೆಲೆ ದೊರೆಯುತ್ತಿಲ್ಲ. ರೈತನಿಗೆ ಎಳ್ಳಷ್ಟು ಸೌಲಭ್ಯ ದೊರೆಯುತ್ತಿಲ್ಲ. ಸರಕಾರ ಇದಕ್ಕೆ ತೀವ್ರ, ಗಮನ ಕೊಡಬೇಕಾದುದು ಅಗತ್ಯ. ಧಾರಣೆಮಾಸಿ ಇಳಿದು ಹೋಗಿರುವದರಿಂದ ರೈತನಿಗೆ ತೊಂದರೆಯಾಗಿದೆ. ಸಹಕಾರಿಸಂಘಗಳನ್ನು ಸರಿಪಡಿಸಬೇಕು. ಸಾಮಾನ್ಯವಾಗಿ ಅಲ್ಪಾವಧಿ ಸಾಲ ರೈತ ಪಡಿಯುತ್ತಾನೆ. ನಮ್ಮ ಜಿಲ್ಲೆಯಲ್ಲಿ 25ಲಕ್ಷ ರೂಪಾಯಿ ಸಾಲದ ಬಾಕಿ ಉಳಿದಿದೆ. ಕೆಲವರಿಗೆ ಹಣ ತಿರುಗಿಕೊಡುವಶಕ್ತಿಯಿಲ್ಲ. ಹಣ ವಸೂಲಾಗುತ್ತಿಲ್ಲ. ಕೆಲವು ಕಡೆ ಬಲಾತ್ಕಾರಮಾಡಿ ಹಣ ವಸೂಲ್ಮಾಡುತ್ತಿದ್ದಾರೆ. ಆದರೆ ಅದನ್ನು ಕೊಡತಕ್ಕಶಕ್ತಿ ರೈತನಲ್ಲಿಲ್ಲ. ಧಾರಣೆಮಾಸಿ ಇಳಿದುಹೋಗಿರುವುದೇ ಇದಕ್ಕೆ ಕಾರಣ ಇದಲ್ಲದೆ ಕೆಲವು ಕಡೆ ಮಳೆ ಇಲ್ಲದೆ ಬೆಳೆಬಂದಿಲ್ಲ. ಈ ಎಲ್ಲ ಅಂಶವನ್ನು ಸಹಕಾರ ಮಂತ್ರಿಗಳು ಯೋಚನೆ ಮಾಡಬೇಕು. ಅದನ್ನು ಪ್ರಾಯಶಃ ಸಹಕಾರ ಖಾತೆಯ ಮಂತ್ರಿಗಳು ಯೋಚನೆಮಾಡಬೇಕು. ಈಗ ಇರತಕ್ಕಂಥ ಎಸ್. ಟಿ. ಲೋನನ್ನು ಎಲ್ಲಿ ಕೊಡುವುದಕ್ಕೆ ಜನಗಳಿಗೆ ಶಕ್ತಿ ಇಲ್ಲವೋ, ಅಲ್ಲಿ medium term loan ಆಗಿ ಪರಿವರ್ತನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ದೀರ್ಘಾವಧಿ ಸಾಲವನ್ನು 20 ವರ್ಷಗಳ ಕಂತುಗಳಲ್ಲಿ ವಾಪಸು ಕೊಡುವ ಏರ್ಪಾಡಿದೆ. 10 ಸಾವಿರ ರೂಪಾಯಿ ಸಾಲ ತೆಗೆದುಕೊಂಡರೆ, ಪ್ರತಿ ವರ್ಷ ಒಂದು ಸಾವಿರ ರೂಪಾಯಿ ಕಂತಾಗಿ ಕೊಡಬೇಕು. ಈಗ ಚಿನ್ನದ international market rate 62 ರೂಪಾಯಿ ಎಂದು ನಿಗದಿಯಾಗಿ, ಅದರ ಪರಿಣಾಮದಿಂದ ರೂಪಾಯಿನ ಮೌಲ್ಯ ಅದಲು ಬದಲಾಗಿದೆ, ಏರು ಪೇರಾಗಿದೆ. ಇದರಿಂದ ರೈತರಿಗೆ ಬಹಳ ಧಕ್ಕೆಯಾಗಿ ಸಾಲ ತೀರಿಸುವದಕ್ಕೆ ಬಹಳ ಕಷ್ಟವಾಗುತ್ತದೆ. ಸಾಲಮಾಡಿದರೆ ಬೆಳೆಯುತಕ್ಕಂಥ ಬೆಳೆಗಳಿಂದ ಬಡ್ಡಿ ತೀರುವುದಕ್ಕೆ ಆಗುವುದಿಲ್ಲ, ಆ ಸ್ಟೇಜಿನಲ್ಲಿ ರೈತರಿದ್ದಾರೆ, ದೀರ್ಘಾವಧಿ ಸಾಲವನ್ನು 20 ವರ್ಷಗಳ ಬದಲು 30-40 ವರ್ಷಗಳ ಹೆಚ್ಚಿನ ಕಂತುಗಳಲ್ಲಿ ಕೊಡುವಂತೆ ಮಾಡಿದರೆ, ಸುಲಭವಾಗಿ ಹಣವನ್ನು ರೈತರುವಾಪಸು ಕೊಡಬಹುದು ಇಲ್ಲದೆ ಹೋದರೆ ಈ ಸಾಲದಿಂದ ಸಾಮಾನ್ಯವಾದ ರೈತನಿಗೆ ಯಾವ ತರಹಸಹಾಯವನ್ನು ಮಾಡಿದ ಹಾಗೆ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚು ಗಮನಕೊಡದೆ ಹೋದರೆ, ರೈತನನ್ನು ಅಧೋಗತಿಗೆ ತಳ್ಳಿದ ಹಾಗಾಗುತ್ತದೆ.

ಇಷ್ಟು ಹೇಳಿ ನೀವು ದೀರ್ಘಾವಧಿ ಸಾಲದ ವ್ಯವಸ್ಥೆ ಮಾಡಿದರೆ ರೈತನಿಗೆ ಆದಷ್ಟು ಜಾಗ್ರತೆ ಸುಲಭ ರೀತಿಯಲ್ಲಿ ಸಾಲ ತೀರಿಸುವುದಕ್ಕೆ ಸರ್ಕಾರ ಶೀಘ್ರ ಕ್ರಮ ತೆಗೆದುಕೊಳ್ಳಬೇಕು, ಇಲ್ಲದೆ

ಹೋದರೆ ಪ್ರಯೋಜನವಾಗುವುದಿಲ್ಲ. ಸಹಕಾರ ಮಂತ್ರಿಗಳು ಇದರ ಬಗ್ಗೆ ಪೂರ್ತಿ ಕ್ರಮ ತೆಗೆದು ಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನಾನು ಮೊದಲೇ ಹೇಳಿದ ಹಾಗೆ ರೈತ ಸಾಲವನ್ನು ಹತ್ತಾರು ಮಾರ್ಗಗಳಿಂದ ತರುತ್ತಾನೆ, ಮೊದಲು ಅಲ್ಪಾವಧಿ ಸಾಲವನ್ನು ತರುತ್ತಾನೆ, ಆಮೇಲೆ ಮಧ್ಯಮಾವಧಿ ಸಾಲವನ್ನು ತರುತ್ತಾನೆ, ಅವನ್ನು ತೀರಿಸುವುದಕ್ಕೆ ದೀರ್ಘಾವಧಿ ಸಾಲವನ್ನು ತೆಗೆದುಕೊಳ್ಳುತ್ತಾನೆ. ದೀರ್ಘಾವಧಿ ಸಾಲದ ಕಂತು ಕೊಡುವುದಕ್ಕೆ ಸಾಹುಕಾರರ ಹತ್ತಿರ ತನ್ನ ಆಸ್ತಿಯನ್ನು ಭೋಗ್ಯ ಮಾಡಿ, ಸಾಲ ತರುತ್ತಾನೆ. ಇಷ್ಟು ಸಾಲ ತೆಗೆದುಕೊಂಡೂ ಜಮೀನಿಗೆ ಗೊಬ್ಬರ ವಗ್ಗೆರೆ ಕೊಂಡು ಬೆಳೆಯನ್ನು ಹೆಚ್ಚಿಗೆ ಬೆಳೆಯುವು ದಿಲ್ಲ. ಕಾರಣ ರೈತರಿಗೆ ಗೊಬ್ಬರ, ಎತ್ತು ಕೊಳ್ಳುವುದಕ್ಕೆ ದುಡ್ಡೇ ಇರುವುದಿಲ್ಲ. ಅದಕ್ಕೆ ಬದಲಾಗಿ ಒಂದೇ ಕಡೆ ರೈತ ಸಾಲ ಪಡೆಯತಕ್ಕ ಮಾರ್ಗವನ್ನು ನಿರ್ಮಿಸಬೇಕು. ಅದಕ್ಕೆ ಒಂದು full finance scheme ಮಾಡಬೇಕು. ಪ್ರತಿಯೊಬ್ಬ ರೈತನಿಗೆ ಒಟ್ಟು ಸಾಲ ಎಷ್ಟಿದೆಯೆಂದು ಅಂಕಿ ಅಂಶಗಳನ್ನು (statistics) ಶೇಖರಿಸಿ, ಅವನ್ನು ತೀರಿಸುವುದಕ್ಕೆ ಹೇಗೆ ಸಾಧ್ಯ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಅವನ ಸಾಲವನ್ನು ತೀರಿಸುವುದಕ್ಕೆ ಏನಾದರೂ ಒಂದು ಸುಲಭ ಮಾರ್ಗವನ್ನು ಕಂಡು ಹಿಡಿಯದೆ ಹೋದರೆ ಬಹಳ ಕಷ್ಟ. ಅವನನ್ನು ಸಾಲದ ಹೊರೆಯಿಂದ ಪೂರ್ಣವಾಗಿ ಪಾರು ಮಾಡಲು ಒಂದು full finance Commission ಹೊಸದಾಗಿ ನೇಮಿಸುವ ಯೋಚನೆ ಮಾಡಬೇಕು. ನಮ್ಮ ಸಹಕಾರ ಮಂತ್ರಿಗಳು ಬಹಳ ಉತ್ಸುಕತೆಯಿಂದ ಸಹಕಾರ ಇಲಾಖೆಯನ್ನು ಹಿಡಿದಿದ್ದಾರೆ. ರೈತರ ಸಾಲದ ಹೊರೆಯನ್ನು ಇಳಿಸಲು ಅವರು ಏನಾದರೂ ಹೊಸ ಕ್ರಮವನ್ನು ಕಂಡುಹಿಡಿಯ ಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.

ಹಾಗೆಯೇ ಇನ್ನೊಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ, ಶರಾವತಿ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರಕ್ಕೆ ಅನೇಕ ತರಹ ಅಡಚಣೆಗಳು ಇವೆಯೆಂದು ಹೇಳಿದರು. "ನಮಗೆ ಮೆಟೀರಿಯಲ್ ಸಿಗುತ್ತಾ ಇಲ್ಲ, ಹೊರಗಡೆಯಿಂದ ಬರತಕ್ಕಂಥ ಸಾಮಾನು ಬರುತ್ತಾ ಇಲ್ಲ" ಎಂದು ಹೇಳಿದರು. ನಿಜ, ಅಡಚಣೆ ಇದೆ. ಒಂದು ಪದಾರ್ಥವನ್ನು ಸಾಗಿಸುವುದಕ್ಕೆ ರೈಲ್ವೆಯವರು ಪರ್ಮಿಷನ್ ಕೊಡ ಲಿಲ್ಲ, ಟ್ರಾಲಿಯಿಂದ ತರುತ್ತಾ ಅದು ಮುರಿದುಹೋಯಿತು ಎಂದು ಹೇಳಿದರು. ಅವರ ಕಷ್ಟವನ್ನು ಸಭೆಯ ಮುಂದಿಟ್ಟರು ಆದರೆ ಯಾವ ಸಾಮಾನುಗಳನ್ನು ತರಿಸುತ್ತಿದ್ದಾರೆಯೋ ಆ ಸಾಮಾನುಗಳು ಸರಿಯಾಗಿ ಯಾವ ಮಟ್ಟದಲ್ಲಿ ಉಪಯೋಗವಾಗುತ್ತದೆಯೋ ಎನ್ನುವುದನ್ನು ಒಳಹೊಕ್ಕು ನೋಡಿ ದ್ದಾರೆಯೇ? ಅವುಗಳು ಉಪಯೋಗವಾಗುತ್ತಿರುವುದನ್ನು ನೋಡಿದರೆ ಸರ್ಕಾರ ಇದೆಯೋ ಇಲ್ಲವೋ ಎಂದೆನಿಸುತ್ತದೆ. ಎಲೆಕ್ಟ್ರಿಕಲ್ ಇಲಾಖೆ ಮಂತ್ರಿಗಳು ಇಲ್ಲಿಲ್ಲ. ಬಾಕಿ ಮಂತ್ರಿಗಳು ಅವರಿಗೆ ಹೇಳಬೇಕು ಎಂದು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಹಿಂದೆ ದೊಡ್ಡ ದೊಡ್ಡ ಸಿಟಿಗಳಲ್ಲಿ ಈಗಿರತಕ್ಕಂಥ ಲೈನುಗಳ ಜೊತೆಗೆ ಡೂಪ್ಲಿಕೇಟ್ ಲೈನನ್ನು ಹಾಕಿಕೊಂಡಿದ್ದರು. ಏಕೆಂದರೆ ಒಂದು ಲೈನು ಕೆಟ್ಟುಹೋದರೆ, ಎಮರ್ಜನ್ಸಿ ಫೀಡ್ ಇರಲಿ, ಎಲೆಕ್ಟ್ರಿಸಿಟಿ ಫೇಲಾಗದಿರಲಿ ಎಂದು. ಈಗ ನನಗೆ ತಿಳಿದಿದ್ದರಲ್ಲಿ ಏನು ಡೂಪ್ಲಿಕೇಟ್ ಲೈನ್ emergency feedingಗೆ ಇಟ್ಟಿದ್ದರೋ, ಅದರಲ್ಲಿ ಒಂದು ಲೈನೂ ಇಲ್ಲ. ತನಿಖೆ ಮಾಡಿಸಿ ನನ್ನ ಸ್ಟೇಟ್‌ಮೆಂಟ್ ತಪ್ಪಿದ್ದರೆ ತಿದ್ದಿಕೊಳ್ಳುತ್ತೇನೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಡೂಪ್ಲಿಕೇಟ್ ಲೈನನ್ನು ಹಿಂದೆ ಹಾಕಿದ್ದರು, ಅದರ ಕಾಪರ್ ವೈರನ್ನೆಲ್ಲಾ ತೆಗೆದು ಹಾಕಿ ಮಾರಿ ದ್ದಾರೆ. ಇದಕ್ಕೆ ಸಮಜಾಯಿಷಿ Electricity ಬೋರ್ಡನ್ನು ಕೇಳಬೇಕೋ ಅಥವಾ ಸರ್ಕಾರವನ್ನು ಕೇಳಬೇಕೋ ಗೊತ್ತಿಲ್ಲ. ಆ ಇಲಾಖೆಯ ಅವಸ್ಥೆ ಹೀಗಿದ್ದೂ, ಶರಾವತಿ ಯೋಜನೆಯನ್ನು ಕಾರ್ಯ ಗತ ಮಾಡುವುದಕ್ಕೆ ಇರತಕ್ಕಂಥ ಅಡಚಣೆ ಏನೆಂದರೆ ಸಾಮಾನುಗಳನ್ನು ತರತಕ್ಕಂಥ ಕಷ್ಟ ಎಂದು ಇಲ್ಲಿ ಮೊನ್ನೆ ಮುಖ್ಯ ಮಂತ್ರಿಗಳು ಉದ್ಧರಿಸಿದರು. ಹೀಗಾದರೆ ಇದಕ್ಕೆ ಯಾರು ಜವಾಬ್ದಾರರು? Weather-proof materials ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲ. ಮನಸ್ಸಿಗೆ ಬಂದ ಹಾಗೆ ದುರುಪಯೋಗ ಮಾಡುತ್ತಿದ್ದಾರೆ. ಮಾರುತ್ತಿದ್ದಾರೆ. ಸಣ್ಣ ಅಧಿಕಾರಿಯಿಂದ ದೊಡ್ಡ ಅಧಿ ಕಾರಿವರೆಗೆ ದುರ್ವಿನಿಯೋಗ ಮಾಡುತ್ತಿರುವಾಗ ಮಾನ್ಯ ಮುಖ್ಯ ಮಂತ್ರಿಗಳು ಸಾಮಾನನ್ನು ದೊರ ಕಿಸಿಕೊಳ್ಳುವ ಕಷ್ಟವನ್ನು ಹೇಳಿದರು. ನನಗೆ ಈ ಸಂದರ್ಭದಲ್ಲಿ ಒಂದು ಹಳ್ಳೀ ಕಡೆ ಗಾದೆ ಜ್ಞಾಪಕಕ್ಕೆ ಬರುತ್ತದೆ. ಎತ್ತು ಸತ್ತುಹೋದರೆ ನಮ್ಮ ಅಪ್ಪ ತರುತ್ತಾನೆ ಎಂದು. ಆಗುವುದು ಆಗುತ್ತದೆ, ಹೋಗುವುದು ಹೋಗುತ್ತದೆಂಬ ಮನೋಭಾವ ಅಧಿಕಾರಿಗಳಲ್ಲಿ ಬಂದುಬಿಟ್ಟಿದೆ. ತನಿಖೆ ನಡೆಸಿ, ಸಾಮಾನೇ ಇಲ್ಲ, ತಂದಿರುವ ಸಾಮಾನು ಯಾವ ರೀತಿ ಉಪಯೋಗವಾಗುತ್ತಿದೆ ಎನ್ನುವುದರ ಕಡೆಗೆ ಸರ್ಕಾರ ಗಮನ ಕೊಡದೆ ಹೋದರೆ, ಎಷ್ಟು ಸಾಮಾನು ತರಿಸಿದರೂ ಸದುಪಯೋಗವಾಗುವುದಿಲ್ಲ. ಸರ್ಕಾರ ಈ ಕಡೆಗೆ ತೀವ್ರ ಗಮನ ಕೊಟ್ಟು ಯೋಚನೆ ಮಾಡಬೇಕು.

ಶ್ರೀ ಕೆ. ಪಿ. ಗದಗ್.—Emergency ಲೈನನ್ನು ಯಾವ ಸ್ಥಳಕ್ಕೆ ಹಾಕಿದೆ ?

ಶ್ರೀ ಎಚ್. ಡಿ. ದೇವೇಗೌಡ.—ದೊಡ್ಡ ದೊಡ್ಡ ಸಿಟಿಗಳೊಳಗೆ ಬೆಂಗಳೂರಿನಲ್ಲಿ ಕಾರ್ಪೊರೇಷನ್ ಏರಿಯಾದಲ್ಲಿದೆ. ಮೇನ್ ಲೈನ್ ಕೆಟ್ಟುಹೋಗಿ ನಿಂತು ಹೋದರೆ ಎಮರ್ಜನ್ಸಿಯಲ್ಲಿ ಫೀಡ್ ಮಾಡುವುದಕ್ಕೋಸ್ಕರ duplicate line ಹಾಕಿದ್ದರು, ವಿಚಾರ ಮಾಡಿ.

ಪ್ರೊಹಿಬಿಷನ್ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನೀರಾ ಸೊಸೈಟಿಗಳನ್ನು ಮುಚ್ಚುವುದಕ್ಕೆ ಸರ್ಕಾರ ತೀರ್ಮಾನ ಮಾಡಿದೆ. ಹೊಸದಾಗಿ ಪನೆಬೆಲ್ಲ ತಯಾರು ಮಾಡತಕ್ಕಂಥ ಇನ್ನೊಂದು ಉದ್ಯೋಗ ಖಾದಿಗ್ರಾಮೋದ್ಯೋಗ ಮಂಡಲಿಯ ಆಶ್ರಯದಲ್ಲಿ ನಮ್ಮ ಜಿಲ್ಲೆಯೊಳಗೆ ಅಂದರೆ ಹಾಸನದಲ್ಲಿ ಪ್ರಾರಂಭವಾಗಿದೆ. ಹತ್ತಾರು ಸೊಸೈಟಿಗಳಿಗೆ ಲೈಸೆನ್ಸ್ ಕೊಟ್ಟಿರುತ್ತಾರೆ. ಆದರೆ ಯಾವ ಸೊಸೈಟಿಯಾದರೂ ಪನೆಬೆಲ್ಲ ಮಾಡಿ ಮಾರಿದೆಯೋ ಎಂಬ ಬಗ್ಗೆ ಏನಾದರೂ ಅಂಕಿಅಂಶವಿದೆಯೇ ಎಂದು ಮಾನ್ಯಮಂತ್ರಿಗಳು ಪರಿಶೀಲನೆ ಮಾಡಬೇಕು. ಮೊದಲೂ ನೀರಾ ಸೊಸೈಟಿ ಇತ್ತು, ಈಗ ಪನೆಬೆಲ್ಲದ ಸೊಸೈಟಿ ಮಾಡಿ ಅದೇ ಒಂದು 'ಉದ್ಯೋಗ' ಕಲ್ಪಿಸಿಕೊಡುತ್ತಿದ್ದಾರೆ. ಯಾವ ಸಂಘಗಳಲ್ಲಿ ಪನೆಬೆಲ್ಲ ತಯಾರು ಮಾಡುತ್ತಾರೆ? ಈಗ ಏನಾಗಿವೆಯೆಂದರೆ ಸರ್ಕಾರದಲ್ಲಿಯ ಭೀತಿ ಇಲ್ಲ. ಸರ್ಕಾರದ ಉನ್ನತ ಮಟ್ಟದಲ್ಲಿರುವ ಸರ್ಕಾರದ ಅಧಿಕಾರ ಸೂತ್ರ ಹಿಡಿದುಕೊಂಡಿರುವ ಜನರಿಗೆ ಮೂರು ಕಾಸೂ ಬೆಲೆ ಇಲ್ಲ. ಜಿಲ್ಲಾ ಕೇಂದ್ರಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಹತ್ತಾರು ಕಡೆ ಬಹಿರಂಗವಾಗಿ ಹೆಂಡಕುಡಿಯತಕ್ಕಂಥಾದನ್ನೂ, ದನ ಕೊಯ್ಯುವಂಥಾದ್ದನ್ನೂ ಮಾನ್ಯ ಮಂತ್ರಿಗಳಿಗೆ ತೋರಿಸಿದೆ. ದನ ಕೊಯ್ಯುತ್ತಿದ್ದರೆ ಕಂಡಂತೆ ನಟಿಸಿ, ಕಾಣದ ಹಾಗೆ ಬಂದಿದ್ದಾರೆ. ವ್ಯವಸ್ಥೆ ಮಾಡಿದರೆ ಸರಿಯಾದ ರೀತಿಯಲ್ಲಿ ಮಾಡಬೇಕು. ಏಕೆ prohibition introduce ಮಾಡಿದಿರಿ ಎಂದರೆ, ಅದು all India policy ಎಂದು ಹೇಳುತ್ತಾರೆ. ಸರಿಯಾಗಿ ವ್ಯವಸ್ಥೆ ಮಾಡದ ಮೇಲೆ ಅದನ್ನು scrap ಮಾಡಬೇಕು. ಈ ತರಹ ಅದನ್ನು ನಡೆಸಿದರೆ ಎಲ್ಲರಿಗೂ ಅವಮಾನ.

ಆಗದೇ ಇರತಕ್ಕ ಕೆಲಸಮಾಡುತ್ತೇವೆ ಎಂದು ಹೇಳಿ ಅಭ್ಯಾಸವಿಲ್ಲದವನು ಹೋಮಮಾಡುವುದಕ್ಕೆ ಹೋಗಿ ಗಡ್ಡ ಸುಟ್ಟುಕೊಂಡ ಹಾಗೆ ಆಗಿದೆ. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು, 'ಇಲ್ಲದೇ ಹೋದರೆ ದೇಶಕ್ಕೆ ಅಗೌರವ ತರುವ ವ್ಯವಹಾರ ಇದು. ಇಷ್ಟನ್ನು ಹೇಳಿ ಈ ಸಂದರ್ಭದಲ್ಲಿ ಹೆಚ್ಚು ಹೇಳುವುದಕ್ಕೆ ಇಷ್ಟಪಡದೇ ಸಂಬಂಧಪಟ್ಟ ಡಿಮ್ಯಾಂಡ್ ಮೇಲೆ ಮಾತನಾಡಲು ಅವಕಾಶ' ವಿರುವುದರಿಂದ ಈಗ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 p-m.

ಶ್ರೀ ವೈ. ಮಂಜಯ್ಯ ಶೆಟ್ಟಿ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಬಹಳ ಯೋಗ್ಯವಾದ ಮತ್ತು ಎಲ್ಲರೂ ಒಪ್ಪುವಂಥ ಮುಂಗಡ ಪತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಾವು ಮೂರನೇ ಪಂಚವಾರ್ಷಿಕ ಯೋಜನೆಯ ಮೂರನೇ ವರ್ಷದ ಕಾಲದಲ್ಲಿದ್ದೇವೆ. ಈ ಮೂರನೇ ಪಂಚವಾರ್ಷಿಕ ಯೋಜನೆ ಬಹಳ ಮಹತ್ವದ ಕಾಲದಲ್ಲಿ ಇದೆ. ಸುಮಾರು 250 ಕೋಟಿ ರೂಪಾಯಿಗಳ ಯೋಜನೆಯ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಇದರಲ್ಲಿ ಸುಮಾರು 106 ಕೋಟಿ ರೂಪಾಯಿಗಳ ಹಣವನ್ನು ತೆರಿಗೆ ಮುಖೇನವೇ ಒದಗಿಸಬೇಕಾಗಿದೆ. ಇದರಲ್ಲಿ ಸುಮಾರು 45 ಕೋಟಿ ರೂಪಾಯಿಗಳು ಕಡಿಮೆ ಬೀಳುವ ಸಂದರ್ಭ ಸಹ ಇದೆ. ಇಂಥಾ ಸಂದರ್ಭದಲ್ಲಿ ಸಹ ಮಾನ್ಯ ಅರ್ಥಿಕ ಸಚಿವರು ಯಾವ ರೀತಿಯ ತೆರಿಗೆಯನ್ನೂ ಹೊರಿಸದೇ ತಮ್ಮ ಮುಂಗಡ ಪತ್ರವನ್ನು ನಮ್ಮ ಮುಂದೆ ಇಟ್ಟಿದ್ದಕ್ಕಾಗಿ ಅವರನ್ನು ನಾವು ವಂದಿಸಬೇಕಾಗಿದೆ. ನಿಜವಾಗಿಯೂ ಹೇಳುವುದಾದರೆ ಏನಾದರೂ ತೆರಿಗೆಯನ್ನು ಅವರು ಹೊರಿಸುತ್ತಾ ಇದ್ದಿದ್ದರೆ ಯಾರೂ ದೂರುವ ಪ್ರಸಂಗ ಇರುತ್ತಾ ಇರಲಿಲ್ಲ. ಹಾಗಿದ್ದಾಗ್ಯೂ ನಮ್ಮ ಅರ್ಥಿಕ ಸಚಿವರು ಈ ರೀತಿ ಉದಾರ ದೃಷ್ಟಿಯಿಂದ ಮುಂದಿನ ವರ್ಷ ಯಾವ ತೆರಿಗೆಯನ್ನು ಹೊರಿಸುವ ಕಾರ್ಯಕ್ರಮವನ್ನು ಇಟ್ಟುಕೊಳ್ಳದೇ ಇದ್ದದ್ದು ಬಹಳ ಸಂತೋಷದ ವಿಚಾರ. ಸುಮಾರು 37 ಕೋಟಿ ರೂಪಾಯಿ ವಸೂಲಾಗತಕ್ಕದ್ದು ಬಾಕಿ ಇದೆ ಎಂದು ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮುನಿಸಿಪಾಲಿಟಿಯಿಂದಲೂ, ರೈತರಿಗೆ ಕೊಟ್ಟ ಸಾಲದಿಂದಲೂ, ಕೋ ಆಪರೇಟೀವ್ ಸಂಸ್ಥೆಗಳಿಗೆ ಕೊಟ್ಟ ಸಾಲದಿಂದಲೂ ಮತ್ತು ಇನ್ನಿತರ ವಿಧಾನದಿಂದಲೂ ಸುಮಾರು 37 ಕೋಟಿ ರೂಪಾಯಿಗಳ ಸಾಲ ವಸೂಲಾಗುವುದು ಬಾಕಿ ಇದೆ ಆ ಬಗ್ಗೆ ಅಗತ್ಯವಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳತ್ತಾ ಇದ್ದೇವೆ ಎಂದು ತಿಳಿಸಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ವಿಳಂಬಮಾಡದೇ ಆದಷ್ಟು ತ್ವರೆಯಿಂದ ಈ ಹಣವನ್ನು ವಸೂಲುಮಾಡಿ ನಮ್ಮ ದೇಶದ ಅರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕಾಗಿ ನಾವೆಲ್ಲರೂ ಆಶಿಸುತ್ತಾ ಇದ್ದೇವೆ. ನಮ್ಮ ದೇಶದಲ್ಲಿ ಶೇಕಡ 80ರಷ್ಟು ಜನರು ವ್ಯವಸಾಯದಿಂದಲೇ ಜೀವನ ಮಾಡುತ್ತಾ ಅದನ್ನೆ.

ಅವಲಂಬಿಸಿರುವಾಗ ಅವರ ಉದ್ಧಾರವೇ ನಮ್ಮ ದೇಶದ ಉದ್ಧಾರ. ಸರ್ಕಾರದವರು ವ್ಯವಸಾಯಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ವ್ಯವಸಾಯದ ಅಭಿವೃದ್ಧಿಯನ್ನು ಸಾಧಿಸುವ ಬಗ್ಗೆ ಬಹಳ ವಿಶೇಷವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಅದರಲ್ಲೂ ತುರ್ತುಪರಿಸ್ಥಿತಿಯಲ್ಲಿ ವ್ಯವಸಾಯದ ಬಗ್ಗೆ ಹೆಚ್ಚಿನ ಗಮನವನ್ನು ಕೊಡುವಂಥದ್ದು ಅತಿ ಅವಶ್ಯಕ ಅಂತ ಪ್ರತ್ಯೇಕ ಹೇಳಬೇಕಾಗಿಲ್ಲ. ಅನೇಕ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾಗ್ಯೂ ಮುಖ್ಯವಾಗಿ ವ್ಯವಸಾಯದ ಅಭಿವೃದ್ಧಿಯಾಗಬೇಕಾದರೆ ಯೋಗ್ಯವಾದ ಗೊಬ್ಬರ, ಯೋಗ್ಯವಾದ ಬೀಜ ಮತ್ತು ಯೋಗ್ಯವಾದ ನೀರು ಒದಗಿಸಿಕೊಡುವಂಥದು ಅತಿ ಅವಶ್ಯಕ, ಈ ವಿಚಾರದಲ್ಲಿ ಸರ್ಕಾರದವರು ಕೈಕೊಂಡ ಕಾರ್ಯಕ್ರಮಗಳು ಎಷ್ಟುಮಟ್ಟಿಗೆ ಫಲದಾಯಕವಾಗಿದೆ ಎಂಬುದನ್ನು ಸ್ವಲ್ಪ ಅನುಮಾನದಿಂದ ಹೇಳಬೇಕಾಗಿದೆ. ಸರ್ಕಾರದವರು ಬೇಕಾದಷ್ಟು ಗೊಬ್ಬರವನ್ನು ಒದಗಿಸಿಕೊಡುವ ನಿರ್ಧಾರವಮಾಡಿದ್ದಾರೆ, ಒದಗಿಸಿಕೊಡುತ್ತಾ ಇದ್ದಾರೆ. ಕೋ ಆಪರೇಟೀವ್ ಸಂಸ್ಥೆಗಳ ಮುಖಾಂತರ ಕೊಡುವ ವಿತರಣೆ ಬೇಕಾದಷ್ಟು ಇದೆ. ಅದು ಎಷ್ಟುಮಟ್ಟಿಗೆ ರೈತರಿಗೆ ಮುಟ್ಟುತ್ತದೆ ಎಂಬುದನ್ನು ನಾವು ಬಹಳವಾಗಿ ಪರಿಶೀಲನೆ ಮಾಡಬೇಕಾದ ವಿಚಾರವಾಗಿದೆ. ಯೋಗ್ಯವಾದ ಬೀಜ ನಮ್ಮ ರೈತರಿಗೆ ಒದಗಿಸುತ್ತಾ ಇದ್ದಾರೆ ಆದರೆ ಅದು ಸಮಯಕ್ಕೆ ಸರಿಯಾಗಿ ಮುಟ್ಟುತ್ತದೆಯೋ ಇಲ್ಲವೇ ಎಂಬ ಸಂಶಯ ನಮ್ಮಲ್ಲಿ ಎಷ್ಟೋ ಜನರಿಗೆ ಇದೆ. ಈ ದಿನ ರೈತರಿಗೆ ಬೇಕಾದ ಕಬ್ಬಿಣ ಮತ್ತು ಸಿಮೆಂಟು ಎಷ್ಟುಮಟ್ಟಿಗೆ ರೈತರಗೆ ಸಿಕ್ಕುತ್ತದೆ ಎಂಬುದನ್ನು ಹೇಳಲು ಅಸಾಧ್ಯ ಇವತ್ತಿಗೂ ಕಬ್ಬಿಣ ಮತ್ತು ಸಿಮೆಂಟು ಎಷ್ಟೋ ಕಡೆಯಲ್ಲಿ ರೈತರಿಗೆ ಸಿಕ್ಕುವುದಿಲ್ಲ. ಕೋ ಆಪರೇಟೀವ್ ಸಂಸ್ಥೆಗಳ ಮುಖೇನ ಸಿಮೆಂಟ್ ಮತ್ತು ಕಬ್ಬಿಣ ರೈತರಿಗೆ ವಿತರಣೆಯಾಗಬೇಕೆಂದು ಇದ್ದಾಗ್ಯೂ, ಇವತ್ತಿಗೂ ಎಷ್ಟೋ ಕೋ ಆಪರೇಟೀವ್ ಸಂಸ್ಥೆಗಳಿಗೆ ಈ ಒಗ್ಗೆ ವಿವರಣೆಮಾಡುವ ಸರ್ಕಾರದ ಒಂದು ಅಪ್ಪಣೆ ದೊರೆತಿಲ್ಲ. ಸ್ವತಃ ನನಗೆ ಗೊತ್ತಿದೆ. ನಮ್ಮ ತಾಲ್ಲೂಕಿನಲ್ಲಿಯೇ ಕೋ ಆಪರೇಟೀವ್ ಮಾರ್ಕೆಟಿಂಗ್ ಸೊಸೈಟಿ ಇರುವುದರಿಂದ ಎಷ್ಟೋ ಸಾರಿ ಈ ಸಿಮೆಂಟ್ ಮತ್ತು ಕಬ್ಬಿಣ ಆ ಸೊಸೈಟಿ ಮುಖೇನ ರೈತರಿಗೆ ವಿತರಣೆಮಾಡುವಂಥ ಹುಕುಂ ದಯಪಾಲಿಸಬೇಕೆಂದು ಸರ್ಕಾರದವರನ್ನು ಕೇಳಿಕೊಂಡಾಗ್ಯೂ ಇದುವರಗೂ ಆ ಬಗ್ಗೆ ಯಾವ ರೀತಿಯ ಹುಕುಮನ್ನು ದಯಪಾಲಿಸಿಲ್ಲ. ಒಟ್ಟಾರೆ ರೈತರ ಅಭಿವೃದ್ಧಿಯ ಬಗ್ಗೆ, ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಅದರಲ್ಲೂ ತುರ್ತುಪರಿಸ್ಥಿತಿಯಲ್ಲಿ ವ್ಯವಸಾಯ ಅಭಿವೃದ್ಧಿಯಾಗಬೇಕೆಂದು ಬರೀ ಮಾತಿನಿಂದ ಹೇಳಿದರೆ ಪ್ರಯೋಜನವಾಗಬಾರದು. ಕಾರ್ಯರೂಪದಿಂದ ಸರ್ಕಾರ ಹೆಚ್ಚು ಕೆಲಸಮಾಡಿದರೆ ಒಳಿತು ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ವ್ಯವಸಾಯದ ಬಗ್ಗೆ ನೀರಿನ ಅವಶ್ಯಕತೆ ಅತಿ ಅಗತ್ಯ. ದೊಡ್ಡ ನೀರಾವರಿ ಯೋಜನೆ ಹಾಗೂ ಚಿಕ್ಕ ಮಟ್ಟದ ನೀರಾವರೀ ಯೋಜನೆ ಬಗ್ಗೆ ಹೆಚ್ಚಿನ ಹಣ ಖರ್ಚುಮಾಡಲು ಸರ್ಕಾರದವರು ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಅನೇಕ ದೊಡ್ಡ ನೀರಾವರಿ ಯೋಜನೆಗಳನ್ನು ಈಗಾಗಲೇ ಕೈಕೊಂಡಿದ್ದಾರೆ. ಅದರಲ್ಲೂ ಈ ವರ್ಷ ಚಿಕ್ಕಪುಟ್ಟ ನೀರಾವರೀ ಯೋಜನೆಗೆ ಬಹಳ ಮಹತ್ವದ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ದೊಡ್ಡ ನೀರಾವರೀ ಯೋಜನೆಯ ಮೇರೆಗೆ ನಮ್ಮ ಜಿಲ್ಲೆಯಲ್ಲಿ ಒಂದು ಯೋಜನೆ ಮಾಡಿದ್ದರು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಂಡಿದ್ದರು. ಅದು ಕುಂದಾಪುರ ತಾಲ್ಲೂಕು ಬಿಜೂರು ಯೋಜನೆ. 60 ಲಕ್ಷ ರೂಪಾಯಿ ಆ ಯೋಜನೆಗೆ ಮಂಜೂರಾಗಿತ್ತು. 6–7 ವರ್ಷಗಳ ಪ್ರಯತ್ನದ ಫಲವಾಗಿ ಮಂಜೂರಾದ ಆ ಯೋಜನೆಯ ಕೆಲಸ ತ್ವರಿತವಾಗಿ ಸಾಗುತ್ತಾ ಇಲ್ಲ. ಇದಕ್ಕೆ ಕಾರಣ ತಿಳಿಯದು. ಬಹಳ ಪ್ರಮುಖ್ಯವಾದ ಈ ಯೋಜನೆ ವಿಚಾರದಲ್ಲಿ ಸರ್ಕಾರದವರು ತೀವ್ರ ಕಾರ್ಯಕ್ರಮವನ್ನು ಕೈಕೊಂಡರೆ ಬಹಳ ಒಳಿತು ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಚಿಕ್ಕಪುಟ್ಟ ಯೋಜನೆಗಳು ಬಹಳ ವಿಶೇಷ ರೀತಿಯಿಂದ ನಡೆಯಬೇಕಾಗಿದೆ. ಅದರಲ್ಲೂ ತುರ್ತುಪರಿಸ್ಥಿತಿಯಲ್ಲಿ ಕೋಟಿಗಟ್ಟಲೆ ಖರ್ಚುಮಾಡುವುದಕ್ಕೆ ಸಿದ್ಧರಿದ್ದೇವೆ ಎಂದು ಸರ್ಕಾರದವರು ಹೇಳುತ್ತಾ ಇದ್ದಾರೆ. ಆದರೆ ಎಷ್ಟುಮಟ್ಟಿಗೆ ಈ ಕೆಲಸ ತ್ವರಿತವಾಗಿ ಆಗುತ್ತದೆ ಎಂಬುದನ್ನು ಹೇಳಲಕ್ಕೆ ಅಸಾಧ್ಯ ಒಟ್ಟಾರೆ ಬರುವ ಬಡ್ಜೆಟ್ ಅಧಿವೇಶನದಲ್ಲಿ ಈ ವರ್ಷ ಚಿಕ್ಕಪುಟ್ಟ ನೀರಾವರೀ ಯೋಜನೆಯ ಒಗ್ಗೆ ವಿಂಗಡಿಸಿ ಇಟ್ಟ ಹಣ ಪೂರ್ಣ ಖರ್ಚಾಗುವಂತೆ ಸರ್ಕಾರ ಪ್ರಯತ್ನಮಾಡಿ ಆಹಾರದ ಉತ್ಪನ್ನವನ್ನು ಹೆಚ್ಚು ಮಾಡಿದರೆ ಬಹಳ ಸಂತೋಷದ ವಿಚಾರ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಒಟ್ಟಾರೆ ಚಿಕ್ಕ ನೀರಾವರಿ ಯೋಜನೆಗಳಿಷ್ಟಿವೆ ಅವುಗಳನ್ನೆಲ್ಲವನ್ನೂ ಕೈಗೊಂಡು ಮುಗಿಸುವ ಉತ್ಸಾಹ ನಮ್ಮ ಉಪ ಮಂತ್ರಿಗಳಲ್ಲಿರುವಂತೆ ಗೊತ್ತಾಗಿರುತ್ತದೆ. ಅವರು ಈ ಸಾಲಿನಲ್ಲಿ ಈ ಬಾಬಿಗೆ ತೆಗೆದಿಟ್ಟಿರುವ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುತ್ತೇವೆಂದು ನಮಗೇನೋ ಒಂದು ಖಾಸಗಿಯ ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ಅವರು ಕೊಟ್ಟಿರತಕ್ಕ ಭರವಸೆಗೆ ಅನುಗುಣವಾಗಿ ಅವರ ಕೆಲಸ ಕಾರ್ಯಗಳನ್ನೆಲ್ಲ ಯಶಸ್ವಿಯಾಗಿ ನಡೆದು ಒದಗಿಸಿರತಕ್ಕ ಹಣವೆಲ್ಲವೂ ಖರ್ಚಾಗಿ ನೀರಾವರಿ ಸೌಕರ್ಯವು ಜನರಿಗೆ ಹೆಚ್ಚು ಹೆಚ್ಚಾಗಿ ಸಿಗುವಂತಾಗಲಿ ಎಂತ ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ವೈ. ಮಂಚಯ್ಯ ಶೆಟ್ಟಿ.—

ಇನ್ನು ಲಿಫ್ಟ್ ಇರಿಗೇಷನ್ ವಿಚಾರದಲ್ಲಿ ಹೇಳುವುದಾದರೆ ಇದೂ ಕೂಡ ಈ ನೀರಾವರಿ ಯೋಜನೆಯ ಬಾಬಿನಲ್ಲಿ ಒಂದು ಬಹಳ ಪ್ರಾಮುಖ್ಯವಾದ ಯೋಜನೆಯಾಗಿದೆ. ಈ ಬಾಬಿನಲ್ಲಿ ನಮ್ಮ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಹೊಸದಾಗಿ 23 ಯೋಜನೆಗಳನ್ನು ಪರಿಶೀಲಿಸಿ ಅವುಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ಭಾಗದಲ್ಲಿ ಬೇಗ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಈ ಅನೇಕ ಯೋಜನೆಗಳಲ್ಲಿ ಯಾವ್ಯಾವುವು ಯೋಗ್ಯವಾಗಿರುತ್ತವೆಂಬುದನ್ನು ಬೇಗ ಪರಿಶೀಲನೆ ಮಾಡಿ ಅವುಗಳನ್ನು ಕೂಡಲೇ ಕೈಗೊಳ್ಳುವಂತೆ ತಿಳಿಸಬೇಕೆಂದು ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ ಸಹ ಲಿಫ್ಟ್ ಇರಿಗೇಷನ್ ಅನೇಕ ಕಾರ್ಯಗಳನ್ನು ನಡೆಸಲು ಅವಕಾಶವಿದೆ. ಅದನ್ನು ಸಹ ಕೂಡಲೇ ಪರಿಶೀಲನೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಡಿಸೇಲ್ ಮತ್ತು ಇಲೆಕ್ಟ್ರಿಕಲ್ ಪಂಪ್ ಸೆಟ್ಟುಗಳನ್ನು ರೈತರಿಗೆ ಸಾಲದ ರೂಪದಲ್ಲಿ ಒದಗಿಸತಕ್ಕ ವಿಚಾರ ಇವುಗಳನ್ನು ರೈತರಿಗೆ ಸುಲಭ ಕಂತುಗಳಲ್ಲಿ ಸಾಲದ ರೂಪದಲ್ಲಿ ಒದಗಿಸುತ್ತೇವೆಂದು ಆಶ್ವಾಸನ ಕೊಟ್ಟಿದ್ದಾರೆ. ಈ ಬಾಬಿಗೆ ಬಜೆಟ್ಟಿನಲ್ಲಿ ಸಾಕಷ್ಟು ಹಣವನ್ನು ಸಹ ಒದಗಿಸಿರುವುದಾಗಿ ತಿಳಿಸಿದ್ದಾರೆ. ಈ ಬಾಬುಗಳಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೆಚ್ಚು ಹೆಚ್ಚು ಆಸಕ್ತಿಯನ್ನು ತೋರಿಸಿ ಈ ಬಾಬಿಗೆ ಒದಗಿಸಿರುವ ಹಣವೇನಿದೆ ಅದನ್ನು ಪೂರ್ತಿಯಾಗಿ ಖರ್ಚುಮಾಡಿ ಜನಗಳಿಗೆ ಅನುಕೂಲವನ್ನು ಕಲ್ಪಿಸಲು ಪ್ರಯತ್ನಮಾಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಉತ್ಪಾದನೆಯ ವಿಚಾರದಲ್ಲಿ ಮಾನ್ಯ ಅರ್ಥಿಕ ಸಚಿವರು ಹಿಂದೆ ಈ ವಿಚಾರದಲ್ಲಿ ಮೈಸೂರು ರಾಜ್ಯ ಬಹಳ ಮುಂದಾಗಿತ್ತು, ಆದರೆ ಈಗ ಇದು ಬಹಳ ಹಿಂದೆ ಬಿದ್ದಿದೆ ಎಂತ ಹೇಳಿದ್ದಾರೆ. ಈ ದೃಷ್ಟಿಯಿಂದ ಶರಾವತಿ ವ್ಯಾಲಿಯಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿ ಕಾರ್ಯ ಬಹಳ ರಭಸದಿಂದ ಸಾಗುತ್ತಿದೆ. ಈ ಕಾರ್ಯದ ಮೊದಲನೇ ಹಂತವು 1963ರಲ್ಲಿ ಮುಗಿಯುವುದಾಗಿ ಹೇಳುತ್ತಿದ್ದರು. ಈ 1963 ರೊಳಗೆ ವಿದ್ಯುಚ್ಛಕ್ತಿ ಸರಬರಾಯಿಯನ್ನು ಈ ಯೋಜನೆಯಿಂದ ಮಾಡುವುದಾಗಿ ಈ ಹಿಂದೆ ಆಶ್ವಾಸನ ಕೊಟ್ಟಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. 1964ಕ್ಕೆ ಆದರೂ ನಮಗೆ ಆ ವಿದ್ಯುಚ್ಛಕ್ತಿ ಉತ್ಪತ್ತಿಯ ಕೆಲಸಕಾರ್ಯಗಳು ಪೂರೈಸಿ ವಿದ್ಯುಚ್ಛಕ್ತಿಯನ್ನು ನಮಗೆ ಒದಗಿಸಿದರೆ ಆಗಲೂ ಕೂಡ ನಾವು ಒಂದು ಸಮಾಧಾನಪಟ್ಟುಕೊಳ್ಳಬಹುದು. ಸರ್ಕಾರದವರು ಇನ್ನಾದರೂ ಈ ಬಾಬಿನಲ್ಲಿ ಹೊಗಳಿಸಿಕೊಳ್ಳುವಂತೆ ಕೆಲಸಗಳನ್ನು ತ್ವರಿತವಾಗಿ ಮುಂದುವರಿಸಬೇಕೆಂದು ಹೇಳುತ್ತೇನೆ. ಈ ಶರಾವತಿ ಯೋಜನೆಯೊಂದೇ ಅಲ್ಲದೆ ಇನ್ನೂ ಅನೇಕ ವಿದ್ಯುತ್ ಯೋಜನೆಗಳನ್ನು ಪರಿಶೋಧಿಸುತ್ತಿರುವುದಾಗಿ ಸರ್ಕಾರದವರು ತಿಳಿಸಿದ್ದಾರೆ. ಕಾಳೀ ನದಿ ವಿದ್ಯುತ್ ಯೋಜನೆಯನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವುದರಿಂದ ಅದನ್ನು ಬೇಗ ಆರಂಭಿಸಬೇಕೆಂದು ಹೇಳುತ್ತೇನೆ. ಇದು ಪ್ರಶಂಸನೀಯವಾದ ವಿಚಾರ. ಹೀಗೆ ವರಾಹ ನದಿಯ ವಿದ್ಯುತ್ ಯೋಜನೆ ಕೂಡ ಬಹಳ ಅನುಕೂಲವಾಗಿದೆ. ಇದು ಖರ್ಚಿನಲ್ಲಿ ಬಹಳ ಕಡಿಮೆಯಾಗಿಯೂ ವಿದ್ಯುತ್ ಉತ್ಪನ್ನದಲ್ಲಿ ಹೆಚ್ಚು ಉತ್ಪತ್ತಿ ಮಾಡತಕ್ಕಂಥ ಯೋಜನೆಯಾಗಿದೆ. ಇದು ಬಹಳ ಉತ್ತಮವಾದಂಥ ಯೋಜನೆಯಾಗಿದೆಯೆಂದು ಹೇಳುತ್ತೇನೆ. ಈ ಯೋಜನೆಗೆ ಸರ್ಕಾರದವರು ಪ್ರೋತ್ಸಾಹ ಕೊಟ್ಟು ಇದನ್ನು ಈ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡರೆ ಜನರಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆಂದು ಹೇಳುತ್ತೇನೆ.

ಈ ಸಾಲಿನ ಬಜೆಟ್ಟಿನಲ್ಲಿ ವಿದ್ಯಾಖಾತೆಗೆ 18 ಕೋಟಿ ರೂ. ಗಳನ್ನು ಒದಗಿಸಿದ್ದಾರೆ. ನಮ್ಮ ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ರಾಜ್ಯಾಂಗ ಘಟನೆಯಲ್ಲಿ ಹೇಳಿರುವಂತೆ ನಮ್ಮ ಸರ್ಕಾರದ ಉದ್ದೇಶವೂ ಕೂಡ ಅದೇ ಆಗಿದೆ ಎಂತ ಕಾಣುತ್ತೆ. ಆದರೆ ಈ ನೇಮಕ್ಕನುಸಾರವಾಗಿ ನಮ್ಮ ರಾಜ್ಯದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬಂದು ಒಂದೆರಡು ವರ್ಷಗಳಾದರೂ ಕೂಡ ಇದನ್ನು ಯೋಗ್ಯರೀತಿಯಲ್ಲಿ ನೆರವೇರಿಸಿದ್ದಾರೆಯೇ ಎಂಬ ವಿಚಾರ ಪರಿಶೀಲಿಸಬೇಕಾಗಿದೆ. ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರಿರುವುದಿಲ್ಲ. ಅನೇಕ ಕಡೆ ಶಾಲೆಗಳನ್ನು ಸ್ಥಾಪಿಸಿದ್ದರೂ ಅವುಗಳಿಗೆ ಯೋಗ್ಯವಾದ ಕಟ್ಟಡಗಳಿಲ್ಲ. ಹಳ್ಳಿಗಳಲ್ಲಿ ಶಾಲೆಗಳನ್ನು ಕಟ್ಟಬೇಕೆಂದರೆ ಒಂದು ರೂಮಿಗೆ ಒಂದು ಸಾವಿರ ರೂ.ಗಳ ಗ್ರಾಂಟ್ ಕೊಡಲಾಗುತ್ತದೆಂದು ಸರ್ಕಾರದವರು ಹೇಳುತ್ತಾರೆ. ಈ ಸಾವಿರ ರೂ. ಗಳಲ್ಲಿ ಕಟ್ಟಡ ಕಟ್ಟಿಸಲು ಹೇಗೆ ಸಾಧ್ಯವಿದೆ? ಈ ಕಟ್ಟಡದ ಪಾಡೇ ಹೀಗಾದ ಮೇಲೆ ಇನ್ನು ಆ ಶಾಲಾ ಬಾಲಕರಿಗೆ ವಿದ್ಯಾರ್ಜನೆಗೆ ಅವಕಾಶವಾದರೂ ಎಲ್ಲಿದೆ? ಈ ತೊಂದರೆಗಳನ್ನು ಗಮನಿಸಿ ನನ್ನ ಅನೇಕ ಮಿತ್ರರಾಗಲೇ ಈ ಎಲಿಮೆಂಟರಿ ಶಾಲಾ ಕಟ್ಟಡಗಳಿಗೆ ಸರ್ಕಾರ ಹೆಚ್ಚು ಹಣವನ್ನೊದಗಿಸಬೇಕು ಎಂದು ಹೇಳಿದ್ದಾರೆ. ಆದರೆ ಇದುವರೆಗೂ ಸರ್ಕಾರದವರು ಯಾವ ಕ್ರಮವನ್ನೂ ಕೈಗೊಂಡಿರುವಂತೆ ಕಾಣುವುದಿಲ್ಲ. ಆದರೆ ಈಗ ಬಜೆಟ್ಟಿನಲ್ಲಿ ಒದಗಿಸಿರತಕ್ಕ ಹಣದಲ್ಲಿ ಹೆಚ್ಚಿನ ಭಾಗವನ್ನು ನಮ್ಮ ಚಿಕ್ಕ ಮಕ್ಕಳ ವಿದ್ಯಾಭಿವೃದ್ಧಿಗೆ ಮತ್ತು ಪ್ರಾಥಮಿಕ ಶಾಲಾ ಕಟ್ಟ

ಗಳಿಗೆ ವಿನಿಯೋಗಿಸಬೇಕಾಗಿದೆ. ಮೇಲಾಗಿ ಶಿಕ್ಷಕರ ಸಂಖ್ಯೆ ಕೂಡ ಇನ್ನೂ ಹೆಚ್ಚಾಗಬೇಕಾಗಿದೆ. ಇಷ್ಟಾದರೇನೆ ನಮ್ಮ ಈ ಕಡ್ಡಾಯ ಶಿಕ್ಷಣ ಯೋಜನೆ ಯಶಸ್ವಿಯಾಗುತ್ತದೆ. ಆದುದರಿಂದ ಈ ಎರಡು ಕಾರ್ಯಗಳಿಗೂ ಸರ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡಲೇಬೇಕೆಂದು ನಾನು ಅತಿ ದೈನ್ಯದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಖಾಸಗೀ ಜನರು ಮುಂದೆ ಬಂದು ಹೈಸ್ಕೂಲುಗಳನ್ನು ತೆರೆಯುವುದಾದರೆ ಸರ್ಕಾರದವರು ಅದಕ್ಕೆ ತಕ್ಕ ಹುಕುಮನ್ನು ದಯಪಾಲಿಸುವುದಾಗಿ ಅಪ್ಪಣೆ ಕೊಡಿಸಿದ್ದಾರೆ. ಆದರೆ ಹಳ್ಳಿಗಾಡುಗಳಲ್ಲಿ ಹೈಸ್ಕೂಲುಗಳನ್ನು ತೆರೆಯಬೇಕೆಂದರೆ ಖಾಸಗೀ ಜನರಿಗೆ ಬಹಳ ತೊಂದರೆಯಿದೆ; ಕಷ್ಟಗಳಿವೆ. ಖಾಸಗೀ ಹೈಸ್ಕೂಲುಗಳನ್ನು ತೆರೆದರೆ ಪ್ರಥಮತಃ ಅವುಗಳಿಗೆ ಮೊದಲನೆಯ ವರ್ಷ ಸರ್ಕಾರ ಗ್ರಾಂಟನ್ನು ಕೊಡುವುದಿಲ್ಲ. ಆಗ ಆ ಮ್ಯಾನೇಜ್‌ಮೆಂಟಿನವರು ಅದಕ್ಕೆ ತಗಲತಕ್ಕ ವೆಚ್ಚವನ್ನು ಜನಗಳಿಂದ ವಸೂಲ್ಮಾಡಿ ಆ ಸ್ಕೂಲುಗಳನ್ನು ನಡೆಸುವುದೆಂದರೆ ಬಹಳ ಕಷ್ಟವಿದೆ. ಇಷ್ಟೇ ಅಲ್ಲದೆ ಖಾಸಗೀ ಜನರು ಹೈಸ್ಕೂಲುಗಳನ್ನು ತೆರೆಯಲು ಮುಂದೆ ಬಂದರೆ ಅವರು ಸರ್ಕಾರದ ಗ್ರಾಂಟ್-ಇನ್-ಏಯ್ಡ್ ಕೋಡಿನ ರೂಲ್ಸ್ ಪ್ರಕಾರ 10 ಸಾವಿರ ರೂ. ಗಳನ್ನು ಡಿಪಾಜಿಟ್ ಇಡಬೇಕು. ಈ ಡಿಪಾಜಿಟ್ ಮೊದಲನೆಯ ವರ್ಷ ಇಷ್ಟು—ಎರಡನೇ ವರ್ಷ ಇಷ್ಟು ಎಂತ ವಿಧಾಯಕ ಮಾಡಿ ಕಡೆಗೆ ಇದು 10 ಸಾವಿರ ಡಿಪಾಜಿಟ್ ಇಟ್ಟರೇನೇ ಸರ್ಕಾರ ಇದಕ್ಕೆ ಅನುಮತಿ ಕೊಡುವುದು. ಹೀಗೆ ಖಾಸಗೀ ವಿದ್ಯಾ ಸಂಸ್ಥೆಗಳು ಒಂದು ವರ್ಷದ ಸಂಪೂರ್ಣ ವೆಚ್ಚಗಳನ್ನು ವಹಿಸಿ ಸರ್ಕಾರದಲ್ಲಿ ಬೇರೆ ಸೆಕ್ಯೂರಿಟೀ ಡಿಪಾಜಿಟ್ಟು ಇತ್ಯಾದಿಗಳನ್ನು ಕೊಟ್ಟು ಆ ವಿದ್ಯಾ ಸಂಸ್ಥೆಗಳನ್ನು ಯೋಗ್ಯ ರೀತಿಯಲ್ಲಿ ನಡೆಸಬೇಕೆಂದರೆ, ಅದರಲ್ಲೂ ವಿದ್ಯಾ ಇಲಾಖೆಯವರು ಹಾಕತಕ್ಕ ಷರತ್ತುಗಳನ್ನು ಅನುಸರಿಸಿ ಕೆಲಸ ಮಾಡಬೇಕೆಂದರೆ ಬಹಳ ಕಷ್ಟವಿದೆ. ಹೀಗೆ ಈ ಗ್ರಾಂಟ್-ಇನ್-ಏಯ್ಡ್ ಕೋಡಿನ ರೂಲ್ಸುಗಳು ಬಹಳ ಕಠಿಣವಾಗಿರುವುದರಿಂದ ಖಾಸಗೀ ಜನರು ಮುಂದೆ ಬರಲು ತುಂಬಾ ಕಷ್ಟವಿದೆ. ಆದಕಾರಣ ಗ್ರಾಂಟ್-ಇನ್-ಏಯ್ಡ್ ರೂಲ್ಸುಗಳನ್ನು ಸ್ವಲ್ಪ ಸಡಿಲ ಮಾಡಿ ಹಳ್ಳಿಗಾಡಿನಲ್ಲಿ ಹಾಗೂ ಮಲೆನಾಡಿನಲ್ಲಿ ಹೆಚ್ಚು ಹೆಚ್ಚಾಗಿ ಹೈಸ್ಕೂಲುಗಳನ್ನು ತೆರೆಯುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬೇಕೆಂದು ನಾನೀ ಸಂದರ್ಭದಲ್ಲಿ ವಿದ್ಯಾ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಚಾರ :

ಅಧ್ಯಕ್ಷರು.—ಕಾಲೇಜುಗಳ ವಿಚಾರವೇನು ಇಲ್ಲವೋ ?

ಶ್ರೀ ವೈ. ಮಂಜಯ್ಯಶೆಟ್ಟಿ.—ಕಾಲೇಜುಗಳ ವಿಚಾರವೂ ಸಹ ಅಷ್ಟೇ ಮುಖ್ಯವಾದುದು. ನಾನಾಗಲೇ ಹೇಳಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪ್ರಾಥಮಿಕ ಹಾಗೂ ಹೈಸ್ಕೂಲುಗಳನ್ನು ತೆರೆದ ಪಕ್ಷದಲ್ಲಿ ಆ ವಿದ್ಯಾರ್ಥಿಗಳೆಲ್ಲ ಅಲ್ಲಿ ಪಾಸಾದ ನಂತರ ಅವರು ಕಾಲೇಜು ವ್ಯಾಸಂಗಕ್ಕೆ ಬಹಳ ದೂರ ಪ್ರದೇಶಗಳಿಗೆ ಹೋಗಬೇಕಾಗಿದೆ. ಅದು ಬಹಳ ಕಷ್ಟ. ಈ ಕಷ್ಟವನ್ನು ನಿವಾರಣೆ ಮಾಡಲು, ನಮ್ಮ ಜನರನ್ನು ವಿದ್ಯಾವಂತರನ್ನಾಗಿ ಮಾಡಲು ಸರ್ಕಾರದವರು ಕನಿಷ್ಟಪಕ್ಷ ಒಂದೊಂದು ತಾಲ್ಲೂಕಿಗೆ ಒಂದೊಂದು ಕಾಲೇಜನ್ನು ಸ್ಥಾಪಿಸಲೇಬೇಕು, ಇದು ಬಹಳ ಅಗತ್ಯವಾದುದೇ. ಈಗ ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ ಮಣಿಪಾಲ್‌ನ ದಿ ಅಕ್ಯಾಡೆಮಿ ಆಫ್ ಜನರಲ್ ಎಜುಕೇಷನ್ ನವರು ಬರುವ ವರ್ಷ ಒಂದು ಕಾಲೇಜನ್ನು ತೆರೆಯಲು ನಿರ್ಧರಿಸಿದ್ದಾರೆ. ಆದಕ್ಕಾಗಿ ಒಬ್ಬ ಮಹನೀಯರು 2 ಲಕ್ಷ ರೂ.ಗಳನ್ನು ದಾನಕೊಟ್ಟಿದ್ದಾರೆ. ನಮ್ಮ ಇಡೀ ಕರ್ನಾಟಕದಲ್ಲೇ ಒಬ್ಬ ಮಹನೀಯರು 2 ಲಕ್ಷ ರೂ.ಗಳನ್ನು ದಾನವಾಗಿ ಕೊಟ್ಟಿರತಕ್ಕುದು ಒಂದು ಚರಿತ್ರಾರ್ಹವಾದ ಮಾತಾಗಿದೆ.

ಶ್ರೀಯುತ ಭಂಡಾರಕರ್ ಅವರು ಕುಂದಾಪುರದವರು. ಅವರು ಮಾಡಿದ ಸಹಾಯದಿಂದ ಕುಂದಾಪುರದಲ್ಲಿ ಬರುವ ವರ್ಷ ಕಾಲೇಜ್ ಆಗುವಂತಾಯಿತು. ಅದರ ಮೇಲ್ವಿಚಾರಣೆಯನ್ನು Academy of general education, Manipal, ಇವರು ವಹಿಸಿಕೊಳ್ಳಲು ಒಪ್ಪಿರುತ್ತಾರೆ. ಕಟ್ಟಡ ಕೆಲಸ ತ್ವರಿತವಾಗಿ ನಡೆಯುತ್ತಾ ಇದೆ. ಸರಕಾರದವರು ಕಾಲೇಜಿಗೆ ಹೆಚ್ಚಿನ ಬೆಂಬಲಕೊಟ್ಟು ಬರುವ ವರ್ಷವೇ ಕಾಲೇಜ್ ಆಗುವಂತೆ ಅಪ್ಪಣೆ ಕೊಡಿಸಬೇಕಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವೆಷ್ಟ್‌ಕೋಸ್ಟ್ ರೋಡ್ ಬಗ್ಗೆ ಹಣ ಖರ್ಚಾಗಲಿಕ್ಕೆ ಇದೆ. ಹಣ ಪೂರ್ಣವಾಗಿ ನಮಗೆ ಕೇಂದ್ರ ಸರ್ಕಾರದಿಂದ ಬರುವಂಥಾದ್ದು. ಈ ರಸ್ತೆ ಕೆಲಸ ಪ್ರಾರಂಭವಾಗಿ ಮೂರು ನಾಲ್ಕು ವರ್ಷವಾದಾಗ್ಯೂ ಕೆಲಸ ಸಂಪೂರ್ಣವಾಗಲಿಲ್ಲ. ಬಹಳ ತ್ವರಿತದಿಂದ ಕೆಲಸವಾಗುತ್ತಿದೆ. ಕೆಲವು ಕಡೆಗಳಲ್ಲಿ 150 ಅಡಿ, ಕೆಲವು ಕಡೆಗಳಲ್ಲಿ 80 ಅಡಿ ಸ್ಥಳವನ್ನು ರಸ್ತೆಯ ಬಗ್ಗೆ ವಶಪಡಿಸಿಕೊಳ್ಳುವ ಸಂಬಂಧವಲ್ಲಿ ಹೆಚ್ಚಿನಸ್ಥಳ ಅಕ್ವಿಜಿಷನ್ ಆಗಬೇಕಾಗಿದೆ. ಅಕ್ವಿಜಿಷನ್ ಆಗಿ ಸರ್ಕಾರದವರು ವಶಪಡಿಸಿಕೊಳ್ಳುವವರೆಗೆ ಕಾದರೆ ರಸ್ತೆಯಾಗಲು 8—10 ವರ್ಷವಾದೀತು. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಜನರು ಮೊದಲು ರಸ್ತೆ ಆಗಲಿ, ನಮಗೆ ಅಕ್ವಿಜಿಷನ್ ಅದನಂತರ ಹಣ ಕೊಡಬಹುದು ಎಂದು ತಾವು

ಶ್ರೀ ವೈ. ಮಂಜಯ್ಯ ಶೆಟ್ಟಿ.—
ತಾವಾಗಿಯೇ ರಸ್ತೆಗೆ ಬೇಕಾಗುವ ಸ್ಥಳವನ್ನು ಬಹಳ ಪ್ರೀತಿಯಿಂದ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದಾರೆ. ಹೀಗಿದ್ದರೂ ಅಕ್ವಿಜಿಷನ್ ಕೆಲಸ ಬಹಳ ತ್ವರಿತದಿಂದ ಆಗುತ್ತಿಲ್ಲ ನಮ್ಮ ಜಿಲ್ಲೆಯಲ್ಲಿ ಕೆಲಸಮಾಡಿದ ಅಕ್ವಿಜಿಷನ್ ಆಫೀಸರು ಅಕ್ವಿಜಿಷನ್ ರಿಕಾರ್ಡ್‌ಗಳನ್ನು ಯೋಗ್ಯ ರೀತಿಯಿಂದ ತಯಾರುಮಾಡಿ ಕೊಟ್ಟಾಗ್ಯೂ ಕೂಡ ಸ್ಥಳದ ಬಗ್ಗೆ ಹಣ ಆದಷ್ಟು ಬೇಗ ಸಿಕ್ಕಲಿ ಎಂದು ಕೆಲಸಮಾಡಿದರೂ ಕೂಡ ರಿಕಾರ್ಡ್ ಮೈಸೂರು ಡಿವಿಜನಲ್ ಕಮಿಷನರ್ ಆಫೀಸಿಗೆ ಬಂದು ಅಲ್ಲಿಂದ ಸೆಕ್ರೆಟೇರಿಯಟ್ಟಿಗೆ ಕಳಿಸಿದ್ದರೂ, ಅಲ್ಲಸಲ್ಲದ ತಕ್ಕರಾರುಗಳನ್ನು ಹೇಳಿ ನಮ್ಮ ಜಿಲ್ಲೆಯ ಪ್ರತಿಯೊಂದು ಅಕ್ವಿಜಿಷನ್ ರಿಕಾರ್ಡೂ ವಾಪಸುಬಂದಿವೆ. ಬಹುಶಃ ಇದೇ ಅನುಭವ ಉತ್ತರ ಕರ್ನಾಟಕದ ಜಿಲ್ಲೆಯವರಿಗೂ ಇರಬಹುದು. ಈ ರೀತಿಯಾಗಬಾರದು. ಹೀಗಾದರೆ ಯಾವ ಉದಾರಬುದ್ಧಿಯಿಂದ ಹಣವನ್ನು ಪಡೆಯದೆ, ನಮ್ಮ ದೇಶದ ಅಭಿವೃದ್ಧಿಗೆ ಸಹಾಯವಾಗುವ ಒಂದು ರಸ್ತೆ ಆಗಬೇಕೆಂದು ಜನರು ಪ್ರೀತಿಯಿಂದ ಬಿಟ್ಟುಕೊಟ್ಟ ಕೆಲಸಕ್ಕೆ ಸರ್ಕಾರದವರು ಈ ರೀತಿ ವಿಳಂಬಮಾಡಿ ಅಕ್ವಿಜಿಷನ್ ಹಣ ಕೊಡದೆ ಇದ್ದರೆ, ಜನರಿಗೆ ಯಾವ ರೀತಿಯ ಭಾವನೆಯುಂಟಾಗುತ್ತದೆಂಬುದನ್ನು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ರಸ್ತೆ ಕೆಲಸ ಯೋಗ್ಯರೀತಿಯಿಂದ ಆಗುವಂತೆಮಾಡಿದ ಬಡ ರೈತರಿಗೆ ಬಡ ಜನರಿಗೆ ಅಕ್ವಿಜಿಷನ್ ಹಣ ಆದಷ್ಟು ಬೇಗ ಕೊಡುವಂತೆ ಸರ್ಕಾರದವರು ಅಪ್ಪಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ.

ರಸ್ತೆ ಮತ್ತು ಸಂಕಗಳ ಕೆಲಸದ ಬಗ್ಗೆ ಎಷ್ಟೆಷ್ಟು ಹಣವನ್ನೊದಗಿಸಿದ್ದಾರೆಂದು ನೋಡಿದೆ. ನಮ್ಮ ಜಿಲ್ಲೆಯ ಬಗ್ಗೆ ಬಹಳ ಅಸಡ್ಡೆ ತೋರಿಸಿದಂತೆ ನನಗೆ ಕಂಡು ಬರುತ್ತದೆ. ಕಳೆದ ವರ್ಷ ಯಾವ ಯಾವ ರಸ್ತೆ ಮತ್ತು ಸಂಕಗಳ ಕೆಲಸಗಳಿಗೆ ಹಣವನ್ನು ಬಡ್ಜೆಟ್ಟಿನಲ್ಲಿಟ್ಟಿದ್ದರೋ, ಅದು ಈ ವರ್ಷದ ಬಡ್ಜೆಟ್ಟಿನಲ್ಲಿ—Printing mistake ಇರಲಾರದು ತಪ್ಪಿಹೋಗಿದೆ. ಇದು ಸರ್ಕಾರದ ತಪ್ಪು ಎಂದು ಹೇಳಲು ಆಗುವುದಿಲ್ಲ. ಮಾನ್ಯ ಲೋಕೋಪಯೋಗಿ ಶಾಖೆಯ ಮಂತ್ರಿಗಳಿಗೆ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿ ಕೊಟ್ಟರೆ ಯಾವ ರಸ್ತೆ, ಅಥವಾ ಸಂಕಗಳನ್ನು ತೆಗೆದುಕೊಳ್ಳುತ್ತಾರೆ? ಅವರ ಕಷ್ಟವನ್ನೂ ನಾವು ಒಪ್ಪತಕ್ಕದ್ದೇ. ಆದರೆ ಒಂದು ಸಾರಿ ಬಡ್ಜೆಟ್ಟಿನಲ್ಲಿ ಸೇರಿದ್ದ ಮಲೆನಾಡು ಕ್ಷೇತ್ರದಲ್ಲಿ ಆಗತಕ್ಕ ಪ್ರಾಮುಖ್ಯವಾದ ರಸ್ತೆ ಕೆಲಸಗಳನ್ನೂ ಕೈ ಬಿಟ್ಟರೆ ಅದರಿಂದ ಅಲ್ಲಿಯ ಜನರಿಗೆ ಕಷ್ಟ. ಎಲ್ಲ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುವುದಿಲ್ಲ. ತುರ್ತು ಪರಿಸ್ಥಿತಿಯಿಂದಾಗಿ, ವ್ಯವಸಾಯ, ನೀರಾವರಿ, ಇವುಗಳ ಬಗ್ಗೆ ಹೆಚ್ಚು ಹಣವನ್ನು ವಿನಿಯೋಗಿಸಬೇಕಾದ ಸಂದರ್ಭವಿರುವುದರಿಂದ ರಸ್ತೆಗಳ ಬಗ್ಗೆ ಅನಾವಶ್ಯಕವಾಗಿ ಹಣ ಉಪಯೋಗಿಸಿ ಎಂದು ಹೇಳುವುದಿಲ್ಲ. ಹಿಂದಿನ ವರ್ಷಗಳಲ್ಲಿ ಮಲೆನಾಡು ಪ್ರದೇಶಗಳಲ್ಲಿ, ಹಿಂದುಳಿದ ಪ್ರದೇಶಗಳಲ್ಲಿ ಯಾವ ಯಾವ ಕೆಲಸವಾಗಬೇಕೆಂದು ಬಡ್ಜೆಟ್ಟಿನಲ್ಲಿ ಸೇರಿಸಲಾಗಿತ್ತೋ, ಅದಕ್ಕೆ ಬೇಕಾದ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿಕೊಟ್ಟು ಆ ಕೆಲಸಗಳನ್ನು ತಾವು ದಯಮಾಡಿಟ್ಟು ಮುಂದುವರಿಸುವಂಥ ದೊಡ್ಡ ಬುದ್ಧಿ ಮಾಡಿದರೆ ಬಹಳ ಉಪಕಾರವಾಗುತ್ತದೆ.

ಇನ್ನು rural Communications ವಿಶೇಷ ರೀತಿಯಿಂದ ನಡೆದುಹೋಯಿತು. ಸಾಧಾರಣ ಪ್ರತಿ ತಾಲ್ಲೂಕಿನಲ್ಲಿಯೂ 50 ಮೈಲಿ ಉದ್ದದ ರಸ್ತೆಯನ್ನು ಮಾಡಬೇಕು ಎನ್ನುವುದರ ಪ್ರಕಾರ ಕೆಲಸ ನಡೆದಿದೆ. ಕೆಲವು ಕಡೆ 50ಕ್ಕಿಂತ ಹೆಚ್ಚು ಸಹ ಆಗಿದೆ. ಆದರೆ ಈ ಕೆಲಸವನ್ನು ನಿಲ್ಲಿಸಿ ಎಂದು ಹುಕುಂ ಬಂದುದರಿಂದ ಎಷ್ಟೋ ಕೆಲಸಗಳು ಅರ್ಧ ಆಗಿವೆ. ಪ್ರಾರಂಭ ಮಾಡಿರುವ ಕೆಲಸವನ್ನಾದರೂ ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯವಾದ ಹುಕುಮನ್ನು ಕೊಟ್ಟರೆ ಬಹಳ ಉತ್ತಮ.

ನಮ್ಮ ಈ ಕರಾವಳಿಯಲ್ಲಿ ಬಂದರುಗಳ ಅಭಿವೃದ್ಧಿ ಆಗತಕ್ಕದ್ದು ಅವಶ್ಯಕ. ಮೂರನೆಯ ಯೋಜನೆಯಲ್ಲಿ ಸಣ್ಣ ಬಂದರುಗಳ ಅಭಿವೃದ್ಧಿಯ ಬಗ್ಗೆ ವಿನಿಯೋಗಿಸುವ ಹಣದ $\frac{1}{4}$ ಅಂಶವಾದರೂ ಹಣ ಇಷ್ಟರವರೆಗೂ ಖರ್ಚಾಗಿಲ್ಲವೆಂದು ಬಹಳ ಪಶ್ಚಾತ್ತಾಪದಿಂದ ಹೇಳಬೇಕಾಗಿದೆ. ಕುಂದಾಪುರ, ಹೊನ್ನಾವರ, ಮಲ್ಪೆ, ಇಂತಹ ಚಿಕ್ಕ ಪುಟ್ಟ ಬಂದರುಗಳ ಅಭಿವೃದ್ಧಿಯಾಗತಕ್ಕದ್ದು ಅತ್ಯವಶ್ಯ. ಈ ಬಗ್ಗೆ ಹಣವನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇಟ್ಟಾಗ್ಯೂ ಕೆಲಸ ಬೇಕಾದಷ್ಟು ತ್ವರಿತವಾಗಿ ಸಾಗದೆ ಇದೆ. ಈ ಕೆಲಸ ತ್ವರಿತವಾಗಿ ನಡೆದು ಬಂದರುಗಳ ಅಭಿವೃದ್ಧಿಯಾಗುವಂತಹ ಕಾರ್ಯವನ್ನು ಕೈಗೊಳ್ಳಬೇಕೆಂದು ಸಂಬಂಧಪಟ್ಟ ಮಂತ್ರಿವರ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಮೀನಿನ ವಿಚಾರ. 200 ಮೈಲಿ ಉದ್ದದ ಕರಾವಳಿಯನ್ನು ದೇವರು ನಮ್ಮ ದೇಶಕ್ಕೆ ದಯಪಾಲಿಸಿದ್ದಾನೆ. ಹಿಂದೆ ಹಳೆಯ ಮೈಸೂರಿನವರು ಕರಾವಳಿಗೆ ಹೋಗಲು ಸಣ್ಣ ದಾರಿಯನ್ನು ಕೊಡಬೇಕೆಂದು ಕೇಳಿದಾಗ ಸಿಕ್ಕಲಿಲ್ಲ. ನಾವೆಲ್ಲ ಪುಣ್ಯಾತ್ಮರು ಬಂದುದರಿಂದ (ನಗು) 200 ಮೈಲಿ ಉದ್ದದ ಕರಾವಳಿ ಮೈಸೂರು ರಾಜ್ಯಕ್ಕೆ ಬಂದಿದೆ. ಇಲ್ಲಿ ಮೀನಿನ ಸಂಪತ್ತು ವಿಶೇಷ

ವಾಗಿದೆ. ಈ ಬಗ್ಗೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟು ಒಳ್ಳೆಯ ರೀತಿಯಿಂದ ಅಭಿವೃದ್ಧಿ ಮಾಡಿದರೆ ನಮ್ಮ ದೇಶ ಸಂಪದಭ್ಯುದಯ ದೇಶವಾಗಲು ಏನೂ ಸಂದೇಹವಿಲ್ಲ. ಕಳೆದ ವರ್ಷದ ಬಡ್ಜೆಟ್ಟಿನಲ್ಲಿ ಈ ಬಗ್ಗೆ ಬರೀ 22 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದರು. ಕಡೆಗೆ ಸ್ವಲ್ಪ ಒತ್ತಾಯ ಮಾಡಿದ ಮೇಲೆ 17 ಲಕ್ಷ ಹೆಚ್ಚಿಗೆ ಎಂದರೆ ಒಟ್ಟು 39 ಲಕ್ಷ ರೂಪಾಯಿಗಳನ್ನು ಕಳೆದ ವರ್ಷ ಬಡ್ಜೆಟ್ಟಿನಲ್ಲಿ ಕೊಟ್ಟಿದ್ದಾರೆ. ಈ ಕೆಲಸ ಒಳ್ಳೆಯ ರೀತಿಯಿಂದ ನಡೆಯುವಂತೆ ಈ ವರ್ಷವೂ ಸಹ ಹೆಚ್ಚಿನ ಹಣ ವನ್ನು ಒದಗಿಸಿಕೊಟ್ಟು ಮೀನಿನ ಸಂಪತ್ತನ್ನು ಅಭಿವೃದ್ಧಿ ಪಡಿಸುವಂಥ ಕಾರ್ಯ ಕ್ರಮಗಳನ್ನು ತೆಗೆದು ಕೊಳ್ಳುವುದು ಅವಶ್ಯಕ. ಇದರಲ್ಲಿಪ್ರಾಮುಖ್ಯವಾಗಿ ನಮ್ಮ ಬೆಸ್ತರು ಬಹಳ ಹಿಂದಿನ ಕ್ರಮದಲ್ಲಿ ಮೀನನ್ನು ಹಿಡಿಯುವ ವ್ಯವಸ್ಥೆಯನ್ನಿಟ್ಟುಕೊಂಡಿದ್ದಾರೆ. ಅದನ್ನು ಬದಲಾಯಿಸಿ ಹೆಚ್ಚಿನ ಬೆಸ್ತರಿಗೆ ತರಪೇತನ್ನು ಕೊಟ್ಟು, ಯಾಂತ್ರಿಕದೋಣಿಯ ಮುಖಾಂತರ ಮೀನನ್ನು ಹಿಡಿಯುವ ಕ್ರಮವನ್ನು ಅಭ್ಯಾಸ ಮಾಡಿಸಬೇಕಾಗಿದೆ. ಈ ಬಗ್ಗೆ ಈಗಾಗಲೇ ವರ್ಷಂಪ್ರತಿ ಬರೇ 80 ಜನರನ್ನು ಮಾತ್ರ ತರಪೇತು ಮಾಡುತ್ತಿದ್ದಾರೆ. ಇದು ಸಾಲದು. ಒಂದು ಒಂದೂವರೆಲಕ್ಷದ ಮೇಲ್ಪಟ್ಟ ಜನ ಸಂಖ್ಯೆ ಈ ಕಸಬಿನಲ್ಲಿದ್ದಾರೆ. ಪ್ರತಿ ವರ್ಷ 80—90 ಜನರಿಗೆ ತರಪೇತಿ ಕೊಡುತ್ತ ಹೋದರೆ ಒಂದು ಲಕ್ಷ ಜನರಿಗೆ ಈ ಕಸಬಿನಲ್ಲಿರುವವರಿಗೆ ತರಬೇತಿಕೊಡಲು ಬಹುಶಃ ಶ್ರೀಮಾರ್ಕಮುಕ್ಕಣ್ಣಪ್ಪನವರ ಭಾಷೆಯಲ್ಲಿ ಹೇಳುವುದಾದರೆ ಮೊಮ್ಮಗನ ಕಾಲಕ್ಕೆ ಆಗಬಹುದು. (ನಗು). ಇದಕ್ಕೆ ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಒಂದು ವರ್ಷಕ್ಕೆ ಕನಿಷ್ಟ ಪಕ್ಷ 500 ಜನರಿಗಾದರೂ ಯಾಂತ್ರಿಕ ರೀತಿಯಲ್ಲಿ ಮೀನನ್ನು ಹಿಡಿಯುವ ಕ್ರಮವನ್ನು ಕಲ್ಪಿಸಿಕೊಡುವಂತಹ ವ್ಯವಸ್ಥೆ ಮಾಡಬೇಕು.

6 p.m.

ಇಲ್ಲಿರುವ ಬೆಸ್ತರ ಜಾತಿಯ ಜನರಿಗೆ ಸರಿಯಾದ ಉತ್ತೇಜನ ಸಿಕ್ಕದಿರುವುದರಿಂದ ಅವರು ಬಹಳ ಕಷ್ಟದಿಂದ ಜೀವನವನ್ನು ನಡೆಸಬೇಕಾಗಿದೆ. ಅವರ ಕಷ್ಟವನ್ನು ನೋಡಿ ಕಳೆದ ವರ್ಷ ಸುಮಾರು ಹತ್ತು ಲಕ್ಷ ರೂಪಾಯಿಗಳಷ್ಟು ಸಾಲವನ್ನು, ಪ್ರತಿ ಕುಟುಂಬದವರಿಗೂ 200 ರೂಪಾಯಿಯಂತೆ ಸುಲಭ ಕಂತಿನಲ್ಲಿ, ಸುಲಭ ಬಡ್ಡಿ ದರದಲ್ಲಿ ಕೊಟ್ಟು ಸಹಾಯ ಮಾಡಿದ್ದಾರೆ. ಇದನ್ನು ಮುಂದೆಯೂ ಮುಂದುವರಿಸಿ ಇನ್ನೂ ಸುಲಭ ದರದ ಬಡ್ಡಿಯ ಮೇರೆ ಸುಲಭ ಕಂತಿನಲ್ಲಿ ಸಹಾಯ ಕೊಡಲು ಹಣವನ್ನೂ ಬಡ್ಜೆಟ್ಟಿನಲ್ಲಿ ಒದಗಿಸಿ ಈ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಬರುವಂತೆ ಅರ್ಥಿಕಮಂತ್ರಿಗಳು ಸಹಾಯ ಮಾಡಬೇಕೆಂದು ಕೋರುತ್ತೇನೆ.

ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇವೆ.

Mr. SPEAKER.—The house will now rise and meet again at 1 P.M. on Tuesday the 5th March 1963.

The house adjourned at Five Minutes past Six of the Clock to meet again at One of the Clock on Tuesday, the 5th March 1963.